

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಮೇ 1 ಭಾನುವಾರ 2022

ಸಂಪುಟ: 43 | ಸಂಚಿಕೆ: 16 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಶುಭಾಶಯಗಳು



ಕಾರ್ಮಿಕರ ದಿನಾಚರಣೆಯ ಅಂಗವಾಗಿ ನಾಡಿನ ಸಮಸ್ತ ಕಾರ್ಮಿಕರಿಗೆ ಶುಭಾಶಯಗಳು

ಬಿಡುವು

ಕಾರ್ಮಿಕ ದಿನಾಚರಣೆ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ 2.5.2022ರ ಸೋಮವಾರದ 'ಮೈಸೂರು ಮಿತ್ರ' ಸಂಚಿಕೆ ಪ್ರಕಟವಾಗುವುದಿಲ್ಲ.

–ವ್ಯವಸ್ಥಾಪಕರು

ನ್ಯಾಯಾಲಯಗಳ ವ್ಯವಹಾರದಲ್ಲಿ ಸ್ಥಳೀಯ ಭಾಷೆಗಳಿಗೆ ಆದ್ಯತೆ ನೀಡಬೇಕಿದೆ

● ಮುಖ್ಯಮಂತ್ರಿಗಳು, ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಸಮಾವೇಶದಲ್ಲಿ ಪ್ರಧಾನಿ ಮೋದಿ ಅಭಿಮತ ● ಹಳೆಯ ಅನುಪಯುಕ್ತ ಕಾನೂನುಗಳ ರದ್ದುಪಡಿಸಲು ಸಿಎಂಗಳಿಗೆ ಸಲಹೆ

ನವದೆಹಲಿ, ಏ.30–ದೇಶಾದ್ಯಂತ ಹಿಂದಿ ರಾಷ್ಟ್ರಭಾಷೆ ಎಂಬ ವಿಚಾರದಲ್ಲಿ ಪರ–ವಿರೋಧ ಚರ್ಚೆಗಳು ನಡೆಯುತ್ತಿವೆ. **ಇತ್ತ ಪ್ರಧಾನಿ ನರೇಂದ್ರ ಮೋದಿಯವರು, ನ್ಯಾಯಾಲಯಗಳ ವ್ಯವಹಾರದಲ್ಲಿ ಸ್ಥಳೀಯ ಭಾಷೆ ಬಳಕೆಗೆ ಹೆಚ್ಚು ಒತ್ತು ನೀಡಬೇಕಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.**



ದೆಹಲಿಯಲ್ಲಿ ನಡೆದ ಮುಖ್ಯಮಂತ್ರಿಗಳು ಮತ್ತು ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳ ಜಂಟಿ ಸಮ್ಮೇಳನವನ್ನುದ್ದೇಶಿಸಿ ಮಾತನಾಡಿದ ಅವರು, ನ್ಯಾಯಾಲಯಗಳಲ್ಲಿ ಸ್ಥಳೀಯ ಭಾಷೆಗಳನ್ನು ಹೆಚ್ಚಾಗಿ ಬಳಸಿದರೆ ಅದು ಸಾಮಾನ್ಯ ನಾಗರಿಕರ ವಿಶ್ವಾಸವನ್ನು ಹೆಚ್ಚಿಸುತ್ತದೆ ಎಂದರು. ಹೀಗಾಗಿ ನಾವು ನ್ಯಾಯಾಲಯಗಳ ವ್ಯವಹಾರದಲ್ಲಿ ಸ್ಥಳೀಯ ಭಾಷೆಗಳನ್ನು ಪ್ರೋತ್ಸಾಹಿಸಬೇಕಾಗಿದೆ. ಆಗ ಜನಸಾಮಾನ್ಯರು ನ್ಯಾಯಾಲಯಗಳ ವ್ಯವಹಾರಗಳನ್ನು ಅರ್ಥಮಾಡಿಕೊಳ್ಳಲು ಅನುಕೂಲವಾಗುತ್ತದೆ ಎಂದರು. ▶ 8ನೇ ಪುಟಕ್ಕೆ

ಮುಖ್ಯ ನ್ಯಾಯಮೂರ್ತಿ ರಮಣ ಸಹಮತ



ಹೊಸದಿಲ್ಲಿ: ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ನ್ಯಾಯಾ ಲಯಗಳಲ್ಲಿ ಸ್ಥಳೀಯ ಭಾಷೆಗಳನ್ನು ಬಳಸುವ ಕಾಲ ಬಂದಿದೆ ಎಂದು ಹೇಳಿದ್ದಾರೆ. ಪ್ರಧಾನಿ ಮೋದಿ ಸಮ್ಮುಖದಲ್ಲಿ ಮಾತನಾಡಿದ ಅವರು, ಸಾಂವಿಧಾನಿಕ ನ್ಯಾಯಾಲಯಗಳ ಮುಂದೆ ನಡೆಸಲಾಗುವ ವಕಾಲತ್ತು ಬುದ್ಧಿವಂತಿಕೆ ಹಾಗೂ ಕಾನೂನಿನ ತಿಳಿವಳಿಕೆಯನ್ನು ಆಧರಿಸಿರಬೇಕು ಹೊರತು ಭಾಷಾ ಪ್ರಾವೀಣ್ಯತೆಯನ್ನು ಆಧರಿಸಿ ಅಲ್ಲ ಎಂದರು. ನಮ್ಮ ಪ್ರಜಾಪ್ರಭುತ್ವದ ನ್ಯಾಯಾಂಗ ಹಾಗೂ ಪ್ರತಿ ಇತರ ಸಂಸ್ಥೆಗಳು ದೇಶದ ಸಾಮಾಜಿಕ ಹಾಗೂ ಭೌಗೋಳಿಕ ವೈವಿಧ್ಯತೆಯ ಕನ್ನಡಿಯಾಗಬೇಕು. ಉಚ್ಚ ನ್ಯಾಯಾಲಯದ ಮುಂದೆ ವಕಾಲತ್ತು ನಡೆಸಲು ಸ್ಥಳೀಯ ಭಾಷೆಯನ್ನು ಬಳಸುವಂತೆ ನಾನು ಅನೇಕ ಅಹವಾಲುಗಳನ್ನು ಸ್ವೀಕರಿಸಿದ್ದೇನೆ. ಈ ಬೇಡಿಕೆ ಪರಿಗಣಿಸಲು ಹಾಗೂ ತಾರ್ಕಿಕ ಅಂತ್ಯ ನೀಡಲು ಈಗ ಸಮಯ ಬಂದಿದೆ ಎಂದು ನಾನು ಭಾವಿಸುತ್ತೇನೆ. ಭಾರತದಲ್ಲಿ ನ್ಯಾಯದ ಲಭ್ಯತೆಯ ಪರಿಕಲ್ಪನೆಯು ನ್ಯಾಯಾಲಯದ ಮುಂದೆ ಪ್ರತಿನಿಧೀಕರಣಕ್ಕೆ ಸುಲಭವಾಗಿ ವಕೀಲರನ್ನು ಒದಗಿಸುವುದಕ್ಕಿಂತ ಹೆಚ್ಚು ವಿಸ್ತಾರವಾದುದು. ಇಡೀ ಜಗತ್ತಿನಲ್ಲಿ ಉತ್ತಮ ಉಚಿತ ಕಾನೂನು ಸೇವೆ ನೀಡುವ ರಾಷ್ಟ್ರಗಳಲ್ಲಿ ಭಾರತ ಕೂಡ ಒಂದು ಎಂದು ಹೇಳಲು ನಾನು ಹೆಮ್ಮೆಪಡುತ್ತೇನೆ ಎಂದರು.

ಸಿದ್ದರಾಮಯ್ಯ, ಡಿಕೆಶಿಗೆ ಅಭ್ಯರ್ಥಿಗಳ ಆಯ್ಕೆ ಅವಕಾಶವಿಲ್ಲ

● ವರಿಷ್ಠರಿಂದಲೇ ಪಕ್ಷದ ಅಭ್ಯರ್ಥಿಗಳ ಆಯ್ಕೆ
● ಕಿತ್ತಾಟದಿಂದ 'ಕೈ' ತಪ್ಪಿದ ಆಯ್ಕೆ ಅವಕಾಶ

ಬೆಂಗಳೂರು, ಏ.30(ಕೆಎಂಶಿ)– ರಾಜ್ಯ ಕಾಂಗ್ರೆಸ್‌ನಲ್ಲಿ ಉಂಟಾಗಿರುವ ಬಣ ರಾಜಕೀಯದಿಂದ ಬೇಸತ್ತಿರುವ ವರಿಷ್ಠರು ಮುಂಬರುವ ವಿಧಾನಸಭೆ ಚುನಾವಣೆಯ ಅಭ್ಯರ್ಥಿಗಳ ಆಯ್ಕೆ ಜವಾಬ್ದಾರಿಯನ್ನು ಸಂಪೂರ್ಣವಾಗಿ ತಮ್ಮ ಕೈಗೆ ತೆಗೆದುಕೊಂಡಿದ್ದಾರೆ.

ಇದರೊಂದಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮತ್ತು ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಅವರ ಬೆನ್ನು ಬಿದ್ದಿದ್ದ ಟಿಕೆಟ್ ಆಕಾಂಕ್ಷಿಗಳು ಇದೀಗ ದೆಹಲಿಯತ್ತ ನೋಡುವಂತಾಗಿದೆ.

ಕರ್ನಾಟಕದ 224 ವಿಧಾನಸಭಾ ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳು ಯಾರಾಗಿರಬೇಕು ಎಂಬುದನ್ನು ವರಿಷ್ಠರೇ ತೀರ್ಮಾನಿಸಲಿದ್ದಾರೆ. ಇದರಿಂದ ಡಿ.ಕೆ.ಶಿ ಮತ್ತು ಸಿದ್ದರಾಮಯ್ಯಗೆ ಭಾರಿ ಹಿನ್ನಡೆಯಾಗಿದೆ. ವಿಧಾನಸಭೆ ಚುನಾವಣೆಗೆ 1 ವರ್ಷ ಬಾಕಿ ಇರುವ ಬೆನ್ನಲ್ಲೇ ಸಂಭವನೀಯ ಅಭ್ಯರ್ಥಿಗಳ ಆಯ್ಕೆ ಮಾಡಲು ವರಿಷ್ಠ ರಾಹುಲ್ ಗಾಂಧಿ ಎಐಸಿಸಿಯ ರಿಸರ್ಚ್ ವಿಂಗ್‌ನ 500ಕ್ಕೂ ಹೆಚ್ಚು ನಿಪುಣರನ್ನು ರಾಜ್ಯಕ್ಕೆ ಕಳುಹಿಸಿದ್ದು, ಅವರೆಲ್ಲರೂ ಈಗಾಗಲೇ ಕರ್ನಾಟಕ ತಲುಪಿದ್ದಾರೆ.

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಮತ್ತೆ ಅಧಿಕಾರದ ಗದ್ದುಗೆ ಹಿಡಿಯಬೇಕೆಂದು ಪಣತೊಟ್ಟಿರುವ ಕಾಂಗ್ರೆಸ್ ವರಿಷ್ಠರು ಅಭ್ಯರ್ಥಿಗಳ ಆಯ್ಕೆಗೆ ಸಂಶೋಧನೆಯನ್ನೇ ಕೈಗೊಂಡಿದ್ದಾರೆ. ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಲ್ಲೂ ಗೆಲ್ಲುವ ಅಭ್ಯರ್ಥಿಗಳ ಬಗ್ಗೆ ಪರಿಣಿತರ ತಂಡ ತಳಮಟ್ಟದಿಂದ ಅಧ್ಯಯನ ನಡೆಸಿ ಹೈಕಮಾಂಡ್‌ಗೆ ▶ 2ನೇ ಪುಟಕ್ಕೆ

ಚುನಾವಣಾ ಚಾಣಾಕ್ಷ ಪ್ರಶಾಂತ್ ಕಿಶೋರ್ ಒಡನಾಡಿ ಸುನೀಲ್ ಕನಗೋಳ್ ತಂಡ ಈಗಾಗಲೇ ರಾಜ್ಯದಲ್ಲಿ ಮತ್ತೊಂದು ಸಮೀಕ್ಷೆ ನಡೆಸುತ್ತಿದೆ. ಇದರೊಟ್ಟಿಗೆ ತಮ್ಮ ಪಕ್ಷದ ರಿಸರ್ಚ್ ವಿಂಗ್‌ನ ಪರಿಣಿತರನ್ನು ರಾಜ್ಯಕ್ಕೆ ಕಳುಹಿಸಿದ್ದಾರೆ. ರಾಜ್ಯದಲ್ಲಿ ಬೀಡು ಬಿಟ್ಟಿರುವ ಪರಿಣಿತರ ತಂಡ ಸ್ಥಳೀಯರ ಸಹಕಾರದೊಂದಿಗೆ ನಡೆಸುವ ಪ್ರತಿಯೊಂದು ಅಧ್ಯಯನವು ದಾಖಲಾಗುವ ರೀತಿಯಲ್ಲಿ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಲಾಗಿದೆ. ಯಾವ ರೀತಿ ಅಭ್ಯರ್ಥಿಗಳ ಶೋಧನೆ ಮಾಡುತ್ತಾರೆ ಎಂಬುದು ಅದರಲ್ಲಿ ದಾಖಲಾಗಲಿದೆ. ಆ ಮೂಲಕ ಕಾಂಗ್ರೆಸ್‌ನ ನೈಜ ಚಿತ್ರಣ ಪಡೆಯಲು ಉದ್ದೇಶಿಸಲಾಗಿದೆ. ಪ್ರದೇಶ ಕಾಂಗ್ರೆಸ್ ಕಳುಹಿಸಿದ ಅಭ್ಯರ್ಥಿಗಳ ಪಟ್ಟಿಗೆ ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಹೈಕಮಾಂಡ್ ಒಪ್ಪಿಗೆ ಸೂಚಿಸುತ್ತಿತ್ತು. ಆದರೆ, ಈ ಬಾರಿ ಹೈಕಮಾಂಡೇ ಅಭ್ಯರ್ಥಿಗಳ ಆಯ್ಕೆ ಮಾಡಲಿದೆ.

ಶೀಘ್ರವೇ ಪಿಎಸ್‌ಐ ಮರು ಪರೀಕ್ಷೆ ದಿನಾಂಕ ಪ್ರಕಟ



ಶಿವಮೊಗ್ಗ,ಏ.30–ಪಿಎಸ್‌ಐ ಪರೀಕ್ಷೆಯಲ್ಲಿ ಅಕ್ರಮ ನಡೆದಿರುವುದು ಸಾಬೀತಾದ ಹಿನ್ನೆಲೆಯಲ್ಲಿ, ಸರ್ಕಾರ ಮರು ಪರೀಕ್ಷೆ ಮಾಡಲು ನಿರ್ಧರಿಸಿದ್ದು, ಶೀಘ್ರದಲ್ಲಿಯೇ ಪಿಎಸ್‌ಐ ಮರು ಪರೀಕ್ಷೆಯ ದಿನಾಂಕ ಪ್ರಕಟ ಮಾಡಲಾಗುವುದು ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ಶಿವಮೊಗ್ಗದಲ್ಲಿ ಮಾತನಾಡಿದ ಅವರು, ಪಿಎಸ್‌ಐ ಪರೀಕ್ಷೆ ▶ 2ನೇ ಪುಟಕ್ಕೆ

ನೌಕರರ ವರ್ಗಾವಣೆಗೆ ಸರ್ಕಾರ ಗ್ರೀನ್ ಸಿಗ್ನಲ್

ಸಚಿವರಿಗೆ ವರ್ಗಾವಣೆ ಹೊಣೆ

ಬೆಂಗಳೂರು,ಏ.30–ರಾಜ್ಯದಲ್ಲಿ ಶೇ.6ರಷ್ಟು ಮೀರದಂತೆ ಸರ್ಕಾರಿ ನೌಕರರನ್ನು ವರ್ಗಾವಣೆ ಮಾಡುವುದಕ್ಕೆ ರಾಜ್ಯ ಸರ್ಕಾರ ಹಸಿರು ನಿಶಾನೆ ತೋರಿದೆ. ಆಯಾ ಇಲಾಖೆ ಸಚಿವರಿಗೆ ಅಧಿಕಾರಿಗಳ ವರ್ಗಾವಣೆ ಹೊಣೆಗಾರಿಕೆಯನ್ನು ನೀಡಿ ಆದೇಶ ಹೊರಡಿಸಲಾಗಿದೆ ರಾಜ್ಯದ ಸಿಬ್ಬಂದಿ ಮತ್ತು ಆಡಳಿತ ▶ 8ನೇ ಪುಟಕ್ಕೆ

ಅಮ್ಮ... ನನ್ನ ಉಳಿಸಿ... ಅವನ ಶಿಕ್ಷಿಸಿ

ಆಸಿಡ್ ದಾಳಿಗೀಡಾಗಿರುವ ಯುವತಿ ಮೊರೆ

ಬೆಂಗಳೂರು,ಏ.30–'ಪ್ಲೀಸ್ ಅಮ್ಮ, ನನ್ನನ್ನು ಉಳಿಸಿಕೋ, ನನಗೆ ಆಸಿಡ್ ಹಾಕಿದವನಿಗೆ ಶಿಕ್ಷೆ ಕೊಡಿಸಮ್ಮ, ಅದನ್ನು ನಾನು ನೋಡಬೇಕು' ಎಂದು ಸುಂಕದಕಟ್ಟೆಯಲ್ಲಿ ಆಸಿಡ್ ದಾಳಿಗೊಳಗಾಗಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಯುವತಿ ತನ್ನ ತಾಯಿಯಲ್ಲಿ ಮೊರೆ ಇಟ್ಟಿದ್ದಾಳೆ. ಚಿಕಿತ್ಸೆ ಪಡೆಯುತ್ತಿರುವ ಆಸ್ಪತ್ರೆ ಮುಂದೆ ಯುವತಿ ತಾಯಿ ಕಣ್ಣೀರಿಡುತ್ತ ಸುದ್ದಿಗಾರರೊಂದಿಗೆ ಮಾತನಾಡಿ, ನನ್ನ ಮಗಳು ಸಾವು– ಬದುಕಿನ ನಡುವೆ ಹೋರಾಡುತ್ತಿದ್ದಾಳೆ. ನನ್ನನ್ನು ಉಳಿಸಿ ಎಂದು ಅಂಗಲಾಚುತ್ತಿದ್ದಾಳೆ ಎಂದರು. ಅವನನ್ನು (ಆಸಿಡ್ ಹಾಕಿದವನು) ಯಾವುದೇ ಕಾರಣಕ್ಕೂ ಬಿಡಬೇಡಿ. ಆತನ ಬಂಧಿಸಿ ಕರೆತಂದು ನನ್ನ ಮುಂದೆಯೇ ಶಿಕ್ಷೆ ಕೊಡಬೇಕು ಎಂದು ಹೇಳುತ್ತಿದ್ದಾಳೆ ನನ್ನ ಮಗಳು ಎಂದು ಆಕೆಯ ತಾಯಿ ಕಣ್ಣೀರಿಡುತ್ತಾ ಹೇಳಿದ್ದಾರೆ. ಈ ಮಧ್ಯೆ ಆಕೆಯ ತಂದೆಯೂ, ನನ್ನ ಮಗಳ ಮೇಲೆ ಆಸಿಡ್ ಹಾಕಿದವನನ್ನು ಬಂಧಿಸುವುದು, ಶಿಕ್ಷೆ ನೀಡುವುದು ಸರ್ಕಾರಕ್ಕೆ ಬಿಟ್ಟ ವಿಚಾರ ಎಂದು ಹೇಳಿದ್ದಾರೆ. ಮನೆಯಲ್ಲಿ ನಾಯಿಗೆ ಊಟ ಹಾಕಿ, ಅದನ್ನು ಚೆನ್ನಾಗಿ ನೋಡಿಕೊಳ್ಳಿ ಎನ್ನುತ್ತಿದ್ದಾಳೆ. ಆದರೆ ಅದು ಮಾತ್ರ ಊಟ ಮಾಡುತ್ತಿಲ್ಲ. ನನ್ನ ಮಗಳ ಕಾಣದೆ ಊಟವನ್ನೇ ಬಿಟ್ಟಿದೆ ಎಂದ ಅವರು, ನನ್ನ ಮೇಲೆ ಕೋಪ ಮಾಡಿಕೊಳ್ಳಬೇಡ ಅಪ್ಪ. ನಿನಗೆ ಮುಂದೆ ನಾನಿದ್ದೇನೆ. ಆ ಕಿರಾತಕನಿಗೆ ನನ್ನ ಮುಂದೆಯೇ ಶಿಕ್ಷೆ ಆಗಬೇಕು ಎಂದು ನೋವಿನಿಂದ ನರಳುತ್ತಲೇ ಹೇಳಿದಳು ಎಂದರು.

ಹೇಳಿಕೆ ದಾಖಲಿಸಿಕೊಂಡ ಮ್ಯಾಜಿಸ್ಟ್ರೇಟ್: ಮದುವೆಯಾಗುವಂತೆ ಪೀಡಿಸುತ್ತಿದ್ದ ಯುವಕನಿಂದ ಆಸಿಡ್ ದಾಳಿಗೆ ತುತ್ತಾಗಿ ನಗರದ ಸೈಂಟ್ ಜಾನ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸಂತ್ರಸ್ತೆಯ ಹೇಳಿಕೆಯನ್ನು ಮ್ಯಾಜಿಸ್ಟ್ರೇಟ್ ದಾಖಲಿಸಿಕೊಂಡಿದ್ದಾರೆ. ಇಂಡಿಯನ್ ಎವಿಡೆನ್ಸ್ ಆಕ್ಟ್ 32(1) ಅಡಿಯಲ್ಲಿ ಆಸ್ಪತ್ರೆಯಲ್ಲಿ ವೈದ್ಯರ ಸಮ್ಮುಖದಲ್ಲಿ ಮ್ಯಾಜಿಸ್ಟ್ರೇಟ್ ಡೈಯಿಂಗ್ ಡಿಕ್ಲರೇಷನ್ ಅನ್ನು ಶನಿವಾರ ದಾಖಲಿಸಿಕೊಂಡಿದ್ದಾರೆ. ಆರೋಪಿ ನಾಗೇಶ್ ಜೊತೆಗಿನ ಪರಿಚಯ, ▶ 2ನೇ ಪುಟಕ್ಕೆ







ನೀವು ಹಿಂಬಾಲಿಸುವ ನಾಯಕರಿಗೆ ಟಿಕೆಟ್ ಸಿಗುವ ಸಾಧ್ಯತೆ ಶೇ.90 ಕಡಿಮೆ

● ನಾಯಕರ ಹಿಂದಿಂದೆ ಸುತ್ತುವ ಕಾರ್ಯಕರ್ತರಿಗೆ ಬಿ.ಎಲ್.ಸಂತೋಷ್ ಶಾಕ್ ● ಇವರಿಗೇ ಟಿಕೆಟ್ ನೀಡಿ ಎಂದು ಬೆಂಗಳೂರಿಗೆ ಬರಬೇಡಿ ● ಬಿಜೆಪಿಯಲ್ಲಿ ವಂಶವಾಹಿ ರಾಜಕಾರಣಕ್ಕೆ ಅವಕಾಶವಿಲ್ಲ ● ಮೋದಿ, ಅಮಿತ್ ಷಾ, ನಡ್ಡಾ ಸಮಾಜದ ನಡುವಿನಿಂದ ನಾಯಕರಾಗಿ ಬಂದವರು ● ದಕ್ಷಿಣ ಪದವೀಧರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಪರ ಪ್ರಚಾರ



ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಆಯೋಜಿಸಿದ್ದ ಮೈಸೂರು ನಗರ ಹಾಗೂ ಗ್ರಾಮಾಂತರ ಪ್ರಮುಖರ ಸಭೆಯಲ್ಲಿ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್.ಸಂತೋಷ್ ಮಾತನಾಡಿದರು.

ಮೈಸೂರು, ಏ.30(ಎಸ್‌ಬಿಡಿ)– ಕರ್ನಾಟಕದಲ್ಲಿ ಮತ್ತೆ ಬಿಜೆಪಿಯನ್ನು ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಮೈಸೂರು ಜಿಲ್ಲೆಯಿಂದ ಹೆಚ್ಚು ಶಾಸಕರನ್ನು ಆಯ್ಕೆ ಮಾಡಬೇಕಿದೆ ಎಂದು ಅಭಿಪ್ರಾಯಪಟ್ಟ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್.ಸಂತೋಷ್, ನಾಯಕರು ಹಾಗೂ ಕಾರ್ಯಕರ್ತರ ನಡೆಯ ವಿಚಾರವಾಗಿ ನೈತಿಕ ರಾಜಕಾರಣದ ಪಾಠ ಮಾಡಿದರು.


ದಕ್ಷಿಣ ಪದವೀಧರ ಕ್ಷೇತ್ರ ಚುನಾವಣೆ ಹಿನ್ನೆಲೆಯಲ್ಲಿ ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ಮೈಸೂರು ನಗರ ಹಾಗೂ ▶ 8ನೇ ಪುಟಕ್ಕೆ

ಇವರು ಅಭ್ಯರ್ಥಿಯಾದರೆ ಮಾತ್ರ ಗೆಲ್ಲುತ್ತೇವೆ ಎನ್ನುವ ಮನೋಭಾವ ಯಾರಲ್ಲೂ ಇರಬಾರದು. ಇವರಿಗೇ ಟಿಕೆಟ್ ನೀಡಬೇಕೆಂದು ಅವರ ಗಾಡಿಯಲ್ಲಿ ಕುಳಿತು ಬೆಂಗಳೂರಿಗೆ ಹೋಗಿ ನಾಯಕರ ಬಳಿ ಪಟ್ಟು ಹಿಡಿಯಬೇಡಿ. ನೀವು ಯಾವ ನಾಯಕರ ಹಿಂಬಾಲಿಸಿ ಟಿಕೆಟ್‌ಗಾಗಿ ಒತ್ತಾಯಿಸುವಿರೋ ಅವರಿಗೇ ಟಿಕೆಟ್ ಸಿಗುವ ಸಾಧ್ಯತೆ ಶೇ.90ರಷ್ಟು ಕಡಿಮೆ. ಟಿಕೆಟ್ ಪಡೆಯಲು ತಾಕತ್ತಿದ್ದವರು ಪದೇ ಪದೆ ಬೆಂಗಳೂರಿಗೆ ಹೋಗುವುದಿಲ್ಲ. ಹೀಗೆ ಯಾರೋ ಒಬ್ಬರ ಪರ ನಿಲ್ಲುವುದರಿಂದ ಪಕ್ಷಕ್ಕೆ ನಷ್ಟ. ನೀವು ಅಪೇಕ್ಷಿಸಿದವರ ಬದಲಾಗಿ ಬೇರೆಯವರಿಗೆ ಅವಕಾಶ ಸಿಕ್ಕರೆ ಪರಸ್ಪರ ನಂಬಿಕೆ, ವಿಶ್ವಾಸ ಹಾಳಾಗುತ್ತದೆ.

–ಬಿ.ಎಲ್.ಸಂತೋಷ್







ಕೋರ್ಟ್ ಆದೇಶದನ್ವಯ ಶಾಸಕ ಸಾರಾ ವಿರುದ್ಧ ಪ್ರಕರಣ ದಾಖಲು

ಲಕ್ಷ್ಮೀಪುರಂ ಠಾಣೆ ಮುಂದೆ ಶಾಸಕರು, ಬೆಂಬಲಿಗರ ಪ್ರತಿಭಟನೆ

ಮೈಸೂರು, ಏ.30- ತಮ್ಮ ವಿರುದ್ಧ ಎಫ್‌ಐಆರ್ ದಾಖಲಿಸಿರುವ ಹಿನ್ನೆಲೆಯಲ್ಲಿ ಶಾಸಕ ಸಾ.ರಾ.ಮಹೇಶ್, ಮೈಸೂರಿನ ಲಕ್ಷ್ಮೀಪುರಂ ಪೊಲೀಸ್ ಠಾಣೆ ಬಳಿ ಶನಿವಾರ ರಾತ್ರಿ ಪ್ರತಿಭಟನೆ ನಡೆಸಿದರು. ಸಾಮಾಜಿಕ ಕಾರ್ಯಕರ್ತ ಎನ್.ಗಂಗರಾಜು ನೀಡಿದ ದೂರಿನನ್ವಯ ಪೊಲೀಸರು ಪ್ರಕರಣ ದಾಖಲಿಸಿದ್ದು, ಇದರಿಂದ ಸಿಟ್ಟಿಗೆದ್ದ ಶಾಸಕ ಸಾ.ರಾ.ಮಹೇಶ್ ಠಾಣೆ ಮುಂದೆ ಪ್ರತಿಭಟನೆ ನಡೆಸಿ, ಏಕಾಏಕಿ ಎಫ್‌ಐಆರ್ ದಾಖಲಿಸಿದ್ದನ್ನು ಪ್ರಶ್ನಿಸಿದರು. ಯಾರೋ ದೂರು ನೀಡಿದ ತಕ್ಷಣ ಶಾಸಕರ ವಿರುದ್ಧ ಪ್ರಕರಣ ದಾಖಲಿಸಿದ್ದೀರಿ. ಹಾಗಿದ್ದರೆ ನನ್ನನ್ನು ಬಂಧಿಸಿ ಎಂದು ಪಟ್ಟು ಹಿಡಿದರು. ವಿಷಯ ತಿಳಿದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಹಾಗೂ ಬೆಂಬಲಿಗರು ಠಾಣೆ ಬಳಿ ಜಮಾಯಿಸಿ ಪೊಲೀಸರ ಕ್ರಮವನ್ನು ಖಂಡಿಸಿದರು.

ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಹಾಗೂ ಡಿಸಿಪಿ ಪ್ರದೀಪ್ ಗುಂಟಿ, ಠಾಣೆಗೆ ಆಗಮಿಸಿ ಧರಣಿ ನಿರತ ಶಾಸಕ ಸಾ.ರಾ.ಮಹೇಶ್ ಅವರೊಂದಿಗೆ ಚರ್ಚೆ ನಡೆಸಿದರು. ಎಫ್‌ಐಆರ್ ದಾಖಲಿಸಿರುವ ಬಗ್ಗೆ ಶಾಸಕರಿಗೆ ವಿವರಣೆ ನೀಡಿ, ಸಮಾಧಾನಪಡಿಸುವ ಪ್ರಯತ್ನ ನಡೆಸಿದರು. ಆದರೂ ಶಾಸಕರ ವಿರುದ್ಧ ಹೀಗೆ ಏಕಾಏಕಿ ಎಫ್‌ಐಆರ್ ದಾಖಲಿಸಿರುವುದು ಸರಿಯೇ? ಗಮನಕ್ಕೂ ತಾರದೆ ತರಾತುರಿಯಲ್ಲಿ ಪ್ರಕರಣ ದಾಖಲಿಸಲು ಕಾರಣವೇನು? ಎಂದು ಶಾಸಕ ಸಾ.ರಾ.ಮಹೇಶ್ ಹಾಗೂ ಬೆಂಬಲಿಗರು ಪ್ರಶ್ನಿಸಿದರು. ರಾತ್ರಿ ಬಹು ಹೊತ್ತಿನವರೆಗೂ ಈ ಚರ್ಚೆ ಮುಂದುವರೆದಿತ್ತು.

ದೂರಿನ ವಿವರ: ಏ.29ರ ಮಧ್ಯಾಹ್ನ 12.30ರ ವೇಳೆಯಲ್ಲಿ ಮುಡಾ ಕಚೇರಿಯಲ್ಲಿ ಕಾರ್ಯದರ್ಶಿಯವರನ್ನು ಭೇಟಿ ಮಾಡಿ, ಕಾರಿಡಾರ್‌ನಲ್ಲಿ ಹೋಗುತ್ತಿದ್ದಾಗ ಸಾ.ರಾ.ಮಹೇಶ್ ಪ್ರಚೋದನೆಯಿಂದ ಅವರ ಸಹಚರ ರಘು ಮತ್ತಿತರರು 'ಏನೋ ಮುಡಾ ನಿಮ್ಮಪ್ಪನ ಮನೆಯ ಆಸ್ತೀನಾ? ಯಾವಾಗಲೂ ಇಲ್ಲೇ ಇರುತ್ತೀಯ ನಿನಗೆ ಗತಿ ಕಾಣಿಸಿ, ಮುಗಿಸುತ್ತೇನೆ ಎಂದು ಏಕ ವಚನದಲ್ಲಿ ಕಿರುಚುತ್ತಾ, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಲ್ಲದೆ ಹಿಂಬಾಲಿಸಿ ಹಲ್ಲೆಗೆ ಮುಂದಾದರು. ಈ ವೇಳೆ ನಾನು ಕಚೇರಿ ಒಳಗೆ ಹೋದರೂ ಹಿಂಬಾಲಿಸಿ ಆತ ಅಲ್ಲಿಗೂ ಬಂದು ಗದರಿದರು.' ಎಂದು ಗಂಗರಾಜು ದೂರು ನೀಡಿದ್ದರ ಮೇಲೆ ಪೊಲೀಸರು ಎನ್‌ಸಿಆರ್ ಮಾಡಿದ್ದರು. ಆದರೆ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ದೂರುದಾರ ನ್ಯಾಯಾಲಯಕ್ಕೆ ಮನವಿ ಮಾಡಿದ್ದರಿಂದ ಇಂದು ನ್ಯಾಯಾಧೀಶರು ಅನುಮತಿ ನೀಡಿದ್ದರಿಂದ ರಘು ಮತ್ತಿತರರು ಹಾಗೂ ಸಾ.ರಾ.ಮಹೇಶ್ ವಿರುದ್ಧ ಐಪಿಸಿ-1860(ಯು/ಎಸ್ 504, 506, 34) ಅಡಿಯಲ್ಲಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ನಿಧನ

ಹೆಚ್.ಎನ್.ರಾಮರಾವ್



ಮೈಸೂರು,ಏ.30-ಕಳೆದ 65 ವರ್ಷದಿಂದ ಗಿರಿವಿ ಅಂಗಡಿ ನಡೆಸುತ್ತಿರುವ ಮೈಸೂರಿನ ಮಂಡಿಮೊಹಲ್ಲಾದ ಗಿರಿವಿ ದಲ್ಲಾಳಿ ಹಾಗೂ ಜಯಲಕ್ಷ್ಮೀಪುರಂ ನಿವಾಸಿ ಹೆಚ್.ಎನ್.ರಾಮರಾವ್(94) ಶುಕ್ರವಾರ ಬೆಳಗ್ಗೆ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರು ಓರ್ವ ಪುತ್ರ, ಇಬ್ಬರು ಪುತ್ರಿಯರು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂನಲ್ಲಿರುವ ಚಿರಶಾಂತಿಧಾಮದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ರಕಾಶ್ ಚಂದ್ ಗುಲೇಚಾ



ಮೈಸೂರಿನ ಡಿ. ದೇವರಾಜ ಅರಸು ರಸ್ತೆಯಲ್ಲಿರುವ ಜೈನ್ ಅಪ್ಲಾಸ್ ಮಾಲೀಕರು ಹಾಗೂ ಅಗ್ರಹಾರದ ನಿವಾಸಿಗಳಾದ ಪ್ರಕಾಶ್ ಚಂದ್ ಗುಲೇಚಾ (75) ಶುಕ್ರವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಆಯ್ಕೆ ಅವಕಾಶವಿಲ್ಲ

ವರದಿ ನೀಡಲಿದೆ. ಆ ವರದಿ ಆಧಾರದ ಮೇಲೆ ಕಾಂಗ್ರೆಸ್ ಅಭ್ಯರ್ಥಿಗಳು ಯಾರಾಗಲಿದ್ದಾರೆ ಎಂಬುದು ನಿರ್ಧಾರವಾಗಲಿದೆ. ಪ್ರತಿ ಕ್ಷೇತ್ರದಲ್ಲೂ ಸಮೀಕ್ಷಾ ಕಾರ್ಯವನ್ನು ಪರಿಣಿತರ ತಂಡ ಕೈಗೊಂಡಿದೆ. ಕಾಂಗ್ರೆಸ್ ರಾಷ್ಟ್ರೀಯ ನಾಯಕ ರಾಹುಲ್ ಗಾಂಧಿ ಅವರೇ ತಮ್ಮ ಪಕ್ಷದ ಮುಖಂಡರು ನೀಡುವ ವರದಿಯ ಮೇಲೆ ವಿಶ್ವಾಸವಿಡದೇ ಪ್ರತ್ಯೇಕ ವರದಿ ಪಡೆಯಲು ಈ ಕಾರ್ಯಕ್ಕೆ ಮುಂದಾಗಿದ್ದಾರೆ.

ರಾಹುಲ್ ಗಾಂಧಿಯವರು ಹೇಳಿದ ನಂತರವಷ್ಟೇ ರಾಜ್ಯದ ಕಾಂಗ್ರೆಸ್ ನಾಯಕರಿಗೆ ಈ ವಿಚಾರ ಗೊತ್ತಾಗಿದ್ದು, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸೇರಿದಂತೆ ಎಲ್ಲ ಪಕ್ಷದ ಸಕ್ರಿಯ ಕ್ಷೇತ್ರದಲ್ಲೂ ಸರ್ವೆ ನಡೆಸಲಿದೆ.

ಈಗಾಗಲೇ ದೇಶದಲ್ಲಿ ಭಾರೀ ಹಿನ್ನಡೆ ಅನುಭವಿಸಿರುವ ಕಾಂಗ್ರೆಸ್, ಕರ್ನಾಟಕದಲ್ಲಿ ಅಧಿಕಾರ ಹಿಡಿಯುವ ಮೂಲಕ ರಾಷ್ಟ್ರಮಟ್ಟದಲ್ಲಿ ಚೈತನ್ಯ ತುಂಬಬೇಕು ಎಂಬ ಲೆಕ್ಕಾಚಾರ ಮಾಡಿದೆ. ಆ ಮೂಲಕ ಮುಂದಿನ ಲೋಕಸಭಾ ಚುನಾವಣೆಗೆ ಪಕ್ಷದ ಕಾರ್ಯಕರ್ತರಲ್ಲಿ ಹೊಸ ಸ್ಫೂರ್ತಿ ತುಂಬುವ ಹಾಗೂ ಸಂಚಲನವನ್ನು ಉಂಟು ಮಾಡುವ ಉದ್ದೇಶ ಹೊಂದಿದೆ. ಪ್ರತಿ ಕ್ಷೇತ್ರದಲ್ಲಿ ಸಂಭಾವ್ಯ ಅಭ್ಯರ್ಥಿಯ ವರ್ಚಸ್ಸು, ಗೆಲ್ಲುವ ಸಾಧ್ಯತೆ, ಪ್ರತಿಸ್ಪರ್ಧಿಯ ತಂತ್ರಗಾರಿಕೆ, ಅಭ್ಯರ್ಥಿಯ ಬದಲಾವಣೆ ಅಗತ್ಯ, ರೂಪಿಸಬೇಕಾಗಿರುವ ಕಾರ್ಯತಂತ್ರದ ಬಗ್ಗೆ ಪರಿಣಿತರ ತಂಡ ವರದಿ ನೀಡಲಿದೆ.

ಮುಖ್ಯಮಂತ್ರಿ ಗಾದಿಯ ಮೇಲೆ ಕಣ್ಣಿಟ್ಟಿರುವ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಅವರ ಪ್ರತಿಷ್ಠೆಯಿಂದ ಪಕ್ಷ ಸೋಲನುಭವಿಸಬಾರದು ಎಂಬ ಉದ್ದೇಶದಿಂದ ಈ ದಾರಿ ಹುಡುಕಿದೆ. ಈ ಇಬ್ಬರೂ ನಾಯಕರು ತಮ್ಮ ತಮ್ಮ ಬೆಂಬಲಿಗರಿಗೆ ಟಿಕೆಟ್ ಖಾತ್ರಿ ಮಾಡಿಸಿ ಕೊಳ್ಳುವ ಪ್ರಯತ್ನ ಜತೆಗೆ ಪ್ರತ್ಯೇಕವಾಗಿ ಎರಡು ಮೂರು ಸಮೀಕ್ಷೆಯನ್ನೂ ಮಾಡಿಸಿದ್ದಾರೆ. ಒಟ್ಟಾರೆ ವಿಧಾನಸಭೆ ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಿರುವ ಕಾಂಗ್ರೆಸ್ ಹೈಕಮಾಂಡ್, ಬಿಜೆಪಿ ಹೈಕಮಾಂಡ್ ರೀತಿಯಲ್ಲೇ ಚುನಾವಣಾ ಅಖಾಡಕ್ಕೆ ಇಳಿದಿದೆ.

ಅಮ್ಮ... ನನ್ನ ಉಳಿಸಿ... ಅವನ ಶಿಕ್ಷಿಸಿ

ಕಳೆದ ಏಳು ವರ್ಷಗಳಲ್ಲಿ ನಡೆದ ಘಟನೆ, ಪ್ರೀತಿಸಲು ಯಾವ ರೀತಿ ಪೀಡಿಸುತ್ತಿದ್ದ ಎಂಬುದನ್ನು ಸಂಪೂರ್ಣವಾಗಿ ವಿವರಿಸಿದ್ದಾಳೆ. ಯುವತಿಯ ಆರೋಗ್ಯ ಸ್ಥಿತಿ ಚಿಂತಾಜನಕವಾಗಿರುವುದರಿಂದ ವೈದ್ಯರ ಸಮ್ಮುಖದಲ್ಲಿ ಮ್ಯಾಜಿಸ್ಟ್ರೇಟ್ ಡೈಯಿಂಗ್ ಡಿಕ್ಲರೇಷನ್ ದಾಖಲಿಸಿಕೊಂಡಿದ್ದಾರೆ. ವ್ಯಕ್ತಿ ಸಾಯುವ ಮುನ್ನ ತನ್ನ ಸಾವಿಗೆ ಕಾರಣ ತಿಳಿಸುವುದನ್ನು ಡೈಯಿಂಗ್ ಡಿಕ್ಲರೇಷನ್ ಎಂದು ಕರೆಯಲಾಗುತ್ತದೆ.

ಆರೋಪಿಗೆ ಕಠಿಣ ಶಿಕ್ಷೆ ನೀಡಲು ಯುವತಿಯ ಡೈಯಿಂಗ್ ಡಿಕ್ಲರೇಷನ್ ಸಹಕಾರಿಯಾಗುತ್ತದೆ. ಇನ್ನೊಂದೆಡೆ ಆರೋಪಿ ನಾಗೇಶ್ ಪತ್ತೆಗೆ ಪೊಲೀಸರು ತೀವ್ರ ಶೋಧ ನಡೆಸುತ್ತಿದ್ದಾರೆ.

ಮರುಪರೀಕ್ಷೆ ದಿನಾಂಕ ಪ್ರಕಟ

ಅಕ್ರಮದ ಕುರಿತು ಒಂದೊಂದೆ ಅಂಶ ಹೊರಗೆ ಬರುತ್ತಿದೆ. ಈಗಾಗಲೇ ಪ್ರಕರಣ ಸಂಬಂಧ ಅನೇಕರನ್ನು ಬಂಧಿಸ ಲಾಗಿದೆ. ಪರೀಕ್ಷೆಯಲ್ಲಿ ನೂತನ ಟೆಕ್ನಾಲಜಿ ಬಳಸಿ ಅಕ್ರಮ ಎಸಗಿದ್ದಾರೆ. ಹೀಗಾಗಿ ಮರು ಪರೀಕ್ಷೆ ನಡೆಸುವುದು ಸರ್ಕಾರಕ್ಕೆ ಅನಿವಾರ್ಯ ಎಂದರು. ನಾವು ಪರೀಕ್ಷೆಯ ನೋಟಿಫಿಕೇಶನ್ ರದ್ದು ಮಾಡಿಲ್ಲ, ಪರೀಕ್ಷೆ ರದ್ದು ಮಾಡಿದ್ದೇವೆ. ಈಗಾಗಲೇ ಪರೀಕ್ಷೆ ಬರೆದಿದ್ದವರಿಗೆ ಮಾತ್ರ ಪರೀಕ್ಷೆಗೆ ಅವಕಾಶ ನೀಡಲಾಗುವುದು. ಪರೀಕ್ಷೆಯಲ್ಲಿ ಅಕ್ರಮ ನಡೆದಿರುವುದರಿಂದ ನಮ್ಮ ಕಣ್ಣು ತೆರೆದಂತೆ ಆಗಿದೆ. ಪ್ರತಿಭಾವಂತರಿಗೆ ಅವಕಾಶ ಸಿಗಬೇಕು ಎಂಬ ಕಾರಣದಿಂದ ಸರಿಯಾದ ರೀತಿಯಲ್ಲಿ ಪರೀಕ್ಷೆ ನಡೆಸುತ್ತೇವೆ ಎಂದು ಹೇಳಿದರು.

ಪರೀಕ್ಷೆಯಲ್ಲಿ ಈ ರೀತಿ ವಂಚನೆ ಆಗುವುದನ್ನು ತಡೆಗಟ್ಟಲು ಕಾನೂನಿಗೆ ತಿದ್ದುಪಡಿ ತರಬೇಕು ಎನ್ನುವ ಚಿಂತನೆ ಇದೆ. ತಪ್ಪಿತಸ್ಥರು ಜೈಲಿನಿಂದ ಹೊರಗೆ ಬರಬಾರದು. ಕಷ್ಟಪಟ್ಟು ಓದಿದವರಿಗೆ ಅನ್ಯಾಯವಾಗಬಾರದು. ಹಣಕೊಟ್ಟು ಕೊಂಡುಕೊಳ್ಳುತ್ತೇನೆ ಎನ್ನುವವರು ತೊಲಗಬೇಕು. ಮರು ಪರೀಕ್ಷೆಯಲ್ಲಿ ದೈಹಿಕ ಸಾಮರ್ಥ್ಯ ಪರೀಕ್ಷೆ ಇರುವುದಿಲ್ಲ ಎಂದು ಮಾಹಿತಿ ನೀಡಿದರು. ಪ್ರಿಯಾಂಕ್ ಖರ್ಗೆ ಅವರು ಮಾಧ್ಯಮದವರ ಮುಂದೆ ಬಂದು ಮಾತನಾಡುತ್ತಿದ್ದಾರೆ. ಅದನ್ನೆ ಅವರು ಸಿಐಡಿ ಮುಂದೆ ಬಂದು ಹೇಳಬೇಕು. ತಮ್ಮ ಬಳಿ ಇರುವ ದಾಖಲಾತಿಗಳನ್ನು ಸಿಐಡಿ ಮುಂದೆ ಬಂದು ನೀಡಲಿ. ಸಾಕ್ಷಿಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ತಲುಪಿಸಿ ಎಂದರೆ, ಬೆನ್ನು ತೋರಿಸಿ ಪಲಾಯನ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಅಸಮರ್ಥರು ಆಯ್ಕೆ: 'ಅರಗ ಜ್ಞಾನೇಂದ್ರ ಅವರೇ ಗೃಹಸಚಿವರಾಗಿದ್ದು ಪಿಎಸ್‌ಐ ನೇಮಕಾತಿ ಮರುಪರೀಕ್ಷೆ ನಡೆದರೆ ಜ್ಞಾನೇಂದ್ರರಂಥ ಅಸಮರ್ಥ, ಅಪ್ರಾಮಾಣಿಕ, ನಿಷ್ಕ್ರಿಯರೇ ಪಿಎಸ್‌ಐಗಳಾಗಿ ನೇಮಕಗೊಂಡರೂ ಆಶ್ಚರ್ಯ ಇಲ್ಲ. ಪಿಎಸ್‌ಐ ನೇಮಕಾತಿಗೆ ಸರ್ಕಾರ ಯಾವ ಆಧಾರದಲ್ಲಿ ಮರುಪರೀಕ್ಷೆ ನಡೆಸುವ ತೀರ್ಮಾನ ಕೈಗೊಂಡಿದೆ ಎನ್ನುವುದನ್ನು ಮುಖ್ಯಮಂತ್ರಿ ಸ್ಪಷ್ಟಪಡಿಸಬೇಕು. ಅಕ್ರಮ ನಡೆದಿರುವುದು ಸಿಐಡಿ ತನಿಖೆಯಿಂದ ಸಾಬೀತಾಗಿದೆಯೇ? ಹಾಗಿದ್ದರೆ ಆ ವರದಿ ಬಿಡುಗಡೆ ಮಾಡಿ' ಎಂದು ವಿಧಾನಸಭೆಯ ವಿಪಕ್ಷ ನಾಯಕ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

'ಮರುಪರೀಕ್ಷೆಯ ನಿರ್ಧಾರ ಪ್ರಾಮಾಣಿಕ ಅಭ್ಯರ್ಥಿಗಳಿಗೆ ನ್ಯಾಯ ಕೊಡಿಸಲಿಕ್ಕಾಗಿಯೇ? ಇಲ್ಲವೇ ಹಗರಣವನ್ನು ಮುಚ್ಚಿಹಾಕಿ ದೊಡ್ಡ ತಲೆಗಳನ್ನು ಉಳಿಸಲಿಕ್ಕಾಗಿಯೇ? ಪಿಎಸ್‌ಐ ನೇಮಕಾತಿ ಹಗರಣದ ಸೂತ್ರಧಾರಿ ದಿವ್ಯಾ ಹಾಗರಗಿ ಬಂಧನವಾದ ತಕ್ಷಣ ಮರುಪರೀಕ್ಷೆಯ ನಿರ್ಧಾರದ ಹಿಂದಿನ ರಹಸ್ಯ ಏನು? ಆಕೆ ನೀಡಿರುವ ಹೇಳಿಕೆಯಲ್ಲಿ ಅಂತಹ ಸ್ಫೋಟಕ ಸಂಗತಿಗಳೇನಿದೆ' ಎಂದೂ ಪ್ರಶ್ನಿಸಿದ್ದಾರೆ.

ಜೆಎಸ್‌ಎಸ್ ಮಹಿಳಾ ಕಾಲೇಜಿನ 13ನೇ ಪದವೀಧರರ ದಿನಾಚರಣೆ

ಪರಿಸರ ಉಳಿಸಿ, ಬೆಳೆಸುವಲ್ಲಿ ಯುವಜನರ ಪಾತ್ರ ಮುಖ್ಯ

ಕೇಂದ್ರ ಶಿಕ್ಷಣ, ವಿದೇಶಾಂಗ ಸಚಿವ ಡಾ. ರಾಜ್‌ಕುಮಾರ್ ರಂಜನ್‌ಸಿಂಗ್ ಅಭಿಪ್ರಾಯ



ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಆಯೋಜಿಸಿದ್ದ 13ನೇ ಪದವೀಧರರ ದಿನಾಚರಣೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿ ಬಹುಮಾನ ಪಡೆದ ವಿದ್ಯಾರ್ಥಿಗಳೊಂದಿಗೆ ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿದೇಶಾಂಗ ರಾಜ್ಯ ಸಚಿವ ಡಾ.ರಾಜ್‌ಕುಮಾರ್ ರಂಜನ್‌ಸಿಂಗ್, ಪ್ರೊ.ದೇಬಲದೇವಿ, ಶಾಸಕ ಎಲ್.ನಾಗೇಂದ್ರ ಹಾಗೂ ಇನ್ನಿತರರನ್ನು ಕಾಣಬಹುದು.

ವಿದ್ಯಾರ್ಥಿನಿಯರಿಗೆ ಪದವಿ ಪ್ರದಾನ

ಸ್ನಾತಕ 557 ಮತ್ತು ಸ್ನಾತಕೋತ್ತರ 113 ಸೇರಿದಂತೆ 670 ವಿದ್ಯಾರ್ಥಿನಿಯರಿಗೆ ಪದವಿ ಪ್ರದಾನ ಮಾಡಲಾಯಿತು. ಅಧಿಕ ಅಂಕ ಪಡೆದ ವಿದ್ಯಾರ್ಥಿಗಳಿಗೆ ಡಾ.ರಾಜ್‌ಕುಮಾರ್ ರಂಜನ್ ಸಿಂಗ್ ಪತ್ನಿಯೂ ಆದ ಭೂಗೋಳಶಾಸ್ತ್ರದ ಪ್ರಾಧ್ಯಾಪಕಿ ಪ್ರೊ.ದೇಬಲದೇವಿ ಅವರು ಬಹುಮಾನ ವಿತರಿಸಿದರು.

ಸ್ನಾತಕ ವಿಭಾಗ- ಬಿಎಯಲ್ಲಿ ಆರ್.ಕುಸುಮಿತಾ, ಎನ್.ಪ್ರೇಮಾ, ಎಸ್.ಸ್ಟೆಫಿ ರುತ್, ಸ್ನಾತಕೋತ್ತರ ವಿಭಾಗ-ಎಂ.ಎ.ಅರ್ಥಶಾಸ್ತ್ರದಲ್ಲಿ ಬಿ.ಎಂ.ನೀಲಮ್ಮ, ಕೆ.ಕೆ.ಸಹನಾ, ಎಂಕಾಂನಲ್ಲಿ ಕೆ.ಎ.ಅನುಷಾ, ಎಸ್.ಸಂಗೀತಾ, ಎಂಎಸ್ಸಿ ರಸಾಯನಶಾಸ್ತ್ರದಲ್ಲಿ ಎಸ್.ಮಮತಾ, ಶ್ರೀಲಕ್ಷ್ಮಿ, ಬಿಎಸ್‌ಸಿಯಲ್ಲಿ ಎಸ್.ಸಹನಾ, ಜೆ.ಎಂ.ಅಂಕಿತಾ, ಬಿ.ಎಂ.ಹರ್ಷಿತಾ, ಬಿಕಾಂನಲ್ಲಿ ಕೆ.ಆರ್.ಐಶ್ವರ್ಯ, ಎಚ್.ಎಲ್.ಅರುಂಧತಿ, ಎಲ್.ದುರ್ಗಶ್ರೀ, ಬಿಬಿಎಯಲ್ಲಿ ಮೇಘನಾ ಎಸ್. ನಾಯಕ್, ಪಿ.ಮೌನ, ಕೆ.ಎಂ.ಪೊನ್ನಮ್ಮ, ಬಿಸಿಎಯಲ್ಲಿ ಎನ್.ದೀಪಿಕಾ, ಐ.ಖುಷ್ಬೂ, ಕೆ.ಎನ್.ವಿನುತಾ ಅವರಿಗೆ ಪ್ರಮಾಣ ಪತ್ರ ಹಾಗೂ ಪದಕ ವಿತರಿಸಲಾಯಿತು.



ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ನಡೆದ 13ನೇ ಪದವೀಧರರ ದಿನಾಚರಣೆಯಲ್ಲಿ ವಿದೇಶಾಂಗ ರಾಜ್ಯ ಸಚಿವ ಡಾ.ರಾಜ್‌ಕುಮಾರ್ ರಂಜನ್ ಸಿಂಗ್ ಮಾತನಾಡುತ್ತಿರುವುದು.

ಮೈಸೂರು,ಏ.30(ಎಂಟಿವೈ)-ದೇಶದ ಸಂಸ್ಕೃತಿ ಹಾಗೂ ಪರಂಪರೆ ಮಹತ್ವದ್ದಾಗಿದ್ದು, ಯುವಜನರು ಸಾಂಸ್ಕೃತಿಕ ಪರಿಸರ ಉಳಿಸಿ ಬೆಳೆಸುವ ಮಹತ್ತರ ಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದು ಕೇಂದ್ರ ಸರ್ಕಾರದ ಶಿಕ್ಷಣ ಮತ್ತು ವಿದೇಶಾಂಗ ರಾಜ್ಯ ಸಚಿವ ಡಾ.ರಾಜ್‌ಕುಮಾರ್ ರಂಜನ್ ಸಿಂಗ್ ಕರೆ ನೀಡಿದ್ದಾರೆ.

ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ 13ನೇ ಪದವೀಧರರ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಭಾರತೀಯ ಸಂಸ್ಕೃತಿಯ ಸಾರವೇ ಜ್ಞಾನ, ಕಲೆ, ನೈತಿಕತೆ ಮತ್ತು ನಂಬಿಕೆಯಾಗಿದೆ. ವಿದ್ಯಾರ್ಥಿಗಳು ದೇಶದ ಸಂಸ್ಕೃತಿ, ಪರಂಪರೆಯನ್ನು ಕಾಪಾಡಿ ಮುಂದಿನ ಪೀಳಿಗೆಗೆ ಉಳಿಸಬೇಕು. ಇದೇ ನಾವು ನಮ್ಮ ತಾಯಿ ನಾಡಿಗೆ ನೀಡುವ ಕೊಡುಗೆಯಾಗಿದೆ ಎಂದರು.

ಸಂಸ್ಕೃತಿ ಕಾಪಾಡಲು ಹಿಂಜರಿಯಬಾರದು. ವಸುದೈವ ಕುಟುಂಬಕಂ ಪದ್ಧತಿಯನ್ನು ನಂಬಿರುವ ಭಾರತದಲ್ಲಿ ಒಂದೇ ರೀತಿಯಲ್ಲಿ ಸಾಗಬೇಕು. ವಿಜ್ಞಾನ, ಮಾನವಿಕ ಯಾವುದೇ ಪದವಿ ಪಡೆದರೂ ನಿಮ್ಮ ಉತ್ಸಾಹ ಕಾಪಾಡಿಕೊಂಡು ಮುಂದಿನ ಗುರಿಯನ್ನು ತಲುಪಬೇಕು. ಎಂತಹ ಕಷ್ಟ ಪರಿಸ್ಥಿತಿ ಇದ್ದರೂ ಉತ್ಸಾಹ ಎಂಬುದು ಮನಸ್ಸಲ್ಲಿ ಇದ್ದರೆ ಸವಾಲುಗಳನ್ನು ಎದುರಿಸಲು ಸಹಕಾರಿಯಾಗಲಿದೆ ಎಂದರು.

ಶ್ರೇಷ್ಠ ಮತ್ತು ಪ್ರಾಚೀನ ನಾಗರಿಕತೆಯ ಸಾಂಸ್ಕೃತಿಕ ನೀತಿ ಪಾಲನೆ ನಮ್ಮೆಲ್ಲರ ಮೂಲ ಕರ್ತವ್ಯವಾಗಿದೆ. ಆದ್ದರಿಂದ ಹಿಂಜರಿಕೆಯನ್ನು ಬಿಟ್ಟು ಈ ನೆಲದ ಶ್ರೀಮಂತ ಮೌಲ್ಯವನ್ನು ಯುವ ಜನರು ಎತ್ತಿ ಹಿಡಿಯಬೇಕು. ಬಹಳ ಹಿಂದೆಯೇ ಭಾರತೀಯ ನಾಗರಿಕತೆಯ ಪರಿಕಲ್ಪನೆಯೇ ವಸುದೈವ ಕುಟುಂಬಕಂ (ಜಗತ್ತು ಒಂದೇ ಕುಟುಂಬ) ಆಗಿದೆ. ಅನಾದಿ ಕಾಲದಿಂದಲೂ ನಮ್ಮ ಸಂಸ್ಕೃತಿಯು ವಿಭಜಕ ರಾಜಕೀಯವನ್ನು ತಿರಸ್ಕರಿಸಿದೆ. ಎಲ್ಲರ ನಡುವೆ ಏಕತೆ ಮನೋಭಾವ ಕಾಯ್ದುಕೊಂಡಿದೆ. ಅದಕ್ಕೆ ವಿಶೇಷ ಒತ್ತು ನೀಡಿದೆ. ಆದ್ದರಿಂದ ಸಾಂಸ್ಕೃತಿಕ ಮೌಲ್ಯವನ್ನು ಮುಂದಿನ ಪೀಳಿಗೆಗೆ ಹಸ್ತಾಂತರಿಸುವ ಗುರುತರವಾದ ಜವಾಬ್ದಾರಿ ಯುವ ಜನರ ಮೇಲಿದೆ. ಈ ಕಾರ್ಯವನ್ನು ಸವಾಲಾಗಿ ಸ್ವೀಕರಿಸಿ ಮತ್ತು ಇದಕ್ಕಾಗಿ ಏಕ ಮನಸ್ಸಿನಿಂದ ಸಾಧಿಸಬೇಕು ಎಂದು ಸಲಹೆ ನೀಡಿದರು.

ಭೂಮಿ ಮೇಲಿರುವ ಎಲ್ಲಾ ಪ್ರಾಣಿಗಳು, ಪಕ್ಷಿಗಳು, ಮಾನವರು ಸೇರಿದಂತೆ ಎಲ್ಲರೂ ಒಟ್ಟಾಗಿ ಬಾಳಬೇಕು. ಭಾರತೀಯ ಸಂಸ್ಕೃತಿಯನ್ನು ತಿರಸ್ಕರಿಸದೆ ಅದನ್ನು ಜಗತ್ತಿನಲ್ಲಿ ಪ್ರಚುರಪಡಿಸಲು ಮುಂದಾಗಬೇಕು. ಭವಿಷ್ಯದಲ್ಲಿ ಸಮರ್ಥವಾಗಿ ಸವಾಲುಗಳನ್ನು ಎದುರಿಸಿದರೆ ಉದ್ಯೋಗಾವಕಾಶಗಳು ತಾನಾಗಿಯೇ ಒದಗಿ ಬರಲಿದೆ. ಶಿಕ್ಷಣ ಪದ್ಧತಿ ಗುರುಕುಲ ಮಾದರಿಯಲ್ಲಿ ಸಿಗಬೇಕು. ಶಿಕ್ಷಣ ಪದ್ಧತಿ ಬದಲಾವಣೆಯಾದರೂ ಗುರುಕುಲ ಮತ್ತು ಪರಂಪರೆ ಶಿಕ್ಷಣ ನೀಡಬೇಕು. ಗುರುಕುಲ ರೂಪದಲ್ಲಿ ಪ್ರಾಚೀನ ಭಾರತವು ಶ್ರೀಮಂತ ಶಿಕ್ಷಣ ವ್ಯವಸ್ಥೆ ಹೊಂದಿತ್ತು. 'ಗುರುಕುಲ' ಕೇವಲ ಗುರು ಮತ್ತು ಶಿಷ್ಯರ ನಡುವೆ ಸಹ ಜೀವನದ ಸಂಬಂಧವನ್ನು ಪ್ರೋತ್ಸಾಹಿಸಿತು. ಇದುವೇ ಎಲ್ಲಾ ಜೀವಿಗಳ ನಡುವೆ ಸಾಮರಸ್ಯದ ಜೀವನಕ್ಕೂ ಆದ್ಯತೆ ನೀಡಿತು. ಈ ರೀತಿಯ ಸಹಜೀವನವು ನಮ್ಮ ಅಸ್ತಿತ್ವದ ಸಾರವಾಗಿದೆ ಎಂದು ವಿವರಿಸಿದರು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಶಾಸಕ ಎಲ್.ನಾಗೇಂದ್ರ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ, ಪ್ರಾಂಶುಪಾಲ ಡಾ. ಕೆ.ವಿ.ಸುರೇಶ್, ಎಂ.ಎಂ.ಸ್ವಾಮಿ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

01.05.2022 ಭಾನುವಾರ, ಮಳೆ ನಕ್ಷತ್ರ : ಭರಣಿ 27.04.2022 ರಿಂದ 10.05.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ
ತಿಥಿ: ಪ್ರತಿಪತ್, ನಕ್ಷತ್ರ: ಭರಣಿ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಸುಪ್ರಿಯ ಆಸ್ಪತ್ರೆ:** ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಹಿನಕಲ್, ಬೆಳಗ್ಗೆ 9ರಿಂದ.

■ **ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ :** ಸೂಪರ್ ಸ್ಪೆಷಾಲಿಟಿ ಓಪಿಡಿ ಸೆಂಟರ್ ಉದ್ಘಾಟನೆ, ಸ್ಥಳ: ಫ್ಲೋರ್ ಚೇಂಬರ್ಸ್ ಡಯಾಗ್ನಾಸ್ಟಿಕ್ ಸೆಂಟರ್, ಕುವೆಂಪುನಗರ, ಬೆಳಗ್ಗೆ 9ಕ್ಕೆ.

■ **ಶ್ರೀ ಬಸವೇಶ್ವರ ವಧು-ವರರ ವಿವಾಹ ವೇದಿಕೆ, ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ :** ವೀರಶೈವ ಲಿಂಗಾಯತ ವಧು-ವರರ ಸಮಾವೇಶ, ಸಾನ್ನಿಧ್ಯ : ಬಂಡಳ್ಳಿ ದೊಡ್ಡಮಠದ ಶ್ರೀ ಫಲಹಾರ ಪ್ರಭುದೇವ ಸ್ವಾಮೀಜಿ, ಉದ್ಘಾಟನೆ: ಮೃಗಾಲಯ ಪ್ರಾಧಿಕಾರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 9 ರಿಂದ.

■ **ಶ್ರೀ ಸರಸ್ವತಿ ಸಂಗೀತ ಅಕಾಡೆಮಿ:** ವಿದುಷಿ ಜ್ಯೋಷ್ನರ್ ಶ್ರೀಕಾಂತ್‌ರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಾಗಾರ, ಸ್ಥಳ: ವಿದ್ಯಾಭಾರತಿ ಪ್ರಾರ್ಥನಾ ಮಂದಿರ, ಮಾತೃ ಮಂಡಳಿ ವೃತ್ತ, ಬೆಳಗ್ಗೆ 9.30 ರಿಂದ.

■ **ಶ್ರೀ ಪಂಚಶನೇಶ್ವರಸ್ವಾಮಿ ದೇವಸ್ಥಾನ :** ಶ್ರೀ ಪಂಚಶನೇಶ್ವರಸ್ವಾಮಿ ಆರಾಧನಾ ಮಹೋತ್ಸವ ಹಾಗೂ ಮಲೆಯಾಳದ ಹುತ್ತೂರಮ್ಮನ ಜಾತ್ರೆ, ಸಾನ್ನಿಧ್ಯ : ಬೆಂಗಳೂರು ಪರ್ಯಾಯ ಮಠದ ಶ್ರೀ ಕುಮಾರ ಚಂದ್ರಶೇಖರ ಸ್ವಾಮೀಜಿ, ಶ್ರೀ ತ್ರಿನೇತ್ರ ಮಹಾನಂದಯೋಗಿ ಸ್ವಾಮೀಜಿ, ಶ್ರೀ ಸೋಮನಾಥ ಸ್ವಾಮೀಜಿ, ಶ್ರೀ ಶಿವಾನಂದಪುರಿ ಮಹಾಸ್ವಾಮೀಜಿ, ಶ್ರೀ ಮುಮ್ಮಡಿ ಶಿವಾಚಾರ್ಯ ಸ್ವಾಮೀಜಿ, ಅಧ್ಯಕ್ಷತೆ : ಶಾಸಕ ಎಸ್.ಎ. ರಾಮದಾಸ್, ಮುಖ್ಯ ಅತಿಥಿಗಳು : ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಶಾಸಕ ಜಿ.ಟಿ.ದೇವೇಗೌಡ, ಸಂಸದ ಪ್ರತಾಪ್ ಸಿಂಹ, ಶಾಸಕ ಸಿ.ಎಸ್.ಪುಟ್ಟರಾಜು, ಮಾಜಿ ಸಂಸದ ಆರ್.ಧ್ರುವನಾರಾಯಣ್, ಸ್ಥಳ: ಸಿದ್ದಾರ್ಥ ಲೇಔಟ್ ಕಮಾನ್ ಗೇಟ್ ಪಕ್ಕ, ಲಲಿತ ಮಹಲ್ ಹೋಟೆಲ್ ಮುಂಭಾಗದ ಆವರಣ, ಬೆಳಿಗ್ಗೆ 9.45 ರಿಂದ.

■ **ಶ್ರೀ ಮಾತಾ ದುರ್ಗಾ ಪರಮೇಶ್ವರಿ ಚಾರಿಟಬಲ್ ಟ್ರಸ್ಟ್ :** ಶಂಕರಾಚಾರ್ಯ ಜಯಂತ್ಯುತ್ಸವದ ಅಂಗವಾಗಿ ಧಾರ್ಮಿಕ ಕಾರ್ಯಗಳು, ಉಪಸ್ಥಿತರು : ಶಾಸಕರಾದ ಎಸ್.ಎ.ರಾಮದಾಸ್, ಜಿ.ಟಿ.ದೇವೇಗೌಡ, ಸಾ.ರಾ. ಮಹೇಶ್, ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ್ ಹಾರನಹಳ್ಳಿ, ಹಿರಿಯ ವಕೀಲ ಓ. ಶ್ಯಾಮ್‌ಭಟ್, ಜೆಎಸ್‌ಎಸ್ ಗ್ರೂಪ್‌ನ ಶ್ರೀಹರಿ, ಮೈಲ್ಯಾಕ್ ಅಧ್ಯಕ್ಷ ಎನ್.ವಿ. ಫಣೀಶ್, ಮಹರ್ಷಿ ಸ್ಕೂಲ್ ಅಧ್ಯಕ್ಷ ಭವಾನಿ ಶಂಕರ್, ಸ್ಥಳ: ಶಂಕರ ಮಠ, ಬೆಳಗ್ಗೆ 10ಕ್ಕೆ.

■ **ಭಾರತೀಯ ನೃತ್ಯ ಕಲಾ ಪರಿಷತ್ :** ವಿಶ್ವ ನೃತ್ಯ ದಿನ, ಉದ್ಘಾಟನೆ : ಶಾಸಕ ಎಲ್. ನಾಗೇಂದ್ರ, ಮುಖ್ಯ ಅತಿಥಿಗಳು : ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಅಧ್ಯಕ್ಷತೆ : ಪರಿಷತ್ ಅಧ್ಯಕ್ಷೆ ವಿದುಷಿ ವಿದ್ಯಾಮೂರ್ತಿ, ಉಪಸ್ಥಿತರು : ಪರಿಷತ್ ಉಪಾಧ್ಯಕ್ಷ ವಿದ್ವಾನ್ ಡಾ. ಕೆ. ಕುಮಾರ್, ಕಾರ್ಯದರ್ಶಿ ಡಾ. ಕುಮುದಿನಿ ಅಚ್ಚಿ, ಸ್ಥಳ: ಗಾನಭಾರತೀ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ 10.30 ರಿಂದ.

■ **ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ :** ಕಾರ್ಮಿಕ ದಿನಾಚರಣೆ ಪ್ರಯುಕ್ತ ಮೆರವಣಿಗೆ, ಸ್ಥಳ: ಸ್ವಾತಂತ್ರ್ಯ ಯೋಧರ ಉದ್ಯಾನವನ, ಬೆಳಗ್ಗೆ 10.30 ರಿಂದ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಹಿಮಾಲಯ ಪ್ರತಿಷ್ಠಾನ, ಕನ್ನಡ ಸಾಹಿತ್ಯ ಕಲಾಕೂಟ:** ಕಿರಣ್ ಸಿಡ್ಲೇಹಳ್ಳಿ ಅವರ ಕೃತಿಗಳ ಲೋಕಾರ್ಪಣೆ, ಕೃತಿಗಳ ಬಿಡುಗಡೆ: ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಅಧ್ಯಕ್ಷತೆ: ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ಬೆಳಗ್ಗೆ 11.30ಕ್ಕೆ

■ **ಬಸವ ಸಮಿತಿ :** ಶರಣ ಸಂಗಮ, ಅಕ್ಕಮಹಾದೇವಿ ಜಯಂತಿ ಪ್ರಯುಕ್ತ ರಸಪ್ರಶ್ನೆ, ವಚನ ಗಾಯನ ಸ್ಪರ್ಧೆ, ಶರಣರ ಪಾತ್ರಾಭಿನಯ ಸ್ಪರ್ಧೆ, ವಿಶೇಷ ಅತಿಥಿಗಳು : ಶಕುಂತಲಾ ಜಯದೇವ್, ಅಧ್ಯಕ್ಷತೆ : ಸಮಿತಿ ಅಧ್ಯಕ್ಷ ಹೆಚ್.ವಿ. ಬಸವರಾಜು, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಗೃಹಶೋಭೆ ಇಂಟರ್‌ನ್ಯಾಷನಲ್ ಟ್ರೇಡ್ ಫೇರ್ :** ಗೃಹಶೋಭೆ ಜೀವನ ಶೈಲಿ ವಸ್ತುಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ ಅಂಡ್ ಗೈಡ್ಸ್ ಗ್ರೌಂಡ್, ಬೆಳಗ್ಗೆ 11ರಿಂದ.

■ **ಅವನಿ ಪ್ರಕಾಶನ, ಕಾರ್ತಿಕ್ ಎಂಟರ್‌ಪ್ರೈಸಸ್:** ಪಿ.ಎಂ.ಮನೋಜ್ (ದೇವೀಪುತ್ರನ್) ಅವರ 'ಭಾವೆ' (ಕಾದಂಬರಿ) ಮತ್ತು ಸಣ್ಣ ಕಥೆಗಳು ಬಿಡುಗಡೆ ಸಮಾರಂಭ, ಕೃತಿ ಬಿಡುಗಡೆ: ಸಾಹಿತಿ ಭಾರದ್ವಾಜ ಕೆ. ಆನಂದತೀರ್ಥ, ಮುಖ್ಯ ಅತಿಥಿಗಳು : ಸಾಹಿತಿ ಪೂರೀಗಾಲಿ ಮರಡೇಶಮೂರ್ತಿ, ಶಶಿಧರ್, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ.

■ **ಸಫಾಯಿ ಕರ್ಮಚಾರಿಗಳ ಕ್ಷೇಮಾಭಿವೃದ್ಧಿ ಸಮಿತಿ:** ಡಾ.ಬಿ.ಆರ್.ಅಂಬೇಡ್ಕರ್‌ರವರ 131ನೇ ಜನ್ಮ ದಿನಾಚರಣೆ ಹಾಗೂ ಕಾರ್ಮಿಕರ ದಿನಾಚರಣೆ, ಮುಖ್ಯ ಅತಿಥಿಗಳು: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಸಂಸದ ಆರ್. ಧ್ರುವನಾರಾಯಣ್, ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್, ವಾಸು, ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ, ಅಧ್ಯಕ್ಷತೆ : ಸಮಿತಿ ಅಧ್ಯಕ್ಷ ಶಂಕರ್, ಉಪಸ್ಥಿತರು : ಗೌರವ ಅಧ್ಯಕ್ಷ ಎಂ.ನಾಗರಾಜು, ಸ್ಥಳ: ಕಚೇರಿ ಆವರಣ, ಮಂಡಿ ಮೊಹಲ್ಲಾ, ಸಂಜೆ 4ಕ್ಕೆ.

■ **ಶ್ರೀ ಶಿರಡಿ ಸಾಯಿ ಸೇವಾಶ್ರಮ ಟ್ರಸ್ಟ್:** ಶ್ರೀ ಶಿರಡಿ ಸಾಯಿಬಾಬಾರವರ ಪೂಜೆ, ಹೋಮ, ಭಜನೆ, ಆರಾಧನೆ, ಪ್ರಸಾದ ವಿನಿಯೋಗ, ಸ್ಥಳ: ಬಾಬಾ ಮಂದಿರ, ಹೆಬ್ಬಾಳು 2ನೇ ಹಂತ, ಸಂಜೆ 4ರಿಂದ.

■ **ಮೈಸೂರು ಉತ್ಸವ :** ಮುಖ್ಯ ಅತಿಥಿಗಳು : ಶಾಸಕರಾದ ಎಸ್.ಎ. ರಾಮದಾಸ್, ಎಲ್. ನಾಗೇಂದ್ರ, ಸ್ಥಳ: ಜೆಎಸ್‌ಎಸ್ ಮೈದಾನ, ದೊಡ್ಡಕೆರೆ ಮೈದಾನದ ಪಕ್ಕ, ಸಂಜೆ 6ಕ್ಕೆ.

■ **ರಂಗಾಯಣ :** ಭಾರತೀಯ ರಂಗ ವಿದ್ಯಾಲಯದ ವಿದ್ಯಾರ್ಥಿಗಳಿಂದ 'ಚೆಕ್ಕು-ಬಾವಿ' ನಾಟಕ ಪ್ರದರ್ಶನ, ನಿರ್ದೇಶನ : ಎಸ್. ರಾಮನಾಥ, ರಚನೆ : ಶಾ. ಬಾಲುರಾವ್, ಸ್ಥಳ: ಭೂಮಿಗೀತ ರಂಗ ಮಂದಿರ, ಸಂಜೆ 6.30ಕ್ಕೆ

■ **ಇಂಡಿಯನ್ ಥಿಯೇಟರ್ :** ಭೀಮಣ್ಣನ ಮಗ ನಾಟಕ ಪ್ರದರ್ಶನ, ನಿರ್ದೇಶನ : ಪ್ರೊ. ಹೆಚ್.ಎಸ್. ಉಮೇಶ್, ಸ್ಥಳ: ನಟನ ರಂಗಮಂದಿರ, ಸಂಜೆ 6.30ಕ್ಕೆ.

■ **ನೃತ್ಯಗಿರಿ ಪ್ರದರ್ಶಕ ಕಲೆಗಳ ಸಂಶೋಧನಾ ಕೇಂದ್ರ:** ಫಡ್ಕೆ ಕಲಾ ಸ್ಮೃತಿ, ಬೆಳಗ್ಗೆ 10ರಿಂದ ಹರೀಶ್ ಪಾಂಡವ ಅವರಿಂದ ಸ್ಯಾಕ್ಸೋಫೋನ್ ವಾದನ, ಟಿ.ಎಸ್‌ಯಶಸ್ವೀ-ಪಿಟೀಲು, ವಿಕ್ರಮ್ ಭಾರದ್ವಾಜ್ -ಮೃದಂಗ, ಶಮಿತ್ ಎಸ್.ಗೌಡ-ಘಟಂ, ಉದ್ಘಾಟನೆ: ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಚಾರಕ ಪ.ರಾ.ಕೃಷ್ಣಮೂರ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಹೆಚ್.ಚೆನ್ನಪ್ಪ, ಬೆಳಗ್ಗೆ 11ರಿಂದ ಪಂಡಿತ್ ದತ್ತಾತ್ರೇಯ ವೇಳಂಕರ್ ಅವರಿಂದ ಹರಿಕಥಾ ಸಂಕೀರ್ತನೆ, ಯೋಗೀಶ್ ಭಟ್-ತಬಲ, ಸತ್ಯಜಿತ್-ಹಾರ್ಮೋನಿಯಂ, ಅಭಯ್ ದಾಮ್ಲೆ-ತಾಳ, ಬೆಳಗ್ಗೆ 11.45 ರಿಂದ ಏಕವ್ಯಕ್ತಿ ತಾಳಮದ್ದಲೆ 'ಶೂರ್ಪನಖಿ', ಮಧ್ಯಾಹ್ನ 2ರಿಂದ ಚಿತ್ಪಾವನ ಮಹಿಳಾ ಯಕ್ಷಗಾನ ಮಂಡಳಿಯಿಂದ ಬಡಗುತಿಟ್ಟು ಯಕ್ಷಗಾನ ಪ್ರಸಂಗ 'ಪಂಚವಟಿ', ಸಂಜೆ 4ರಿಂದ ವಿದುಷಿ ಸಿಂಧು ಕಿರಣ್ ಮತ್ತು ತಂಡದಿಂದ ಒಡಿಸ್ಸಿ ನೃತ್ಯ, ಸಂಜೆ 4.45 ರಿಂದ ವಿದುಷಿ ರೇಖಾ ರಾಜು ಮತ್ತು ತಂಡದಿಂದ ಮೋಹಿನಿ ಅಟ್ಟಂ, ಸಂಜೆ 5.30ರಿಂದ ವಿದ್ವಾನ್ ಮೈಸೂರು ನಾಗರಾಜ್ ಮತ್ತು ಶಿಷ್ಯ ವೃಂದದವರಿಂದ ಕಥಕ್ ನೃತ್ಯರೂಪಕ-ಬಿಂದಾ ಕೆ.ಶ್ಯಾಮ್', ಸಂಜೆ 6.30ರಿಂದ ವಿದ್ವಾನ್ ವಿಜಯಕುಮಾರ್ ಅವರಿಂದ ಭರತನಾಟ್ಯ, ವಿದ್ವಾನ್ ಪ್ರಸನ್ನಕುಮಾರ್-ನಟುವಾಂಗ, ವಿದ್ವಾನ್ ರೋಹಿತ್ ಭಟ್ ಉಪ್ಪೂರ್-ಹಾಡುಗಾರಿಕೆ, ವಿದ್ವಾನ್ ಲಿಂಗರಾಜು-ಮೃದಂಗ, ವಿದ್ವಾನ್ ಎ.ಪಿ.ಕೃಷ್ಣಪ್ರಸಾದ್-ಕೊಳಲು, ಸ್ಥಳ: ಶ್ರೀ ರಮಾಗೋವಿಂದ ರಂಗಮಂದಿರ, ನೃಪತುಂಗ ಶಾಲಾ ಆವರಣ.

■ **ಶ್ರೀ ಹೊಸಮಠ, ಜಾಗತಿಕ ಲಿಂಗಾಯತ ಮಹಾಸಭಾ, ಮೈಸೂರು ಜಿಲ್ಲಾ ಘಟಕ, ರಾಷ್ಟ್ರೀಯ ಬಸವ ದಳ, ಬಸವ ಕೇಂದ್ರ, ಶರಣ ಮಂಡಳಿ :** ಅಕ್ಕಮಹಾದೇವಿ ಹಾಗೂ ಬಸವ ಜಯಂತ್ಯುತ್ಸವ, ವಿದ್ವಾನ್ ಗುರುಶಾಂತ ಮಹಾಸ್ವಾಮಿಗಳವರ ಪುಣ್ಯಾರಾಧನೆ, ಸಾನ್ನಿಧ್ಯ : ಶ್ರೀ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ಬೆಳಗ್ಗೆ 6ಕ್ಕೆ ವಿದ್ವಾನ್ ಶ್ರೀ ಗುರುಶಾಂತ ಮಹಾಸ್ವಾಮಿಗಳವರ ಪುಣ್ಯಾರಾಧನೆ, ಬೆಳಗ್ಗೆ 8.30ಕ್ಕೆ ಲಿಂಗಾಯತ ಹೆಣ್ಣು ಮಕ್ಕಳಿಗೆ ಲಿಂಗ ದೀಕ್ಷಾ ಸಂಸ್ಕಾರ, ಸಂಜೆ 5.30ಕ್ಕೆ ಅಕ್ಕಮಹಾದೇವಿ ಜಯಂತಿ, ಸಾನ್ನಿಧ್ಯ : ಶ್ರೀ ಬಸವಜ್ಞಾನ ಮಂದಿರದ ಪೀಠಾಧ್ಯಕ್ಷೆ ಡಾ. ಮಾತೆ ಬಸವಾಂಜಲಿ ದೇವಿ, ಡಾ. ಲತಾ ಮೈಸೂರು ಅವರಿಂದ ಅಕ್ಕಮಹಾದೇವಿಯ ಪ್ರಸ್ತುತತೆ ಕುರಿತು ಉಪನ್ಯಾಸ, ಅಕ್ಕಮಹಾದೇವಿ ತೈಲಚಿತ್ರ ಲೋಕಾರ್ಪಣೆ : ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು ಪ್ರಾಚಾರ್ಯರಾದ ಡಾ. ಎಂ. ಶಾರದ, ಸನ್ಮಾನ : ಸಮಾಜ ಸೇವಕರಾದ ಎಂ.ಡಿ. ಪ್ರಭಾಮಣಿ, ಸ್ಥಳ : ಶ್ರೀ ಹೊಸಮಠದ ಆವರಣ.

■ **ವೀರ ವನಿತೆ ರಾಣಿ ಚನ್ನಮ್ಮ ಸ್ವಯಂ ಸೇವಾ ಸಂಘ, ಕುವೆಂಪುನಗರ ವೀರಶೈವ ಸ್ನೇಹ ಬಳಗ, ಬೋಗಾದಿ ಬಸವ ಬಳಗ ಸೇವಾ ಟ್ರಸ್ಟ್:** ಶಿವಕುಮಾರ ಸ್ವಾಮೀಜಿ ಜಯಂತಿ ಅಂಗವಾಗಿ ಗುರುವಂದನಾ ಕಾರ್ಯಕ್ರಮ, ಉದ್ಘಾಟನೆ: ವಸತಿ ಸಚಿವ ವಿ.ಸೋಮಣ್ಣ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಎಲ್.ವಿ.ಲೋಕೇಶ್‌ಕುಮಾರ್, ಮುಖ್ಯ ಅತಿಥಿಗಳು: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಗೌರವ ಸಲಹೆಗಾರ ನಾಡೋಜ ಡಾ.ಗೊ.ರು. ಚನ್ನಬಸಪ್ಪ, ಶಾಸಕರಾದ ಜಿ.ಟಿ.ದೇವೇಗೌಡ, ಸಿ.ಎಸ್.ನಿರಂಜನ್‌ಕುಮಾರ್, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಕ್ಷರಿ, ಸ್ಥಳ: ಎಸ್.ಆರ್.ಸುಬ್ಬರಾವ್ ಉದ್ಯಾನವನ, ನಿವೇದಿತಾನಗರ, ಸಂಜೆ 6ಕ್ಕೆ.

■ **ಕುಂಬಾರಕೊಪ್ಪಲು ಅಂಬೇಡ್ಕರ್ ಬಡಾವಣೆಯ ಶ್ರೀ ಆದಿಶಕ್ತಿ ಕಾಳಿಕದೇವಿ ಸೇವಾ ಸಮಿತಿ :** ಡಾ.ಬಿ. ಆರ್.ಅಂಬೇಡ್ಕರ್ ಅವರ 131ನೇ ಜಯಂತಿ, ಶ್ರೀ ಬಸವಣ್ಣನವರ 889ನೇ ಜಯಂತಿ ಹಾಗೂ ಕಾರ್ಮಿಕ ದಿನಾಚರಣೆ, ಉದ್ಘಾಟನೆ : ಸಂಸದ ವಿ.ಶ್ರೀನಿವಾಸ ಪ್ರಸಾದ್ , ಅಧ್ಯಕ್ಷತೆ: ಶಾಸಕ ಎಲ್.ನಾಗೇಂದ್ರ, ಮುಖ್ಯ ಭಾಷಣ : ಶಾಸಕ ಎನ್.ಮಹೇಶ್, ಮುಖ್ಯ ಅತಿಥಿಗಳು : ಮಾಜಿ ಶಾಸಕ ವಾಸು, ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡ, ಅಕ್ಕ ಐಎಎಸ್ ಅಕಾಡೆಮಿಯ ಡಾ.ಶಿವಕುಮಾರ್, ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಬಿಜೆಪಿ ಮುಖಂಡ ವೈ.ವಿ.ರವಿಶಂಕರ್, ಸ್ಥಳ: ಕುಂಬಾರಕೊಪ್ಪಲು, ಸಂಜೆ 7ಕ್ಕೆ.

ಮೈಸೂರು ಹಾಗೂ ಸುತ್ತಮುತ್ತ ನಾಳೆ...



ನಾಳಿನ ಪಂಚಾಂಗ

02.05.2022 ಸೋಮವಾರ, ಮಳೆ ನಕ್ಷತ್ರ : ಭರಣಿ 27.04.2022 ರಿಂದ 10.05.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ
ತಿಥಿ: ದ್ವಿತೀಯ, ನಕ್ಷತ್ರ: ಕೃತ್ತಿಕಾ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಆರೈಕೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9.30 ರಿಂದ.

■ **ಶ್ರೀ ಹೊಸಮಠ, ಜಾಗತಿಕ ಲಿಂಗಾಯತ ಮಹಾಸಭಾ, ಜಿಲ್ಲಾ ಘಟಕ, ರಾಷ್ಟ್ರೀಯ ಬಸವ ದಳ, ಬಸವ ಕೇಂದ್ರ, ಶರಣ ಮಂಡಳಿ:** ಬಸವ ಜಯಂತಿ, ಸಾನ್ನಿಧ್ಯ : ಶ್ರೀ ಮುರುಘರಾಜೇಂದ್ರ ಮಠದ ಡಾ.ಶಿವಮೂರ್ತಿ ಮುರುಘಾ ಶರಣರು, ರಾವಂದೂರು ಶ್ರೀ ಮುರುಘಾ ಮಠದ ಶ್ರೀ ಮೋಕ್ಷಪತಿ ಸ್ವಾಮಿಗಳು, ಮುಖ್ಯ ಅತಿಥಿಗಳು: ಎಡಿಸಿ ಡಾ.ಮಂಜುನಾಥಸ್ವಾಮಿ, ಸ್ಥಳ : ಶ್ರೀ ಹೊಸಮಠದ ಆವರಣ, ಬೆಳಗ್ಗೆ 10.30 ರಿಂದ.

■ **ಗೃಹಶೋಭೆ ಇಂಟರ್‌ನ್ಯಾಷನಲ್ ಟ್ರೇಡ್ ಫೇರ್ :** ಗೃಹಶೋಭೆ ಜೀವನ ಶೈಲಿ ವಸ್ತುಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ ಅಂಡ್ ಗೈಡ್ಸ್ ಗ್ರೌಂಡ್, ಬೆಳಗ್ಗೆ 11ರಿಂದ.

■ **ಚಾರು ಸಾಂಸ್ಕೃತಿಕ ಪ್ರತಿಷ್ಠಾನ:** ಕಟ್ಟಡ ಉದ್ಘಾಟನಾ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉಪಸ್ಥಿತರು: ವಿದ್ವಾನ್ ಎಚ್.ವಿ.ನಾಗರಾಜರಾವ್, ಕಾಲೇಜು ಶಿಕ್ಷಣ ಇಲಾಖೆ ವಿಶ್ರಾಂತ ಜಂಟಿ ನಿರ್ದೇಶಕ ಪ್ರೊ.ಟಿ.ಎನ್.ಪ್ರಭಾಕರ, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಬಿ.ವಿ. ವಸಂತಕುಮಾರ್, ಅಧ್ಯಕ್ಷತೆ: ದೀನಬಂಧು ಟ್ರಸ್ಟ್ ಸಂಸ್ಥಾಪಕ ಪ್ರೊ. ಜಿ.ಎಸ್.ಜಯದೇವ್, ಸ್ಥಳ: ಬ್ಯಾಂಕ್ ನೌಕರರ ಕ್ಷೇಮಾಭಿವೃದ್ಧಿ ಸಂಘ, ವರ್ತುಲ ರಸ್ತೆ, ಸಂಜೆ 4.30ಕ್ಕೆ.

■ **ಮೈಸೂರು ಉತ್ಸವ :** ಮುಖ್ಯ ಅತಿಥಿಗಳು : ಶಾಸಕರಾದ ಎಸ್.ಎ. ರಾಮದಾಸ್, ಎಲ್. ನಾಗೇಂದ್ರ, ಸ್ಥಳ: ಜೆಎಸ್‌ಎಸ್ ಮೈದಾನ, ದೊಡ್ಡಕೆರೆ ಮೈದಾನದ ಪಕ್ಕ, ಸಂಜೆ 6ಕ್ಕೆ.

ಕೊಡಗಿನಿಂದ ಬಂದ ಜನತಾ ಜಲಧಾರೆ ಯಾತ್ರೆಗೆ ಮೈಸೂರಲ್ಲಿ ಅದ್ಧೂರಿ ಸ್ವಾಗತ

- ಮೈಸೂರಲ್ಲಿ ಯಾತ್ರೆಯೊಂದಿಗೆ ಜೆಡಿಎಸ್ ಕಾರ್ಯಕರ್ತರ ಬೃಹತ್ ಬೈಕ್ ರ್‍ಯಾಲಿ
- ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಂತರ ಕಳಸ್ತವಾಡಿಯಲ್ಲಿ ಮಂಡ್ಯಕ್ಕೆ ಬೀಳ್ಕೊಡುಗೆ





ಮೈಸೂರು, ಏ.30– ಕೊಡಗಿನ ತಲ ಕಾವೇರಿಯಲ್ಲಿ ಏ.16ರಂದು ಚಾಲನೆ ಗೊಂಡ ಜಾತ್ಯತೀತ ಜನತಾದಳದ 'ಜನತಾ ಜಲಧಾರೆ' ಯಾತ್ರೆಯ ರಥವು ಶನಿವಾರ ಮೈಸೂರು ನಗರದಲ್ಲಿ ಬೈಕ್ ರ್‍ಯಾಲಿಯೊಂದಿಗೆ ಸಂಚರಿಸಿತು.

ಅಂದು ತಲಕಾವೇರಿಯಲ್ಲಿ ಶಾಸಕ ಸಾ.ರಾ.ಮಹೇಶ್ ಅವರಿಂದ ಚಾಲನೆ ಗೊಂಡಿದ್ದ ಜಲಧಾರೆ ರಥ ಕೊಡಗಿನಲ್ಲಿ ಸಂಚರಿಸಿದ ನಂತರ ಶುಕ್ರವಾರ ಹುಣಸೂರಿಗೆ ತಲುಪಿತ್ತು. ಈ ರಥವು ಇಂದು ಮೈಸೂರು ನಗರವನ್ನು ಪ್ರವೇಶಿಸುವ ಮುನ್ನಾ, ಇಲವಾಲದ ಗಣಪತಿ ದೇವಾಲಯದ ಬಳಿ ಜಲಧಾರೆ ರಥಕ್ಕೆ ಶಾಸಕರಾದ ಸಾ.ರಾ. ಮಹೇಶ್, ಅಶ್ವಿನ್‌ಕುಮಾರ್, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಸೇರಿದಂತೆ ಜೆಡಿಎಸ್ ಮುಖಂಡರು ಮತ್ತು ಕಾರ್ಯಕರ್ತರು ಹಾಗೂ ಗ್ರಾಮಸ್ಥರು ವಿಶೇಷ ಪೂಜೆ ಸಲ್ಲಿಸುವ ಮೂಲಕ ಅದ್ಧೂರಿಯಾಗಿ ಬರಮಾಡಿಕೊಂಡರು.

ಜಲಧಾರೆ ರಥವು ಇಲವಾಲ ಪ್ರವೇಶಿಸುತ್ತಿದ್ದಂತೆಯೇ ಕಾರ್ಯಕರ್ತರು ಪಟಾಕಿ ಸಿಡಿಸಿ ಸಂಭ್ರಮಿಸಿದರು. ಮಹಿಳೆಯರು ಪೂರ್ಣಕುಂಭ ಸ್ವಾಗತ ನೀಡಿ ದೇವಸ್ಥಾನದವರೆಗೂ ಸಾಗಿದರು. ನಂತರ ದೇವಸ್ಥಾನದ ಬಳಿ ವಿಶೇಷ ಪೂಜೆ ಸಲ್ಲಿಸಿ ಬೈಕ್ ರ್‍ಯಾಲಿಗೆ ಚಾಲನೆ ನೀಡಲಾಯಿತು. ಸುಮಾರು 600 ಜೆಡಿಎಸ್ ಕಾರ್ಯಕರ್ತರು ತಮ್ಮ ಬೈಕ್‌ಗಳೊಂದಿಗೆ ರ್‍ಯಾಲಿಯಲ್ಲಿ ಬರುವುದಾಗಿ ದಾಖಲಿಸಿಕೊಂಡಿದ್ದರಾದರೂ ಅದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಬೈಕ್‌ಗಳು ಆಗಮಿಸಿದ್ದವು. ವಿಧಾನ ಪರಿಷತ್ ಸದಸ್ಯ ಸಿ.ಎಸ್. ಮಂಜೇಗೌಡ ಚಾಲನೆ ಮಾಡಿದ ಸ್ಕೂಟರ್‌ನಲ್ಲಿ ಶಾಸಕ ಸಾ.ರಾ.ಮಹೇಶ್ ಕುಳಿತು ಜಲಧಾರೆ ಯಾತ್ರೆಯ ಮುಂಚೂಣಿಯಲ್ಲಿ ಸಾಗಿದರು.

ಯಾತ್ರೆ ಮೈಸೂರಿನ ಮೆಟ್ರೋ ಪೋಲ್ ವೃತ್ತ ತಲುಪುತ್ತಿದ್ದಂತೆ ಮೈಸೂರಿನ ಜೆಡಿಎಸ್ ಕಾರ್ಯಕರ್ತರು ರಥವನ್ನು ಅದ್ಧೂರಿಯಾಗಿ ಸ್ವಾಗತಿಸಿದರು. ಸಾವಿರಾರು ಕಾರ್ಯಕರ್ತರು ರಥದ ಮುಂದೆ ಸಾಗಿದ್ದು, ಈ ಯಾತ್ರೆಯು ಮೆಟ್ರೋಪೋಲ್ ವೃತ್ತದಿಂದ ಜೆಎಲ್‌ಬಿ ರಸ್ತೆ ರಾಮಸ್ವಾಮಿ ಸರ್ಕಲ್, ಚಾಮರಾಜ ಜೋಡಿ ರಸ್ತೆ, ಸಂಸ್ಕೃತ ಪಾಠಶಾಲೆ ಸರ್ಕಲ್, ಹಾರ್ಡಿಂಜ್ ಸರ್ಕಲ್, ಬಿ.ಎನ್.ರಸ್ತೆ, ಫೈವ್ ಲೈಟ್ ಸರ್ಕಲ್, ಅಶೋಕ ರಸ್ತೆ ಫೌಂಟನ್ ಸರ್ಕಲ್ ಮಾರ್ಗವಾಗಿ ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಸಾಗಿ ಕಳಸ್ತವಾಡಿ ತಲುಪಿತು.

ಜಲಧಾರೆ ಯಾತ್ರೆ ಫೌಂಟನ್ ಸರ್ಕಲ್ ತಲುಪಿದಾಗ ಹೆಚ್ಚಿನ ಸಂಖ್ಯೆಯ ಮುಸ್ಲಿಂ ಕಾರ್ಯಕರ್ತರು ರಥಕ್ಕೆ ಅದ್ಧೂರಿ ಸ್ವಾಗತ ನೀಡಿದರು. ಎನ್.ಆರ್.ಮೊಹಲ್ಲಾ ದರ್ಗಾವೊಂದರ ಮುಂಭಾಗ ಯಾತ್ರೆ ತೆರಳಿದಾಗ ಸಾ.ರಾ.ಮಹೇಶ್, ಸಿ.ಎನ್.ಮಂಜೇಗೌಡ, ಅಶ್ವಿನ್‌ಕುಮಾರ್ ಮುಂತಾದವರು ದರ್ಗಾಗೆ ತೆರಳಿ ಪ್ರಾರ್ಥನೆ ಸಲ್ಲಿಸಿದರು. ಜಲಧಾರೆ ಯಾತ್ರೆ ಸಾಗಿ ಬಂದ ಮಾರ್ಗಮಧ್ಯೆ ಕೆಲವೆಡೆ ಶಾಸಕ ಸಾ.ರಾ.ಮಹೇಶ್ ಮತ್ತು ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದರು. ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿ ನೀರಿನ ವಿಚಾರದಲ್ಲಿ ಕರ್ನಾಟಕಕ್ಕೆ ಅನ್ಯಾಯವೆಸಗಿವೆ ಎಂದ ಅವರು, ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ಹಲವಾರು ವರ್ಷಗಳಿಂದ ನೀರಿನ ವಿಚಾರಕ್ಕೆ ರಾಜ್ಯದ ಪರವಾಗಿ ಹೋರಾಟ ನಡೆಸುತ್ತಾ ಬಂದಿದ್ದಾರೆ. ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಕೂಡ ತಮ್ಮ ತಂದೆಯ ಮಾರ್ಗದಲ್ಲಿ ರಾಜ್ಯದ ಹಿತಕ್ಕಾಗಿ ಹೋರಾಟ ನಡೆಸುತ್ತಿದ್ದು, ರಾಜ್ಯದ ಜಲ ಮೂಲಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಜನತಾ ಜಲಧಾರೆ ಯಾತ್ರೆ ಕೈಗೊಳ್ಳಲಾಗಿದೆ. ಒಂದು ಹನಿ ನೀರನ್ನು ವ್ಯರ್ಥ ಮಾಡದೆ ಬಳಸಿಕೊಳ್ಳುವ ಯೋಜನೆಯನ್ನು ರೂಪಿಸ ಲಾಗುತ್ತಿದೆ. ಪ್ರಾದೇಶಿಕ ಪಕ್ಷವಾದ ಜೆಡಿಎಸ್‌ಗೆ ರಾಜ್ಯದ ಹಿತವೇ ಪ್ರಮುಖ ವಾಗಿದ್ದು, ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿ ನಮ್ಮ ರಾಜ್ಯದ ಹಿತ ಬಲಿಕೊಟ್ಟು ತಮಿಳುನಾಡು ಸೇರಿದಂತೆ ಇತರ ರಾಜ್ಯಗಳಿಗೆ ಅನುಕೂಲ ಮಾಡಿಕೊಡುತ್ತಿವೆ. ಹೀಗಾಗಿ ರಾಜ್ಯದ ಅಭಿವೃದ್ಧಿಗಾಗಿ ಪ್ರಾದೇಶಿಕ ಪಕ್ಷವಾದ ಜೆಡಿಎಸ್ ಆಡಳಿತಕ್ಕೆ ಬರಬೇಕಿರುವುದು ಅತ್ಯಗತ್ಯ ಎಂದು ಹೇಳಿದರು.

ಜನತಾ ಜಲಧಾರೆ ಯಾತ್ರೆಯಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ, ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ, ಮಾಜಿ ಮೇಯರ್‌ಗಳಾದ ಆರ್. ಲಿಂಗಪ್ಪ, ರವಿಕುಮಾರ್, ಕಾರ್ಪೊರೇಟರ್‌ಗಳಾದ ಪ್ರೇಮ ಶಂಕರೇಗೌಡ, ಕೆ.ವಿ.ಶ್ರೀಧರ್. ಎಸ್‌ಬಿಎಂ ಮಂಜು, ಎಂ.ಡಿ.ನಾಗರಾಜ್, ರಮೇಶ್ (ರಮಣ), ಮುಖಂಡರಾದ ಮಾವಿನಹಳ್ಳಿ ಸಿದ್ದೇಗೌಡ, ಬೀರಿಹುಂಡಿ ಬಸವಣ್ಣ, ಗಂಗಾಧರಗೌಡ, ಸೋಮಶೇಖರ್, ಕೆ.ವಿ.ಮಲ್ಲೇಶ್, ಬೃಂದಾ ಹಾಗೂ ಸಾವಿರಾರು ಕಾರ್ಯಕರ್ತರು ಭಾಗವಹಿಸಿದ್ದರು. ಇಂದಿನ ಜನತಾ ಜಲಧಾರೆ ಯಾತ್ರೆಯು ಮೈಸೂರಿನ ಚಾಮುಂಡೇಶ್ವರಿ, ಚಾಮರಾಜ, ಕೃಷ್ಣರಾಜ ಹಾಗೂ ನರಸಿಂಹರಾಜ ವಿಧಾನಸಭಾ ಕ್ಷೇತ್ರಗಳಲ್ಲಿ ಸಂಚರಿಸಿದೆ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು. ಯಾತ್ರೆಗೆ ಜಿಲ್ಲಾ ಗಡಿಯಾದ ಕಳಸ್ತ ವಾಡಿಯಲ್ಲಿ ಜೆಡಿಎಸ್ ಮುಖಂಡರು, ಕಾರ್ಯಕರ್ತರು ಬೀಳ್ಕೊಟ್ಟರು. ಈ ಯಾತ್ರೆಯು ಶ್ರೀರಂಗಪಟ್ಟಣದತ್ತ ಪ್ರಯಾಣ ಮುಂದುವರೆಸಿದೆ. ಯಾತ್ರೆ ಸಾಗಿದ ಮಾರ್ಗದುದ್ದಕ್ಕೂ ಮೈಸೂರು ನಗರ ಸಂಚಾರ ವಿಭಾಗದ ಎಸಿಪಿ ಎಸ್‌ಇ ಗಂಗಾಧರ ಸ್ವಾಮಿ ನೇತೃತ್ವದಲ್ಲಿ ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಆಯಾಯ ವ್ಯಾಪ್ತಿಯ ಠಾಣಾ ಪೊಲೀಸರು ಭದ್ರತೆ ಒದಗಿಸಿದ್ದರು.

8ನೇ ವರ್ಷದ ಸವಿನೆನಪು



ಎಂ.ಕೆ.ಅನ್ನಪೂರ್ಣಿಮಾ
ಜನನ: 20-6-1970 ಮರಣ: 01-05-2014

ಸದಾ ನಿಮ್ಮದೇ ನೆನಪು ನಿಮ್ಮ ಆತ್ಮಕ್ಕೆ ಶಾಂತಿ ಕೋರುವವರು
ತಾಯಿ: ತಾಯಮ್ಮ
ಪತಿ: ನಾರಾಯಣ,
ಕರಿಯಪ್ಪ, ಶೇಖರ್
ಚಿಕ್ಕಲಿಂಗಯ್ಯ
ಭಾಗ್ಯ. ಲಕ್ಷ್ಮೀಪುತ್ರಿ
ಕೃಷ್ಣಸ್ವಾಮಿ
ಪ್ರವೀಣ್‌ಕುಮಾರ್
ಹರ್ಷಿತ ಸಂಜನ
ಶ್ರೀನಿಧಿ

ಮೊದಲನೇ ವರ್ಷದ ಪುಣ್ಯಸ್ಮರಣೆ



ಸಿದ್ದಾರ್ಥ್.ಎಸ್
(ಜ್ಯೋತಿ ಶ್ರೀ ಸೌಂಡ್ ಅಂಡ್ ಲೈಟಿಂಗ್ಸ್ ಮಾಲೀಕರು)

ನೀವು ನಮ್ಮನ್ನಗಲಿ ದಿ.02.05.2022ಕ್ಕೆ 1 ವರ್ಷ ಕಳೆದಿದೆ ನೀವು ಹಾಕಿದ ಹಾದಿಯಲ್ಲಿ ನಡೆದು ಜೀವನ ನಡೆಸುತ್ತಿರುವ ಸದಾ ನಿಮ್ಮ ನೆನಪಿನಲ್ಲಿರುವ
ಇಂತಿ ದುಃಖತಪ್ತರು:
ಪತ್ನಿ ಶಾರದ, ಮಗ ರಾಜು, ಮಗಳು ಜ್ಯೋತಿ



ಮೈಸೂರಿನ ಮೃಗಾಲಯಕ್ಕೆ ಭೇಟಿ ನೀಡಿದ ವಿದೇಶಾಂಗ ವ್ಯವಹಾರಗಳು ಮತ್ತು ಶಿಕ್ಷಣ ರಾಜ್ಯ ಸಚಿವ ರಾಜಕುಮಾರ್ ರಂಜನ್ ಸಿಂಗ್ ಮತ್ತು ಶ್ರೀಮತಿ ದೇಬಾಲಾ ದೇವಿ ಅವರನ್ನು ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ ನೆನಪಿನ ಕಾಣಿಕೆ ನೀಡಿ, ಗೌರವಿಸಿದರು. ಈ ಸಂದರ್ಭದಲ್ಲಿ ಹೆಚ್ಚುವರಿ ಖಾಸಗಿ ಕಾರ್ಯದರ್ಶಿ ಸೆರಮ್ ಟೊಂಬಿ ಮೈತೆಯ್, ಕಾರ್ಯನಿರ್ವಾಹಕ ನಿರ್ದೇಶಕ ಅಜಿತ್ ಕುಲಕರ್ಣಿ, ಮಾಲಂಗಿ ಸುರೇಶ್, ರಾಜಣ್ಣ ಮತ್ತಿತರರು ಉಪಸ್ಥಿತರಿದ್ದರು.

ಮೇ 7ರಂದು ಪಶು ಆಂಬುಲೆನ್ಸ್ ಸೇವೆಗೆ ಚಾಲನೆ



ಬೆಂಗಳೂರು, ಏ.30– ರೈತರ ಜಾನುವಾರುಗಳಿಗೆ ಮನೆ ಬಾಗಿಲಲ್ಲೇ ಚಿಕಿತ್ಸೆ ನೀಡಲು ಮೇ 7ರಂದು ಪಶು ಆಂಬುಲೆನ್ಸ್ ಸೇವೆಗೆ ಚಾಲನೆ ದೊರೆಯಲಿದೆ ಎಂದು ಪಶು ಸಂಗೋಪನಾ ಸಚಿವ ಪ್ರಭು ಚೌವ್ಹಾಣ್ ತಿಳಿಸಿದರು.

ವಿಕಾಸಸೌಧದಲ್ಲಿ ಪಶು ಆಂಬುಲೆನ್ಸ್‌ಗಳನ್ನು ವೀಕ್ಷಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೇ 7ರಂದು ಕೇಂದ್ರ ಪಶು ಸಂಗೋಪನಾ ಸಚಿವ ಪುರುಷೋತ್ತಮ್ ರೂಪಲಾ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಈ ಆಂಬುಲೆನ್ಸ್‌ಗಳಿಗೆ ಚಾಲನೆ ನೀಡಲಿದ್ದಾರೆ. ರಾಜ್ಯದಲ್ಲಿ ಒಟ್ಟು 257 ಪಶು ಆಂಬುಲೆನ್ಸ್‌ಗಳನ್ನು ಸೇವೆಗೆ ಒದಗಿಸಲು ಉದ್ದೇಶಿಸಲಾಗಿದ್ದು, ಮೇ 7ರಂದು 70 ಆಂಬುಲೆನ್ಸ್‌ಗಳನ್ನು ಜಾನುವಾರುಗಳ ಸೇವೆಗೆ ಲೋಕಾರ್ಪಣೆ ಮಾಡಲಾಗುತ್ತಿದೆ. ಇದರಿಂದ ಜಾನುವಾರುಗಳನ್ನು ಸಾಕುತ್ತಿರುವ ರೈತರಿಗೆ ಅನುಕೂಲವಾಗಲಿದೆ ಎಂದರು.

ಉಚಿತ ಬೇಸಿಗೆ ಶಿಬಿರ

ಮೈಸೂರು,ಏ.30–ಬಾಲ ಭವನ ಸೊಸೈಟಿ, ಬೆಂಗಳೂರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನಂಜನಗೂಡಿನ ಶಿಶು ಅಭಿವೃದ್ಧಿ ಯೋಜನೆ ಸಹ ಯೋಗದಲ್ಲಿ ಅಶೋಕಪುರಂ ಪ್ರಾಥಮಿಕ ಶಾಲೆಯಲ್ಲಿ ಮಡಿಲು ಶಿಕ್ಷಣ ಮತ್ತು ಗ್ರಾಮೀಣಭಿವೃದ್ಧಿ ಸಂಸ್ಥೆಯ ವತಿಯಿಂದ ಮೇ 2ರಿಂದ 10ರವರೆಗೆ ಉಚಿತ ಬೇಸಿಗೆ ಶಿಬಿರವನ್ನು ಏರ್ಪಡಿಸಲಾಗಿದೆ. ಶಿಬಿರದಲ್ಲಿ ಸರ್ಕಾರಿ ಶಾಲೆಯ ಮಕ್ಕಳಿಗೆ ಮೊದಲ ಆದ್ಯತೆ ನೀಡಲಾಗುತ್ತಿದ್ದು, 50 ಮಕ್ಕಳಿಗೆ ಮಾತ್ರ ಅವಕಾಶ ಇರುತ್ತದೆ. ಶಿಬಿರದಲ್ಲಿ ಚಿತ್ರಕಲೆ, ಏಕಪಾತ್ರಾಭಿನಯ, ಆರೋಗ್ಯದ ಅರಿವು, ಸಮೂಹ ನೃತ್ಯ, ಬೊಂಬೆ ತಯಾರಿಕೆ, ಸ್ಪೋಕನ್ ಇಂಗ್ಲೀಷ್, ಕ್ರೀಡೆ ಹೀಗೆ ವಿವಿಧ ಚಟುವಟಿಕೆಗಳೊಂದಿಗೆ ಶಿಬಿರಗಳನ್ನು ಏರ್ಪಡಿಸಿದ್ದು, ಆಸಕ್ತರು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯಲ್ಲಿ ಹೆಸರನ್ನು ನೋಂದಾಯಿಸಿಕೊಳ್ಳಲು ಕೋರಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08221–226168 ಅನ್ನು ಸಂಪರ್ಕಿಸಬಹುದು.

PUBLIC NOTICE

Notice is hereby given that SRI. NAVEEN NATH, son of Late Lt. Col. M.H. Nath, is desirous to sell the under mentioned property to my client and any person or persons claiming any interest on the under mentioned property or any part thereof, is hereby required to communicate the same to me with documentary evidence at my Office, situated at DOOR No.2765/1A D13/A1, "KEYANS", 5TH MAIN ROAD, V.V. PURAM (V.V. MOHALLA), MYSORE – 570 002, within 10 (Ten) days from the date of this publication, as otherwise the said sale will be completed without any reference or regard to any such purported claim or interest, which shall be deemed to have been waived for all intents and purposes.

SCHEDULE PROPERTY

Residential Apartment bearing No. 103 and 104 in First Floor of "BRIGADE TRANQUIL", measuring 2430 Square Feet of Super Built Area approximately inclusive of proportionate share in common areas, passages, lobbies, staircases and other areas of common use with Two top covered car parking area in the basement floor along with 595.35 / 6667th i.e., 1607.44 Square Feet undivided share, right, title, interest and ownership of land in the Property bearing No.3111, New No.D-4, situated at 3rd Main Road, Yadavagiri, Devaraja Mohalla, Mysore – 570 020, measuring East to West: 150 Feet and North to South: 120 Feet and bounded by: East: Conservancy Lane, West: 3rd Main Road, North: Property of Sri.V.M.Prabhu and South: Property of Dr. C.Srikantaiah.

Sd/- Dhirendra Kumar R. Mehta
Advocate
KEY-ANS LAW SOLUTIONS

Date: 30.04.2022
Place: Mysore

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ [1] ಶ್ರೀಮತಿ ಹೆಚ್.ಎಸ್. ಸುಮ ಕೋಂ ಕೆ. ಮಂಜುನಾಥ್, [2] ಶ್ರೀ ಅಶ್ವಥ್ ರೆಡ್ಡಿ ಬಿನ್ ಶ್ರೀ ತಿಮ್ಮರೆಡ್ಡಿ, [3] ಶ್ರೀ ವಿ.ಎಸ್. ಹರೀಶ್ ಬಿನ್ ಲೇಟ್ ವಿ.ಸಿ. ಸಿದ್ದಯ್ಯ ಮತ್ತು [4] ಶ್ರೀ ದಿನೇಶ್ ಕುಮಾರ್ ಎಂ. ಕೆ ಬಿನ್ ಲೇಟ್ ಕೃಷ್ಣಮೂರ್ತಿ ಎಂ. ಮತ್ತು [5] ಶ್ರೀಮತಿ ಕವಿತ ಎಂ.ಡಿ ಕೋಂ ಶ್ರೀ ದಿನೇಶ್ ಕುಮಾರ್ ಎಂ.ಕೆ., ರವರು ಕ್ರಮವಾಗಿ ಈ ಕೆಳಗೆ ನಮೂದಿಸಿರುವ ಸ್ವತ್ತಿನ ಮಾಲೀಕರಾಗಿದ್ದು, ಒಟ್ಟಾಗಿ ಸದರಿ ಸ್ವತ್ತುಗಳನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತುಗಳನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತುಗಳ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 07 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಬಹುದಾಗಿದೆ. ತಪ್ಪಿದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿಯ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ನಾಗವಾಲ ಗ್ರಾಮದಲ್ಲಿರುವ ಅಭಿವೃದ್ಧಿ ಹೊಂದಿರದ ವಸತಿ ಉದ್ದೇಶಕ್ಕಾಗಿ ಅನ್ಯಕ್ರಾಂತವಾಗಿರುವ ಜಮೀನಿನ ಒಟ್ಟು ವಿಸ್ತೀರ್ಣ 01 ಎಕರೆ 38 ಗುಂಟೆ ಸ್ವತ್ತಿನ ಸರ್ವೆ ನಂಬರ್, ವಿಸ್ತೀರ್ಣ ಮತ್ತು ಚಕ್ಕುಬಂದಿಯ ವಿವರ ಈ ಕೆಳಕಂಡಂತಿದೆ:

ಸರ್ವೆ ನಂ.	ವಿಸ್ತೀರ್ಣ		ಚಕ್ಕುಬಂದಿ			
	ಎ	ಗು	ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
ಮಾಲೀಕರು: ಹೆಚ್.ಎಸ್.ಸುಮ			ಸರ್ವೆ ನಂ. 8/4	ಸರ್ವೆ ನಂ. 7/1	ಸರ್ವೆ ನಂ. 7/4	ಬೊಮ್ಮನಹಳ್ಳಿ–ಇಲವಾಲ ರಸ್ತೆ
7/2	00	20				
ಮಾಲೀಕರು: ಅಶ್ವಥ್ ರೆಡ್ಡಿ			ಸರ್ವೆ ನಂ. 8/3 & 8/4	ಸರ್ವೆ ನಂ. 7/1	ಸರ್ವೆ ನಂ. 8/3	ಸರ್ವೆ ನಂ. 7/2
7/4	00	20				
ಮಾಲೀಕರು: ಹರೀಶ್ ವಿ. ಎಸ್.			ಸರ್ವೆ ನಂ. 8/1	ಸರ್ವೆ ನಂ. 7/4 & 8/2	ನಾಗವಾಲ–ಮೈಸೂರು ರಸ್ತೆ	ಸರ್ವೆ ನಂ. 7/1, 7/4 & 8/4
8/3	00	19				
ಮಾಲೀಕರು: ದಿನೇಶ್ ಕುಮಾರ್ ಎಂ. ಕೆ ಮತ್ತು ಕವಿತಾ ಎಂ.ಡಿ.			ಸರ್ವೆ ನಂ. 8/1	ಸರ್ವೆ ನಂ. 7/2 & 7/4	ಸರ್ವೆ ನಂ. 8/3	ಬೊಮ್ಮನಹಳ್ಳಿ–ಇಲವಾಲ ರಸ್ತೆ
8/4	00	19				

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು, ಎಸ್‌ಎಲ್‌ಡಿ ಲಾ ಫರ್ಮ್
ನಂ.1458/ಎ, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಸಮೀಪ,
ಮೈಸೂರು. ಮೊ:9844640641
email: sldlawfirm2021@gmail.com

ಸಾರ್ವಜನಿಕ ಸ್ಥಳಗಳಲ್ಲಿ ಫ್ಲೆಕ್ಸ್, ಪೋಸ್ಟರ್, ಬ್ಯಾನರ್, ಬಂಟಿಂಗ್ಸ್‌ಗಳಿಗೆ ನಿರ್ಬಂಧ

ಮೈಸೂರು,ಏ.30–ಮೈಸೂರು ಮಹಾನಗರ ಪಾಲಿಕೆಯ ಎಲ್ಲಾ 65 ವಾರ್ಡ್‌ಗಳ ವ್ಯಾಪ್ತಿಯಲ್ಲಿನ ಸಾರ್ವಜನಿಕ ಸ್ಥಳಗಳು, ತೆರೆದ ಪ್ರದೇಶಗಳು ಹಾಗೂ ಇನ್ನಿತರೆ ಸ್ಥಳಗಳಲ್ಲಿ ಜಾಹಿರಾತಿಗಾಗಿ ಫ್ಲೆಕ್ಸ್, ಪೋಸ್ಟರ್, ಬ್ಯಾನರ್ ಹಾಗೂ ಬಂಟಿಂಗ್ಸ್‌ಗಳನ್ನು ಯಥೇಚ್ಚವಾಗಿ ಅಳವಡಿಸುತ್ತಿರುವುದರಿಂದ ಸಾರ್ವಜನಿಕ ಪ್ರದೇಶಗಳ ಸೌಂದರ್ಯಕ್ಕೆ ಧಕ್ಕೆ ಉಂಟಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಘನ ತ್ಯಾಜ್ಯದಲ್ಲಿನ ಪ್ರಮಾಣ ಹೆಚ್ಚಾಗುತ್ತಿದ್ದು, ಅಲ್ಲದೆ ರಸ್ತೆ ಬದಿಗಳಲ್ಲಿ ತ್ಯಾಜ್ಯವು ನಗರದ ಸ್ವಚ್ಚತೆಯ ಮೇಲೆ ಪರಿಣಾಮ ಉಂಟಾಗುತ್ತಿರುತ್ತದೆ ಮತ್ತು ಅಪಘಾತಗಳಿಗೂ ಕಾರಣವಾಗಬಹುದು. ಆದ್ದರಿಂದ ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಫ್ಲೆಕ್ಸ್, ಪೋಸ್ಟರ್, ಬ್ಯಾನರ್ ಹಾಗೂ ಬಂಟಿಂಗ್ಸ್‌ಗಳನ್ನು ಅಳವಡಿಸಿರುವವರ ವಿರುದ್ಧ ಕರ್ನಾಟಕ ತೆರೆದ ಸ್ಥಳಗಳು (ವಿರೂಪಗೊಳಿಸುವಿಕೆಯ ತಡೆಗಟ್ಟುವಿಕೆ) ಕಾಯಿದೆ, 1981 ರನ್ವಯ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಪಾಲಿಕೆ ಆಯುಕ್ತರು ತಿಳಿಸಿದ್ದಾರೆ.

ರಜಾ ದಿನವೂ ಮೃಗಾಲಯ, ಕಾರಂಜಿಕೆರೆ ಸಾರ್ವಜನಿಕ ವೀಕ್ಷಣೆಗೆ ಅವಕಾಶ

ಮೈಸೂರು, ಏ.30– ಬಸವ ಜಯಂತಿ ಹಾಗೂ ರಂಜಾನ್ ಹಬ್ಬದ ಪ್ರಯುಕ್ತ ಪ್ರವಾಸಿಗರು, ಜನಸಾಮಾನ್ಯರಿಗೆ ಹಾಗೂ ಸ್ಥಳೀಯರಿಗೆ ಅನುಕೂಲವಾಗುವಂತೆ ಮೇ 3ರಂದು ಮೃಗಾಲಯ ಹಾಗೂ ಕಾರಂಜಿ ಕೆರೆ ಪ್ರಕೃತಿ ಉದ್ಯಾನವನವನ್ನು ಸಾರ್ವಜನಿಕ ವೀಕ್ಷಣೆಗೆ ತೆರೆಯಲಾಗಿದೆ ಎಂದು ಶ್ರೀ ಚಾಮರಾಜೇಂದ್ರ ಮೃಗಾಲಯದ ಉಪಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕಾರ್ಯನಿರ್ವಾಹಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಸಗೊಬ್ಬರ ರಿಯಾಯಿತಿ ದರ ಹೆಚ್ಚಳ

ಬೆಂಗಳೂರು,ಏ.30–ಇತ್ತೀಚಿಗೆ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ರಸಗೊಬ್ಬರ ದರದ ಮೇಲಿನ ರಿಯಾಯಿತಿ ಹೆಚ್ಚಿಸಲು ನಿರ್ಧಾರ ಕೈಗೊಳ್ಳಲಾಗಿತ್ತು. ಅದರಂತೆ, ಇದೀಗ ರಸಗೊಬ್ಬರದ ಮೇಲಿನ ರಿಯಾಯಿತಿ ದರ ಹೆಚ್ಚಿಸಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ರಸಗೊಬ್ಬರ ಮಾರುಕಟ್ಟೆಯಲ್ಲಿ ಕಚ್ಚಾ ವಸ್ತುಗಳ ಬೆಲೆ ಏರಿಕೆಯಾದ ಹಿನ್ನೆಲೆಯಲ್ಲಿ 2022–23ನೇ ಸಾಲಿನ ಆರಂಭದಲ್ಲಿಯೇ ಕೇಂದ್ರ ಸರ್ಕಾರ ರಸಗೊಬ್ಬರಗಳಿಗೆ ರಿಯಾಯಿತಿ ದರ ಹೆಚ್ಚಿಸಿದೆ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ತಿಳಿಸಿದ್ದಾರೆ.



ನಕ್ಕರೆ ಅದೇ ಸ್ವರ್ಗ

ಆತ : "ನನ್ನ ಹೆಂಡತಿ ವಿವಾಹ ವಾರ್ಷಿಕೋತ್ಸವಕ್ಕೆ ಚೈನು ಗಿಫ್ಟ್ ಕೊಡಿ ಅಂತ ಕೇಳಿದಳು. ತಂದು ಕೊಟ್ಟೆ. ಮನೆಯಿಂದ ಹೊರಗೆ ಎಸೆದಳಯ್ಯಾ"
ಗೆಳೆಯ : "ಯಾಕೋ ಬೆಳ್ಳಿ ಚೈನ್ ತಂದು ಕೊಟ್ಟಿದ್ದಕ್ಕಾ?"
ಆತ : "ಇಲ್ಲ ಸೈಕಲ್ ಚೈನು ಕೊಟ್ಟಿದ್ದಕ್ಕೆ!"

ಮೈಸೂರು ಮಿತ್ರ
ಭಾನುವಾರ, 1 ಮೇ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

ಯಾವ ಕಾರ್ಯವನ್ನು ನಾಳೆ ಎಂದು ಮುಂದೆ ಹಾಕಬೇಡ, ಏಕೆಂದರೆ ನಿನ್ನ ಪಾಲಿಗೆ ಆ ನಾಳೆ ಎಂದಿಗೂ ಬರದಿರಬಹುದು –ಕಾಂ ವರೀಲ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಒಣ ಮರಕ್ಕೆ ಗಿಣಿ ಕಾದ ಹಾಗೆ

ನಿಮ್ಮ ಪತ್ರಗಳು

ಸೆಕ್ಯೂರಿಟಿಯಿಲ್ಲದ ಸೆಕ್ಯೂರಿಟಿಯವರ ಬದುಕು

ಮಾನ್ಯರೆ,

ಮಕ್ಕಳ ಶಿಕ್ಷಣಕ್ಕಾಗಿ, ಮಗಳ ಮದುವೆಗೊಂದಿಷ್ಟು ಹಣ ಹೊಂದಿಸಲು, ಕುಟುಂಬದಿಂದ ಹೊರ ಹಾಕಿಸಿಕೊಂಡ ಒಂದಷ್ಟು ವಯಸ್ಸಾದವರು, ಮಳೆ ಇಲ್ಲದೆ ಬೆಳೆದ ಬೆಳೆಗೆ ಬೆಲೆ ಸಿಗದೆ ಕೈ ಸುಟ್ಟುಕೊಂಡವರು, ದೇಹ ಆವರಿಸಿದ ಕಾಯಿಲೆಗೆ ಹಣ ಹೊಂದಿಸಲಾಗದವರು, ಒಂದಷ್ಟು ಸಾಲ ಮಾಡಿಕೊಂಡವರು, ಹಳ್ಳಿಯಲ್ಲಿ ಬದುಕು ಕಟ್ಟಿಕೊಳ್ಳಲು ಹೈರಾಣವಾದ ಅಸಂಘಟಿತ ಕಾರ್ಮಿಕರು ಹೀಗೆ ನಾನಾ ಜನ ನಾನಾ ಕಾರಣಗಳಿಂದ ನಗರಗಳಿಗೆ ಉದ್ಯೋಗವರಿಸಿ ವಲಸೆ ಬಂದು ಏಜೆನ್ಸಿಗಳ ಮೂಲಕ ಸೆಕ್ಯುರಿಟಿ ಕೆಲಸಕ್ಕೆ ಸೇರಿರುತ್ತಾರೆ.

ಸೆಕ್ಯೂರಿಟಿಯವರ ಕೆಲಸ ಕೇವಲ ಗೇಟ್‌ನಲ್ಲಿ ಕುಳಿತು, ಒಂದಷ್ಟು ಗಂಟೆ ಕಾವಲು ಕಾಯುವುದಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ. ಇವರದು ಬಹಳ ನೋವು ಮಡುಗಟ್ಟಿದ, ದುಃಖ ಹೆಪ್ಪುಗಟ್ಟಿದ ಜೀವನ. ಇವರನ್ನು ಕೆಲಸಕ್ಕೆ ತೆಗೆದುಕೊಂಡ ಕೆಲವು ಅಪ್ರಾಮಾಣಿಕ ಏಜೆನ್ಸಿಗಳಿಂದ ಒಂದು ರೀತಿಯ ಶೋಷಣೆಯಾದರೆ, ಇವರನ್ನು ಸೇವೆಗೆ ಪಡೆದುಕೊಂಡ ಕೆಲವು ಮಾಲೀಕರು, ಸಂಸ್ಥೆಗಳು ಅವರು ಮನೆಯಲ್ಲಿ ಸಾಕಿದ ಪ್ರಾಣಿಗಳಿಗಿಂತ ಕೀಳಾಗಿ ದುಡಿಸಿಕೊಳ್ಳುತ್ತಿರುವುದು, ಏಯ್ ಸೆಕ್ಯುರಿಟಿ ಎಂದು ಕಿರುಚುವುದು, ಸೆಕ್ಯುರಿಟಿ ಸೇವಾ ನೌಕರ ಆತ್ಮ ಗೌರವ, ಸ್ವಾಭಿಮಾನ, ಅವರ ವಯಸ್ಸು ಇದ್ಯಾವುದನ್ನು ಪರಿಗಣಿಸದೆ ಅಗೌರವಯುತವಾಗಿ ನಡೆಸಿಕೊಳ್ಳುತ್ತಿರುವ ರೀತಿಯಂತು ಮಾನವ ಘನತೆಗೆ ಮಾಡುತ್ತಿರುವ ಅವಮಾನವಾಗಿದೆ. ಬಡತನದ ಅಸಹಾಯಕತೆಯನ್ನು ನಗದಾಗಿಸಿಕೊಳ್ಳುತ್ತಿರುವುದಂತೂ ಸೆಕ್ಯುರಟಿಯವರನ್ನು ಪಾಪದವರನ್ನಾಗಿಸಿದೆ.

ಇವತ್ತು ಪಟ್ಟಣ, ನಗರ, ಮಹಾನಗರಗಳಲ್ಲಿ ಸೆಕ್ಯುರಿಟಿ ವ್ಯವಸ್ಥೆ ಒಂದು ಬೃಹತ್ ಉದ್ಯಮವಾಗಿ ಬೆಳೆದು ನಿಂತಿದೆ. ಈ ಮಾನವ ಶ್ರಮದ ಮಾರಾಟ ಸಂತೆಯಲ್ಲಿ ಸರಕುಗಳು ಬಿಕರಿಯಾಗುವುದಕ್ಕಿಂತಲೂ ಕೀಳಾಗಿ ಮಾರಾಟವಾಗುತ್ತಿದೆ. ಸೆಕ್ಯುರಿಟಿಯವರು ಉದ್ಯೋಗ ನೀಡಿದವರು ಮತ್ತು ಕೊಟ್ಟವರು ಇವರಿಬ್ಬರಿಗೂ ಋಣಿಯಾಗಿರಬೇಕಾದ ಉಭಯ ಸಂಕಟ ಪರಿಸ್ಥಿತಿ ಹೇಳಿಕೊಳ್ಳುವಂತಿಲ್ಲ, ಅನುಭವಿಸಲಾಗುತ್ತಿಲ್ಲ. ಬೆಂಕಿಯಿಂದ ಬಾಣಲೆಗೆ, ಬಾಣಲೆಯಿಂದ ಬೆಂಕಿಗೆ ಬೀಳುವ ದುರಂತ ಸ್ಥಿತಿ. ಸೆಕ್ಯುರಿಟಿ ಸೇವಾ ನೌಕರರಲ್ಲಿ ಕೆಲವರು ತಮ್ಮ ವೃತ್ತಿಗೆ ದ್ರೋಹ ಬಗೆವ ರೀತಿಯಲ್ಲಿ ನಡೆದುಕೊಂಡಿರಬಹುದು. ಆದರೆ ಇದು ಎಲ್ಲಾ ವೃತ್ತಿಗಳಿಗೂ ಅನ್ವಯಿಸತ್ತದಲ್ಲ.

ಸೆಕ್ಯುರಿಟಿ ಕೆಲಸದವರಿಗೆ ಭೌತಿಕ ಸೌಲಭ್ಯಗಳಿಲ್ಲ, ವೇತನ ಸಹಿತ ರಜಾ ಸೌಲಭ್ಯಗಳಿಲ್ಲ, ಉದ್ಯೋಗ ಭದ್ರತೆ, ಆರ್ಥಿಕ ಭದ್ರತೆ, ಸಾಮಾಜಿಕ ಭದ್ರತೆ, ಆರೋಗ್ಯ ಭದ್ರತೆ, ಭವಿಷ್ಯನಿಧಿ, ಗ್ರಾಚ್ಯುಟಿ, ಸೌಲಭ್ಯಗಳು ಗಗನ ಕುಸುಮವಾಗಿದೆ ಅಥವಾ ಇಲ್ಲವೇ ಇಲ್ಲ ಎನ್ನುವಂತಿದೆ. ಆದ್ದರಿಂದ ಇವರ ಸಾಮಾಜಿಕ, ಔದ್ಯೋಗಿಕ ಮತ್ತು ಆರ್ಥಿಕ ಜೀವನದ ಅಧ್ಯಯನಗಳನ್ನು ಮಾಡಿ ಸರ್ಕಾರ ವರದಿ ತಯಾರಿಸಿ ಇವರ ಸ್ಥಿತಿಗಳು ಶಾಸನ ಸಭೆ ಮತ್ತು ಬಜೆಟ್‌ಗಳಲ್ಲಿ ಚರ್ಚೆ ಮಾಡಿ ಸೆಕ್ಯುರಿಟಿಯವರ ಬದುಕಿಗೂ ಸೆಕ್ಯುರಿಟಿ ನೀಡುವುದು ಸರ್ಕಾರದ ಕರ್ತವ್ಯವಾಗಿದೆ.

–ಬ್ಯಾ. ರಾ. ಪ್ರಸನ್ನಕುಮಾರ್, ಬ್ಯಾಡರಹಳ್ಳಿ, ಕೃಷ್ಣರಾಜನಗರ ತಾ.

ಶಾಂತವೇರಿ ಗೋಪಾಲಗೌಡ ಆಸ್ಪತ್ರೆಯಿಂದ ಡಿಎಫ್‌ಆರ್‌ಎಲ್‌ವರೆಗೆ ರಸ್ತೆ ಸ್ಥಿತಿ ಶೋಚನೀಯ

ಮಾನ್ಯರೆ,

ಮೈಸೂರಿನ ನಜರ್‌ಬಾದ್‌ನ ಗೋಪಾಲ ಗೌಡ ಶಾಂತವೇರಿ ಆಸ್ಪತ್ರೆಯಿಂದ ಡಿಎಫ್ ಆರ್‌ಎಲ್‌ವರೆಗೆ (ಟಿ. ನರಸೀಪುರ ರಸ್ತೆ) ರಸ್ತೆ ಸ್ಥಿತಿ ಶೋಚನೀಯವಾಗಿದ್ದು, ಇದು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ಬಂದಿಲ್ಲದಿರುವುದು ಆಶ್ಚರ್ಯ ಸಂಗತಿ.

ಈ ರಸ್ತೆಯಲ್ಲಿ ಪ್ರತಿನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತವೆ. ಆದರೆ ಈ ರಸ್ತೆ ಹದಗೆಟ್ಟಿರುವುದರಿಂದ ವಾಹನ ಸವಾರರು ಸುಗಮವಾಗಿ, ಸುರಕ್ಷಿತವಾಗಿ ಸಂಚರಿಸಲು ಸಾಧ್ಯವಾಗುತ್ತಿಲ್ಲ. ಸದರಿ ರಸ್ತೆಯಲ್ಲಿ ದೊಡ್ಡ ದೊಡ್ಡ ಗುಂಡಿಗಳಿದ್ದು, ವಾಹನ ಸವಾರರಿಗೆ ತುಂಬಾ ಕಿರಿಕಿರಿಯಾಗಿದ್ದು. ಹಲವಾರು ಬಾರಿ ಅಪಘಾತಗಳು ಸಂಭವಿಸಿರುವುದುಂಟು.

ಸಂಬಂಧಪಟ್ಟ ಅಧಿಕಾರಿಗಳು ಈ ರಸ್ತೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಬದಲು ಆಗಾಗ್ಗೆ ಮಣ್ಣು ಹಾಕಿ ಗುಂಡಿಗಳನ್ನು ಮುಚ್ಚುತ್ತಿದ್ದಾರೆ. ಇದು ಅವೈಜ್ಞಾನಿಕವಾಗಿದ್ದು, ತೆರಿಗೆ ಪಾವತಿದಾರರ ಹಣ ವ್ಯರ್ಥವಾಗುತ್ತಿದೆ. ಗುಂಡಿಗಳಿಗೆ ಮಣ್ಣು ಹಾಕುವುದರಿಂದ ವಾಹನ ಚಲಿಸುವಾಗ ಧೂಳು ಏಳುವುದಲ್ಲದೆ, ಮಳೆ ಬಂದರೆ ಕೆಸರು ಗದ್ದೆಯಂತಾಗುತ್ತದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಶಾಶ್ವತವಾಗಿ ಗುಂಡಿಗಳನ್ನು ಮುಚ್ಚಿ ವಾಹನ ಸವಾರರಿಗೆ ಅನುಕೂಲ ಮಾಡಿಕೊಡಬೇಕೆಂದು ಮನವಿ.

–ಹರೀಶ್‌ಕುಮಾರ್, ಬನ್ನೂರು.

ಅಕ್ರಮ! ಅಕ್ರಮ! ಅಕ್ರಮ! ಕೊನೆಗೆ ಸಕ್ರಮ!!

ಮಾನ್ಯರೆ,

ಕೆಲವರು ಸಕ್ರಮದ ಮುಖವಾಡ ಹಾಕಿಕೊಂಡು ಅಕ್ರಮ ಎಸಗುತ್ತಿರುವ ಕೆಲವು ಮುಖವಾಡಗಳು ತಮ್ಮ ಜೀವನದ ಅವಿಭಾಜ್ಯ ಅಂಗವಾಗಿಸಿಕೊಂಡಿದ್ದಾರೆ. ಹವಾಲ ಹಗರಣದ ಅಕ್ರಮ, ಬೋಫೋರ್ಸ್ ಹಗರಣ, ಮೇವು ಹಗರಣದ ಅಕ್ರಮ, ಶವ ಪೆಟ್ಟಿಗೆಯ ಅಕ್ರಮ, ಪಕ್ಷಾಂತರ ಅಕ್ರಮ, ಕೆಎಎಸ್ ಹುದ್ದೆಗಳ ನೇಮಕಾತಿ ಅಕ್ರಮ, ಪ್ರಶ್ನೆ ಪತ್ರಿಕೆ ಅಕ್ರಮ, ಪಿಎಸ್‌ಐ. ಲಿಖಿತ ಪರೀಕ್ಷೆಯಲ್ಲಿ ಅಕ್ರಮ, ಸರ್ಕಾರದ ಒತ್ತುವರಿಯ ನಿವೇಶನ ಅಕ್ರಮ, ಅಕ್ರಮ ಕಟ್ಟಡ, ಅಕ್ರಮ ಸಂಬಂಧ, ಹೀಗೆ ಅಕ್ರಮದ ಜೊತೆಗೆ ಸಕ್ರಮಗಳು ಹೊಂದಿಕೊಳ್ಳುವ ಪರಿಸ್ಥಿತಿ ನಿರ್ಮಾಣ ಆಗುತ್ತಿರುವ ಸನ್ನಿವೇಶ ತೋರುತ್ತಿದೆ.

–ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು

ಆರೋಗ್ಯ ಇಲಾಖೆ ಭ್ರಷ್ಟಾಚಾರದ ಬಗ್ಗೆ ತನಿಖೆ ಆಗಲಿ

ಮಾನ್ಯರೆ,

ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಅವರು ಆರೋಗ್ಯ ಇಲಾಖೆಯಲ್ಲಿ ನಾನಾ ಟೆಂಡರ್ ಪಾಸ್ ಮಾಡಲು, ಮೆಡಿಸಿನ್ ಖರೀದಿ, ಕಟ್ಟಡಗಳ ನಿರ್ಮಾಣ ಸೇರಿದಂತೆ ಆರೋಗ್ಯ ಇಲಾಖೆ ಕಟ್ಟಡ ಕಾಮಗಾರಿ, ಆಂಬುಲೆನ್ಸ್ ಖರೀದಿಗಳಲ್ಲಿ ಶೇ.40 ರಷ್ಟು ಕಮಿಷನ್ ಪಡೆಯಲಾಗುತ್ತಿದೆ ಎಂದು ಮಾಡಿರುವ ಆರೋಪವನ್ನು ಇಲಾಖೆ ಸಚಿವರಾದ ಡಾ. ಕೆ. ಸುಧಾಕರ್ ನಿರಾಕರಿಸಿದ್ದು, ಮೇಲ್ನೋಟಕ್ಕೆ ಸಾಕ್ಷ್ಯಾಧಾರಗಳ ಕೊರತೆಯಿದೆ ಎಂದು ಹೇಳಿದ್ದಾರೆ.

ಅವರು, ಕೂಡಲೇ ಆರೋಪ ಮಾಡಿರುವವರಿಂದ ಹೆಚ್ಚಿನ ಮಾಹಿತಿ ಪಡೆದು ಸಂಬಂಧಪಟ್ಟ ಅಧಿಕಾರಿ, ಸಿಬ್ಬಂದಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಲಿ. ಬಡವರ ಆರೋಗ್ಯ ಕಾಪಾಡುವ ಮಹತ್ವದ ಜವಾಬ್ದಾರಿ ಆರೋಗ್ಯ ಇಲಾಖೆಯದ್ದಾಗಿದ್ದು, ಇಂತಹ ಇಲಾಖೆಯಲ್ಲಿ ಭ್ರಷ್ಟರು, ಬಡವರ ಬಾಳಲ್ಲಿ ಚೆಲ್ಲಾಟವಾಡುವವರು ಅಕ್ಷಮ್ಯ ಅಪರಾಧ.

– ಜಿ. ನಾಗೇಂದ್ರ ಶರ್ಮಾ, ಕುವೆಂಪುನಗರ, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ಜೀವನ ಪ್ರೀತಿ ಬೆಳೆಸಿಕೊಳ್ಳೋಣ

> "ಸಮಾಜದಲ್ಲ ಇಂದಿಗೂ ಸಾತ್ವಿಕ ವ್ಯಕ್ತಿತ್ವದವರು ಇಲ್ಲವೆಂದಲ್ಲ. ಇಂದಿಗೂ ಅನೇಕ ಸಂಸ್ಥೆಗಳು ಬಡವರಿಗಾಗಿ ತಮಗಾದ ಸಹಾಯ ಮಾಡುತ್ತಿವೆ. ಅನೇಕರು ಬಡವರಿಗೆ ಊಟ ಹಾಕುವುದನ್ನು ಕರ್ತವ್ಯ ಎಂದು ಭಾವಿಸುತ್ತಾರೆ. ಅನೇಕರು ಪ್ರಾಣಿ, ಪಕ್ಷಿಗಳಿಗೆ ದಿನನಿತ್ಯ ಆಹಾರ ಹಾಕುತ್ತಾರೆ. ಇರುವೆ ಗೂಡು ಹುಡುಕಿ ಅದಕ್ಕೆ ಸಕ್ಕರೆ ಹಾಗೂ ಅಕ್ಕಿ ಹಾಕುತ್ತಾರೆ. ಪಾರಿವಾಳಗಳಿಗೆ ಕಾಳು ಹಾಕುವುದೂ ತಮ್ಮ ಕರ್ತವ್ಯ ಎಂದು ಭಾವಿಸುವವರೂ ಇದ್ದಾರೆ. ಇವರು ಯಾರೂ ಅದನ್ನು ಪ್ರಚಾರಕ್ಕೆ ಎಂದು ಮಾಡುವುದಿಲ್ಲ. ಆ ದೇವರು ನಮಗೆ ಒಂದಷ್ಟು ಶಕ್ತಿ ಕೊಟ್ಟಿದ್ದಾನೆ, ಅದು ಸಮಾಜದ ಹಿತಕ್ಕೆ ಅರ್ಪಣೆಯಾಗಲಿ ಎಂದು ಭಾವಿಸುವವರಿದ್ದಾರೆ.

ನಮಗಿರುವುದು ಒಂದೇ ಜೀವನ, ಅದನ್ನು ಅರ್ಥ ಮಾಡಿಕೊಂಡು ಅದು ಸಾರ್ಥಕವಾಗುವಂತಹ ಜೀವನ ನಡೆಸಬೇಕು. ಇಲ್ಲಿ ತಪ್ಪುಗಳನ್ನು ತಿದ್ದಿಕೊಳ್ಳುವ ಅವಕಾಶವಿದೆಯಾದರೂ, ಉದ್ದೇಶ ಪೂರ್ವಕವಾಗಿ ಮಾಡಿದ ತಪ್ಪುಗಳಿಗೆ ಶಿಕ್ಷೆ ಅನುಭವಿಸಲೂ ಬೇಕಾಗುತ್ತದೆ. ತಪ್ಪು ಹಾಗೂ ಶಿಕ್ಷೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ದೊಡ್ಡ ತಪ್ಪಿಗೆ ದೊಡ್ಡ ಶಿಕ್ಷೆಯಾದರೆ, ಸಣ್ಣದಕ್ಕೆ ಸಣ್ಣ ಶಿಕ್ಷೆ. ಇದು ಸಿದ್ಧಾಂತ. ಕೆಲವೊಮ್ಮೆ ನಾವು ಮಾಡುವ ತಪ್ಪುಗಳು ಬೆಳಕಿಗೆ ಬಾರದಿರಬಹುದು, ಆದರೆ ನಾವು ಮಾಡಿದ ತಪ್ಪು ನಮಗೆ ಗೊತ್ತೇ ಇರುತ್ತದೆ. ಅದು ನಮ್ಮನ್ನು ಕಾಡುತ್ತದೆ. ಆದರೆ ಉದ್ದೇಶಪೂರ್ವಕವಾಗಿ ತಪ್ಪು ಮಾಡಿ, ಈ ರೀತಿ ಸಿಕ್ಕಿ ಹಾಕಿಕೊಳ್ಳದೇ ಇರುವವರೂ ಮುಂದೆ ಪಶ್ಚಾತ್ತಾಪ ಪಡಲೇಬೇಕಾಗುತ್ತದೆ. ಅದರ ಬದಲು ತಪ್ಪಾಗದಂತೆ ಪ್ರಯತ್ನಿಸುವುದು ಯಾವಾಗಲೂ ಸಮಾಧಾನ ಹಾಗೂ ನೆಮ್ಮದಿ ನೀಡುತ್ತದೆ.

ನಮ್ಮ ಸ್ವಭಾವ ಎಂದರೆ ನಾವು ಎಲ್ಲಿರುತ್ತೇವೆಯೋ ಅಲ್ಲಿನ ವಾತಾವರಣದಂತೆ ಬದಲಾಗುವುದು. ನಾವು ಕೆಟ್ಟ ಮನೋಭಾವದವರೊಡನೆ ಇದ್ದರೆ ಮನಸ್ಸು ಸ್ವಾಭಾವಿಕವಾಗಿ ಕೆಟ್ಟತನದತ್ತಲೇ ಹೊರಳುತ್ತದೆ. ಅದು ಬಿಟ್ಟು ಸಾತ್ವಿಕ ಮನೋಭಾವದವರೊಡನೆ ಇದ್ದರೆ ಮನಸ್ಸೂ ಸಾತ್ವಿಕತನವನ್ನು ಬೆಳೆಸಿಕೊಳ್ಳುತ್ತದೆ. ಆದರೆ ನಮ್ಮ ಸ್ವಭಾವ ಬಲವಂತದಿಂದ ಬದಲಿಸಿಕೊಳ್ಳುವಂತೆ ಆಗಬಾರದು, ಅದು ಸಹಜವಾಗಿದ್ದರೆ ನಿಜವಾಗಿಯೂ ಉತ್ತಮ ಜೀವನಕ್ಕೆ ಅದು ಸಹಕಾರಿಯಾಗುತ್ತದೆ. ನಮ್ಮವರು ವಿದೇಶಗಳಿಗೆ ಹೋಗಿಬಂದಾಗ, ಅಲ್ಲಿನ ಶಿಸ್ತಿನ ಬಗ್ಗೆ ಹೆಚ್ಚಾಗಿ ಶ್ಲಾಘಿಸಿ ಮಾತನಾಡುತ್ತಾರೆ. ನಮ್ಮ ದೇಶ ಗಲೀಜು, ಜನ ಸರಿಯಿಲ್ಲ, ಸಭ್ಯತೆ ಇಲ್ಲ ಎಂದೆಲ್ಲಾ ಅವರು ದೂರಿ ವಿದೇಶವೇ ಸರಿ ಎನ್ನುವಂತೆ ಮಾತನಾಡುತ್ತಾರೆ. ಆದರೆ ಅವರೂ ಈ ದೇಶದವರೇ ಎಂಬುದನ್ನು ಮರೆಯುತ್ತಾರೆ. ವಿದೇಶಗಳಲ್ಲಿ ಶಿಸ್ತು ಹೆಚ್ಚಿರಬಹುದು. ಅದಕ್ಕೆ ಅಲ್ಲಿನ ಜನರ ಮನೋಭಾವ ಹಾಗೂ ಜನಸಂಖ್ಯೆ ಕಾರಣವಾಗಿರಬಹುದು. ನಮ್ಮ ದೇಶದ ವಾತಾವರಣವೇ ಬೇರೆ. ಇಲ್ಲಿದ್ದಾಗ ಅಶಿಸ್ತಿನಿಂದ ವರ್ತಿಸುವ ಜನ ವಿದೇಶಕ್ಕೆ ಹೋದಾಗ ಅಲ್ಲಿನ ನೀತಿ ನಿಯಮಗಳನ್ನು ಅಲ್ಲಿನವರಿಗಿಂತ ಹೆಚ್ಚಾಗಿ, ಚೆನ್ನಾಗಿ ಪಾಲಿಸುತ್ತಾರೆ. ಇದಕ್ಕೆ ಮುಖ್ಯವಾಗಿ ಹೆದರಿಕೆ ಕಾರಣವಾಗಿರುತ್ತದೆ. ಅಲ್ಲಿ ತಪ್ಪು ಮಾಡಿ ಸಿಕ್ಕಿಹಾಕಿಕೊಂಡರೆ, ಅಲ್ಲಿನ ನಿಯಮಗಳಂತೆ ಎಲ್ಲಿ ಶಿಕ್ಷೆಗೆ ಒಳಗಾಗಬೇಕಾಗುವುದೋ ಎಂಬ ಹೆದರಿಕೆ ಅವರಲ್ಲಿ ಅಲ್ಲಿನ ಶಿಸ್ತು ಕಾಪಾಡುವಂತೆ ಮಾಡುತ್ತದೆ. ಆದರೆ ಅದೇ ಜನ ನಮ್ಮ ದೇಶಕ್ಕೆ ವಾಪಸ್ಸು ಬಂದಾಗ ಅಶಿಸ್ತನ್ನೇ ತಮ್ಮ ಜೀವನ ಎಂದುಕೊಳ್ಳುತ್ತಾರೆ. ಇಂತಹವರ ಮನೋಭಾವ ಬದಲಾದರೆ ಮಾತ್ರ ನಮ್ಮ ದೇಶವೂ ಅಂತಹ ಪ್ರಸಿದ್ಧ ವಿದೇಶಗಳ ಜೊತೆಗೆ ನಿಲ್ಲಬಹುದು. ಇದರಲ್ಲಿ ತಪ್ಪು ಕಾಣುವುದು ನಮ್ಮ ಮನೋಭಾವದಲ್ಲಿಯೇ ಹೊರತು ನಮ್ಮ ದೇಶದ ವಾತಾವರಣದಿಂದಲ್ಲ. ಹಾಗೆಂದು ನಮಗೆ ಮಾನವೀಯತೆ ಇಲ್ಲವೆಂದಲ್ಲ, ಅದು ಇತರರ ಜೊತೆಗೆ ತನ್ನನ್ನು ಹೋಲಿಕೆ ಮಾಡಿಕೊಳ್ಳುತ್ತದೆ. ಅವರು ತಪ್ಪು ಮಾಡಿ ಆರಾಮವಾಗಿದ್ದಾರೆ, ನಾನೂ ಹಾಗೇ ಇರಬಹುದಲ್ಲ! ಎಂದು ಅವರಿಗೆ ಅನಿಸಿ, ತಪ್ಪು ಮಾಡಲು ಪ್ರೇರೇಪಿಸುತ್ತದೆ.

ಆದರೆ ನಾವು ಯಾವಾಗಲೂ ತಪ್ಪು ಮಾಡುತ್ತೇವೆ ಎಂದಲ್ಲ, ತಪ್ಪು ಮಾಡುವ ವಾತಾವರಣದಲ್ಲಿ ಬೆಳೆದಾಗ ತಪ್ಪು ಮಾಡುವುದು ಸರಿಯೇನೋ ಎಂಬ ಮನೋಭಾವ ನಮ್ಮದಾಗಿರುತ್ತದೆ. ಇದಕ್ಕೆ ಒಂದು ಕಥೆಯನ್ನು ಉಲ್ಲೇಖಿಸಬಹುದು. ಒಂದು ಮಾರುಕಟ್ಟೆ, ಅಲ್ಲಿ ಒಂದು ಹಣ್ಣಿನ ಅಂಗಡಿ ಇರುತ್ತದೆ. ಅಲ್ಲಿ ತಾಜಾ ಹಣ್ಣು ಸಿಗುವುದರಿಂದ ಜನರು ಆ ಅಂಗಡಿಗೆ ಹೋಗುತ್ತಾರೆ. ಒಮ್ಮೆ ಒಬ್ಬ ಆಗಂತುಕ ಆ ಅಂಗಡಿಗೆ ಹಣ್ಣು ಕೊಳ್ಳಲು ಹೋಗುತ್ತಾನೆ. ಆದರೆ ಅಂಗಡಿಯಲ್ಲಿ ಅದರ ಯಜಮಾನ ಕಾಣಿಸುವುದಿಲ್ಲ. ಅಂಗಡಿಯಲ್ಲಿ ಹಣ್ಣುಗಳ ಬೆಲೆ ಬರೆಯಲಾಗಿರುತ್ತದೆ. ಜೊತೆಗೆ ಮಧ್ಯದಲ್ಲಿ ಎಲ್ಲರಿಗೂ ಕಾಣುವಂತೆ ಒಂದು ಬೋರ್ಡ್ ನೇತು ಹಾಕಲಾಗಿರುತ್ತದೆ. ಈ ಆಗಂತುಕ ಕುತೂಹಲದಿಂದ ಆ ಬೋರ್ಡ್ ನೋಡುತ್ತಾನೆ, ಅದರಲ್ಲಿ "ನನ್ನ ತಾಯಿಗೆ ಆರೋಗ್ಯ ಸರಿ ಇಲ್ಲದಿರುವುದರಿಂದ ಅವರ ಸೇವೆ ಮಾಡಲು ನಾನು ಸದಾ ಅವರ ಬಳಿ ಇರಬೇಕಾಗುತ್ತದೆ. ಆದ್ದರಿಂದ ನೀವು ನಿಮಗೆ ಬೇಕಾದ ಹಣ್ಣುಗಳನ್ನು ತೆಗೆದುಕೊಂಡು ಅದಕ್ಕೆ ಸರಿಯಾದ ಬೆಲೆಯನ್ನು ಗಲ್ಲಾ ಪೆಟ್ಟಿಗೆಯಲ್ಲಿ ಹಾಕಿ" ಎಂದು ಬರೆದಿರುತ್ತದೆ. ಈ ಆಗಂತುಕನಿಗೆ ಇದು ಇಂತಹ ಮೊದಲ ಅನುಭವ. ಇಂತಹ ಅಮಾಯಕರು ಈ ಕಾಲದಲ್ಲೂ ಇದ್ದಾರೆಯೇ? ಯಾರಾದರೂ ಅವನ ಗಲ್ಲಾಪಟ್ಟಿಗೆಯನ್ನು ದೋಚಿದರೆ? ಆಗ ಅವನ ಪರಿಸ್ಥಿತಿ ಏನಾಗುತ್ತದೆ? ಇಂತಹವರು ಮೂರ್ಖರಲ್ಲದೇ ಇನ್ನೇನು? ಎಂದುಕೊಳ್ಳುತ್ತಾನೆ. ಏನಾದರಾಗಲಿ, ಮಾಲೀಕ ಬರುವವರೆಗೆ ಇಲ್ಲೇ ಇದ್ದು ಅವನಿಗೆ ಹೀಗೆ ಮಾಡಬೇಡವೆಂದು ತಿಳಿಹೇಳಬೇಕು ಎಂದು ನಿರ್ಧರಿಸಿ, ಅವನಿಗಾಗಿ ಕಾಯುತ್ತಾನೆ. ಸಾಯಂಕಾಲ ಆ ಮಾಲೀಕ ಅಂಗಡಿಗೆ ಬರುತ್ತಾನೆ. ಅವನು ಗಲ್ಲಾಪೆಟ್ಟಿಗೆಯಲ್ಲಿದ್ದ ಹಣವನ್ನು ತೆಗೆದುಕೊಂಡು ಅಂಗಡಿ ಮುಚ್ಚಲು ಹೊರಡುತ್ತಾನೆ. ಆಗ ಈ ಆಗಂತುಕ ಅವನನ್ನು ಮಾತನಾಡಿಸುತ್ತಾನೆ. 'ನೀನು ಎಂತಹ ಬುದ್ಧಿ ಇಲ್ಲದ ಕೆಲಸ ಮಾಡುತ್ತಿರುವೆ? ಯಾರಾದರೂ ಕಳ್ಳರು ನಿನ್ನ ಹಣವನ್ನು ದೋಚಿದರೆ? ಹಣ್ಣುಗಳನ್ನು ಉಚಿತವಾಗಿ ತೆಗೆದುಕೊಂಡು ಹೋದರೆ?' ಎಂದು ಬುದ್ಧಿ ಹೇಳಲು ಪ್ರಯತ್ನಿಸುತ್ತಾನೆ. ಆಗ ಮಾಲೀಕ 'ನಾನೂ ಮೊದಲು ನಿಮ್ಮ ಹಾಗೆಯೇ ಯೋಚಿಸಿ ನನ್ನ ತಾಯಿಗೆ ಹೇಳಿದ್ದೆ. ನಾನು ನಿನ್ನ ಸೇವೆಗೆ ನಿಂತಾಗ ಅಂಗಡಿಯ ಗತಿ ಏನು?' ಎಂದು ಕೇಳಿದ್ದೆ. ಅದಕ್ಕೆ ನನ್ನ ತಾಯಿ 'ನಾನು ಈಗ ಅವಸಾನದ ಅಂಚಿನಲ್ಲಿದ್ದೇನೆ. ನಿನ್ನನ್ನು ಬಿಟ್ಟಿರಲು ಆಗುವುದಿಲ್ಲ. ನಾನು ದೇವರನ್ನು ಪ್ರಾರ್ಥಿಸುತ್ತೇನೆ. ನಾನು ಹೇಳಿದ ಹಾಗೆ ಮಾಡು ಎಂದಳು. ಅದರಂತೆ ನಾನು ಮಾಡುತ್ತಿದ್ದೇನೆ ಎಂದನು. ಹಾಗಾದರೆ ನಿನಗೆ ನಷ್ಟವಾಗುತ್ತಿಲ್ಲವೇ? ಎಂದು ಪ್ರಶ್ನಿಸಿದಾಗ, ಅವನು ಗಲ್ಲಾಪೆಟ್ಟಿಗೆ ತೆಗೆದು ತೋರಿಸುತ್ತಾನೆ. ಆಶ್ಚರ್ಯವೆಂದರೆ ಅದರಲ್ಲಿ ಭರ್ತಿ ಹಣ ಇರುತ್ತದೆ. ಅಂಗಡಿಯಲ್ಲಿದ್ದ ಹಣ್ಣಿಗಿಂತ ಹತ್ತು ಪಟ್ಟಷ್ಟು ಹಣ ಇರುತ್ತದೆ. ಅಲ್ಲದೆ ಅಂಗಡಿಯಲ್ಲಿ ತರಹೇವಾರಿ ವಸ್ತುಗಳು ಕಂಡುಬರುತ್ತವೆ ಅದರಲ್ಲಿ ಸೀರೆಗಳು, ಸ್ವೆಟರ್, ಆಹಾರ ಪದಾರ್ಥಗಳು, ತಿಂಡಿ–ತಿನಿಸುಗಳು ಇರುತ್ತವೆ. ಕೆಲವು ಚೀಟಿಗಳೂ ಕಂಡುಬರುತ್ತವೆ. ಅದರಲ್ಲಿ 'ನಿನ್ನ ತಾಯಿಗೆ ನನ್ನ ಕಡೆಯಿಂದ ಇದನ್ನು ಕಾಣಿಕೆಯಾಗಿ ಕೊಡು' ಎಂದು ಒಂದರಲ್ಲಿ ಬರೆದಿದ್ದರೆ, ಮತ್ತೊಂದರಲ್ಲಿ 'ಅಂಕಲ್ ನಿಮ್ಮ ತಾಯಿಯನ್ನು, ನಮ್ಮ ಆಸ್ಪತ್ರೆಗೆ ಕರೆದುಕೊಂಡು ಬನ್ನಿ, ನಾನು ಅವರಿಗೆ ಉಚಿತವಾಗಿ ಚಿಕಿತ್ಸೆ ನೀಡುತ್ತೇನೆ' ಎಂದು ಬರೆದಿದ್ದಲ್ಲದೇ ತಮ್ಮ ವಿಳಾಸದ ವಿವರವನ್ನು ನಮೂದಿಸಲಾಗಿರುತ್ತದೆ. ಇಂತಹುದನ್ನು ನೋಡಿ ಅಗಂತುಕನ ಕಣ್ಣಲ್ಲಿ ನೀರು ಬರುತ್ತದೆ. ನಾನು ನಮ್ಮ ಸಮಾಜ ಬರೀ ಸ್ವಾರ್ಥದಿಂದ ತುಂಬಿದೆ, ಇಲ್ಲಿ ಒಳ್ಳೆಯತನ ಕಾಣದಾಗಿದೆ ಎಂದುಕೊಂಡಿದ್ದೆ, ನನ್ನ ಭಾವನೆಗಳು ತಪ್ಪು ಎಂದು ಅರಿವಾಯಿತು. ನಮ್ಮ ಸಮಾಜದಲ್ಲಿ ಇನ್ನೂ ಒಳ್ಳೆಯತನ ವಿದೆ. ನಾವು ಮೊದಲು ನಮ್ಮ ದೃಷ್ಟಿಕೋನವನ್ನು ಸರಿಪಡಿಸಿಕೊಳ್ಳಬೇಕು ಎಂದುಕೊಂಡನು. 'ಒಂದು ರೀತಿಯಲ್ಲಿ ಆ ಅಂಗಡಿಯ ಮಾಲೀಕ ತಾಯಿಯ ಸೇವೆ ಮಾಡಲು ಹೊರಟಿದ್ದರಿಂದ ಸಾಕ್ಷಾತ್ ದೇವರೇ ಅವನ ಅಂಗಡಿಯ ಕಾವಲುಗಾರನಂತೆ ಕಾಪಾಡಿದ್ದಾನೆ' ಎಂದು ಆಗಂತುಕನಿಗೆ ಅನಿಸಿತು.

ಇಂತಹ ಘಟನೆ ಕಾಣಲು ಸಾಧ್ಯವಿಲ್ಲ ಎಂದೇನಿಲ್ಲಾ. ನೋಡುವ ಕಣ್ಣು, ಮನಸ್ಸು ಇರಬೇಕು ಅಷ್ಟೇ. ಸಮಾಜದಲ್ಲಿ ಇಂದಿಗೂ ಸಾತ್ವಿಕ ವ್ಯಕ್ತಿತ್ವದವರು ಇಲ್ಲವೆಂದಲ್ಲ. ಇಂದಿಗೂ ಅನೇಕ ಸಂಸ್ಥೆಗಳು ಬಡವರಿಗಾಗಿ ತಮಗಾದ ಸಹಾಯ ಮಾಡುತ್ತಿವೆ. ಅನೇಕರು ಬಡವರಿಗೆ ಊಟ ಹಾಕುವುದನ್ನು ಕರ್ತವ್ಯ ಎಂದು ಭಾವಿಸುತ್ತಾರೆ. ಅನೇಕರು ಪ್ರಾಣಿ, ಪಕ್ಷಿಗಳಿಗೆ ದಿನನಿತ್ಯ ಆಹಾರ ಹಾಕುತ್ತಾರೆ. ಇರುವೆ ಗೂಡು ಹುಡುಕಿ ಅದಕ್ಕೆ ಸಕ್ಕರೆ ಹಾಗೂ ಅಕ್ಕಿ ಹಾಕುತ್ತಾರೆ. ಪಾರಿವಾಳಗಳಿಗೆ ಕಾಳು ಹಾಕುವುದೂ ತಮ್ಮ ಕರ್ತವ್ಯ ಎಂದು ಭಾವಿಸುವವರೂ ಇದ್ದಾರೆ. ಇವರು ಯಾರೂ ಅದನ್ನು ಪ್ರಚಾರಕ್ಕೆ ಎಂದು ಮಾಡುವುದಿಲ್ಲ. ಆ ದೇವರು ನಮಗೆ ಒಂದಷ್ಟು ಶಕ್ತಿ ಕೊಟ್ಟಿದ್ದಾನೆ, ಅದು ಸಮಾಜದ ಹಿತಕ್ಕೆ ಅರ್ಪಣೆಯಾಗಲಿ ಎಂದು ಭಾವಿಸುವವರಿದ್ದಾರೆ.

ನನಗಿರುವ ಒಬ್ಬ ಅಪರೂಪದ ಮಿತ್ರನದ್ದು ಒಂದು ರೀತಿಯ ಸಮಾಜ ಸೇವೆ. ಅವರದ್ದು ವ್ಯಾಪಾರ. ವ್ಯಾಪಾರ ಎಂದ ಮೇಲೆ ಒಂದಷ್ಟು ಲಾಭ ಬಂದೇ ಬರುತ್ತದೆ. ಅವರು ಅದರಲ್ಲಿ ಒಂದಷ್ಟು ಭಾಗವನ್ನು ಸಮಾಜ ಸೇವೆಗೆ ಮೀಸಲಿಡುತ್ತಾರೆ. ಅವರ ಅನಿಸಿಕೆ ಎಂದರೆ ನಮಗೆ ಎಷ್ಟು ಬಂದರೂ ತೃಪ್ತಿ ಇಲ್ಲ, ಬದಲಾಗಿ ನನಗೆ ಇಷ್ಟು ಸಾಕು, ಎಂದು ನಿರ್ಧರಿಸಿ, ಉಳಿದದ್ದನ್ನು ಸಮಾಜಕ್ಕೆ ಒಪ್ಪಿಸಿಬಿಡಬೇಕು. ನಮಗಿಂತ ಕಷ್ಟದಲ್ಲಿರುವವರು ಬಹಳ ಜನರಿದ್ದಾರೆ, ಅವರಿಗೆ ಸಹಾಯ ಮಾಡಬೇಕು ಎಂದು ಯೋಚಿಸಿ, ಅವರು ಪ್ರತಿ ತಿಂಗಳು ಹತ್ತು ಅನಾಥ ವಿಧವೆಯರಿಗೆ ರೂ. 500 ಅನ್ನು ಮಾಸಾಶನದಂತೆ ನೀಡುತ್ತಾರೆ, ಅಲ್ಲದೆ ಜೀವ ಉಳಿಸುವ ಶಸ್ತ್ರಚಿಕಿತ್ಸೆಗೆ ಒಳಗಾಗುವ ಕಡು ಬಡವರಿಗೆ ಔಷಧೋಪಚಾರಕ್ಕೆ ಎಂದು 10 ಜನರಿಗೆ ಮಾಸಿಕ ರೂ. 500 ನೀಡುತ್ತಾರೆ. ಏಕಾಂಗಿ ಬದುಕಿನ ವಿಧವೆಯರಿಗೆ 10 ಜನರಿಗೆ ಪ್ರತಿ ವರ್ಷ ಎರಡು ಸೀರೆ ಉಚಿತವಾಗಿ ನೀಡುತ್ತಾರೆ. ಬಡತನದಲ್ಲಿದ್ದು 5 ರಿಂದ 10ನೇ ತರಗತಿಯವರೆಗೆ ಓದುತ್ತಿರುವ 20 ಶಾಲಾ ಮಕ್ಕಳಿಗೆ ಪ್ರತಿ ವರ್ಷ ಉಚಿತವಾಗಿ ಶಾಲಾ ಸಮವಸ್ತ್ರ ಹಾಗೂ ಒಂದು ಸಾವಿರ ರೂಪಾಯಿಯ ಲೇಖನ ಸಾಮಗ್ರಿ ನೀಡುತ್ತಾರೆ. ಎಸ್‌ಎಸ್‌ಎಲ್‌ಸಿಯಲ್ಲಿ ಶೇಕಡಾ 90ಕ್ಕಿಂತ ಹೆಚ್ಚು ಅಂಕಗಳಿಸುವ ಕಡು ಬಡಮಕ್ಕಳಿಗೆ ಒಂದು ಸಾವಿರ ರೂಪಾಯಿಯ ಪ್ರೋತ್ಸಾಹ ಧನ ನೀಡುತ್ತಾರೆ. ಇಷ್ಟಾಗಿಯೂ ಎಲ್ಲೂ ತಮ್ಮ ಹೆಸರು ಪ್ರಚಾರಕ್ಕೆ ಬರದಂತೆ ನೋಡಿಕೊಳ್ಳುತ್ತಾರೆ. ಇಂತಹವರೂ ಈ ಸಮಾಜದಲ್ಲಿ ಇದ್ದಾರೆ.

ಇತ್ತೀಚೆಗೆ ಒಬ್ಬರು ನಿವೃತ್ತ ಸರ್ಕಾರಿ ನೌಕರರು ಸಿಕ್ಕಿದ್ದರು. ಅವರು ಸೇವೆಯಲ್ಲಿರುವಾಗ ಯಾವುದೇ ಫಲಾಪೇಕ್ಷೆ ಇಲ್ಲದೆ ನೂರಾರು ಜನರಿಗೆ ಪಿಂಚಣಿ ಕಡತ ತಯಾರಿಸಿಕೊಟ್ಟಿದ್ದಾರೆ. ಆದರೆ ಅವರು ನಿವೃತ್ತರಾದಾಗ ಎದುರಾದ ಸಣ್ಣ ಸಮಸ್ಯೆಯಿಂದ ಅವರಿಗೆ ಪಿಂಚಣಿ ಮಂಜೂರಾಗಲು ನಾಲ್ಕಾರು ವರ್ಷ ತೆಗೆದುಕೊಂಡಿತು. ಅವರು ತಾವು ಕೆಲಸ ನಿರ್ವಹಿಸುತ್ತಿದ್ದ ಕಚೇರಿಗೆ ಹೋದಾಗ ಅವರನ್ನು ಈಗ ಕೆಲಸದಲ್ಲಿರುವವರು ನಿಕೃಷ್ಟವಾಗಿ ಕಂಡರು. ಅವರು ಹೇಳುವುದೇನೆಂದರೆ ನಮ್ಮಂತೆಯೇ ಇವರೂ ಮುಂದೆ ನಿವೃತ್ತರಾಗುವುದಿಲ್ಲವೇ? ಆಗ ಅವರಿಗೂ ಇಂತಹ ಪರಿಸ್ಥಿತಿ ಬಂದರೆ ಏನಾಗುತ್ತದೆ? ಎಂದು ಅವರೇಕೆ ಯೋಚಿಸುವುದಿಲ್ಲ ಎಂದು. ಇದು ನಿಜವೇ. ಒಂದು ರೀತಿಯಲ್ಲಿ ನಾನು ತಪ್ಪು ಮಾಡುವುದಿಲ್ಲ ಎಂದು ನಿರ್ಧರಿಸಬಹುದಾದರೂ ಎಲ್ಲರೂ ತಪ್ಪು ಮಾಡಬಾರದೆಂದು ಹೇಳಲು ಸಾಧ್ಯವಾಗುವುದಿಲ್ಲ. ಇದು ಮಾನವೀಯತೆಗೆ ಸಂಬಂಧಿಸಿದ್ದು. ನಾವು ಎಂದಿಗೂ ಅಸಹಾಯಕರ ಜಾಗದಲ್ಲಿ ನಿಂತು ಯೋಚಿಸಿದಾಗ ನಮ್ಮಿಂದ ತಪ್ಪುಗಳಾಗುವುದು ಕಡಿಮೆಯಾಗುತ್ತವೆ.

ಚೇತನ್ ಭಗತ್ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ



ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದ ಸಭಾಂಗಣದಲ್ಲಿ ಜೂನ್ 4 ರಂದು 'ಯಶಸ್ಸಿನ ನಿರೂಪಣೆ' (Definition of Success) ಕುರಿತಾಗಿ ಖ್ಯಾತ ಪ್ರೇರಕ ಭಾಷಣಕಾರ, ಲೇಖಕ, ಅಂಕಣಕಾರ ಮತ್ತು ಚಿತ್ರಕಥೆ ಲೇಖಕ ಚೇತನ್ ಭಗತ್ ಭಾಷಣ ಮಾಡಲಿದ್ದಾರೆ. ಈ ಕಾರ್ಯಕ್ರಮದ ಪಾಲುದಾರರಾದ ಇವೆಂಟ್ ಮಿತ್ರ ಮತ್ತು ಪ್ಲುಟಸ್ ಪ್ರಾಪರ್ಟಿ ಮ್ಯಾನೇಜ್‌ಮೆಂಟ್ ವತಿಯಿಂದ ವಿಂಡ್‌ಫ್ಲವರ್ ರೆಸಾರ್ಟ್ಸ್ ಅಂಡ್ ಸ್ಪಾ ಸಭಾಂಗಣದಲ್ಲಿ ಶುಕ್ರವಾರ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ ಮಾಡಲಾಯಿತು. ಚಿತ್ರದಲ್ಲಿ (ಎಡದಿಂದ): ಇವೆಂಟ್ ಪಾಲುದಾರ ಗಿರೀಶ್ ಬಾಗಾ, ಮೈಸೂರು ಬುಕ್ ಕ್ಲಬ್ಸ್ ಮತ್ತು ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಸಂಸ್ಥಾಪಕರಾದ ಶುಭಾ ಸಂಜಯ್ ಅರಸ್, 'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ವ್ಯವಸ್ಥಾಪಕ ನಿರ್ದೇಶಕರು ಹಾಗೂ ಛೇರ್ಮನ್ ವಿಕ್ರಂ ಮುತ್ತಣ್ಣ, ಗೋಪಾಲಗೌಡ ಶಾಂತವೇರಿ ಮೆಮೋರಿಯಲ್ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಡಾ. ಹೆಚ್.ವಿ. ಸಂತೃಪ್ತ್, ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್. ಚೇತನ್, ಸಿಎಸ್‌ಪಿ ಇನ್‌ಫ್ರಾಕಾನ್ ಎಂಡಿ ಮತ್ತು ಸಿಇಓ ಶಿವರಾಜ್ ಮತ್ತು ಮಿತ್ರ ಫೌಂಡೇಷನ್ ಅಧ್ಯಕ್ಷ ಪಿ.ಎಂ. ಮಂಜುನಾಥ್ ಅವರನ್ನು ಕಾಣಬಹುದು.

ಸಿಎಸ್‌ಕೆಗೆ ಮತ್ತೆ ಧೋನಿ ನಾಯಕ

ನಾಯಕತ್ವ ಹಸ್ತಾಂತರಿಸಿದ ರವೀಂದ್ರ ಜಡೇಜಾ

ಚೆನ್ನೈ, ಏ.30– ಪ್ರಸ್ತುತ ನಡೆಯುತ್ತಿರುವ 15ನೇ ಆವೃತ್ತಿಯ ಇಂಡಿಯನ್ ಪ್ರೀಮಿಯರ್ ಲೀಗ್ ಟ್ವೆಂಟಿ–20 ಕ್ರಿಕೆಟ್ ಟೂರ್ನಿ ನಡುವೆಯೇ ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕತ್ವವನ್ನು ಮತ್ತೆ ಮಹೇಂದ್ರ ಸಿಂಗ್ ಧೋನಿ ಅವರಿಗೆ ರವೀಂದ್ರ ಜಡೇಜಾ ಹಸ್ತಾಂತರಿಸಿದ್ದಾರೆ ಎಂದು ಸಿಎಸ್‌ಕೆ ಫ್ರಾಂಚೈಸ್ ತನ್ನ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದೆ.

ಐಪಿಎಲ್ 2022 ಟೂರ್ನಿ ಆರಂಭಕ್ಕೂ ಮುನ್ನ ತಂಡದ ಭವಿಷ್ಯದ ಕಪ್ತಾನನನ್ನು ರೂಪಿಸುವ ನಿಟ್ಟಿನಲ್ಲಿ ಆಲ್‌ರೌಂಡರ್ ಜಡೇಜಾ ಅವರಿಗೆ ಧೋನಿ ನಾಯಕತ್ವ ಹಸ್ತಾಂತರಿಸಿದ್ದರು. ಆದರೆ ನಾಯಕತ್ವ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ರವೀಂದ್ರಜಡೇಜ ವಿಫಲರಾಗಿದ್ದರು. ಈ ಹಿನ್ನೆಲೆಯಲ್ಲಿ ಆಟದ ಮೇಲೆ ಹೆಚ್ಚಿನ ಗಮನ ಹರಿಸುವ ನಿಟ್ಟಿನಲ್ಲಿ ಜಡೇಜಾ ಮತ್ತೆ ಧೋನಿಗೆ ನಾಯಕತ್ವ ಹಸ್ತಾಂತರಿಸಿದ್ದಾರೆ.



ಜಡೇಜಾ ಮುಂದಾಳತ್ವದಲ್ಲಿ ಚೆನ್ನೈ ಇದುವರೆಗೆ ಆಡಿರುವ 8 ಪಂದ್ಯಗಳಲ್ಲಿ 2ರಲ್ಲಿ ಗೆದ್ದು 6 ಪಂದ್ಯಗಳಲ್ಲಿ ಸೋಲು ಅನುಭವಿಸಿದೆ. ಅಲ್ಲದೆ 4 ಅಂಕ ಮಾತ್ರ ಗಳಿಸಿ ಅಂಕಪಟ್ಟಿಯಲ್ಲಿ 9ನೇ ಸ್ಥಾನದಲ್ಲಿದೆ.

2008ರಿಂದ 2021ರವರೆಗೆ ಚೆನ್ನೈ ತಂಡ ಮುನ್ನಡೆಸಿದ್ದ ಧೋನಿ, 4 ಬಾರಿ ಟ್ರೋಫಿ ಗೆಲ್ಲುವಲ್ಲಿ ಯಶಸ್ವಿಯಾಗಿದ್ದರು. ಈಗ ಜಡೇಜಾ ವಿನಂತಿಗೆ ಸ್ಪಂದಿಸಿ ಮತ್ತೆ ಸಿಎಸ್‌ಕೆ ಕಪ್ತಾನಗಿರಿ ವಹಿಸಲು ತಯಾರಾಗಿರುವುದಾಗಿ ಧೋನಿ ಸೂಚಿಸಿದ್ದಾರೆ.

ಟ್ವಿಟರ್‌ನಲ್ಲಿ ಧೋನಿ ಗುಣಗಾನ: 40ರ ಹರೆಯದಲ್ಲಿ ಧೋನಿಗೆ ಮತ್ತೆ ಸಿಎಸ್‌ಕೆ ನಾಯಕತ್ವ ಲಭಿಸಿರುವುದು ಅಭಿಮಾನಿಗಳಲ್ಲಿ ಅಪಾರ ಸಂತಸಕ್ಕೆ ಕಾರಣವಾಗಿದ್ದು, ಟ್ವಿಟರ್‌ನಲ್ಲಿ ಗುಣಗಾನ ಮಾಡಿದ್ದಾರೆ.

ಕೆಜಿಎಫ್ 2 ಸಿನಿಮಾದ ರಾಕಿ ಭಾಯ್ ಅವರ ಜನಪ್ರಿಯ 'ವೈಲೆನ್ಸ್ ವೈಲೆನ್ಸ್ ವೈಲೆನ್ಸ್' ಡೈಲಾಗ್‌ನಲ್ಲಿ ಧೋನಿಗೆ ಮತ್ತೆ ನಾಯಕತ್ವ ಜವಾಬ್ದಾರಿ ಲಭಿಸಿರುವುದನ್ನು ಕೊಂಡಾಡಿದ್ದಾರೆ. 'ಕ್ಯಾಪ್ಟೆನ್ಸಿ ಕ್ಯಾಪ್ಟೆನ್ಸಿ ಕ್ಯಾಪ್ಟೆನ್ಸಿ...ಐ ಅವಾಯ್ಡ್, ಬಟ್ ಕ್ಯಾಪ್ಟೆನ್ಸಿ, ಲೈಕ್ಸ್ ಮಿ...ಐ ಕಾಂಟ್ ಅವಾಯ್ಡ್' ಎಂದು ಯಶ್ ಚಿತ್ರವನ್ನು ಧೋನಿಗೆ ಹೋಲಿಕೆ ಮಾಡಿ ಬಳಕೆದಾರರೊಬ್ಬರು ಟ್ವೀಟ್ ಮಾಡಿದ್ದಾರೆ.

ಪ್ಲೇ ಆಫ್‌ಗೆ ಗುಜರಾತ್ ಎಂಟ್ರಿ

ಮುಂಬೈ, ಏ.30– ರಾಹುಲ್ ತೆವಾಟಿಯಾ ಹಾಗೂ ಡೇವಿಡ್ ಮಿಲ್ಲರ್ ಅವರ ಅಬ್ಬರದ ಬ್ಯಾಟಿಂಗ್ ನೆರವಿನಿಂದ ಗುಜರಾತ್ ಟೈಟನ್ಸ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ 6 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಇದರೊಂದಿಗೆ ಆಡಿರುವ 9 ಪಂದ್ಯಗಳ ಪೈಕಿ 8 ರಲ್ಲಿ ಜಯ ಸಾಧಿಸಿ 16 ಅಂಕಗಳೊಂದಿಗೆ ಗುಜರಾತ್ ಪ್ಲೇ ಆಫ್‌ಗೆ ಎಂಟ್ರಿ ಕೊಟ್ಟಿದೆ.



ಇಲ್ಲಿನ ಬ್ರೆಬೋರ್ನ್ ಮೈದಾನದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಆರ್‌ಸಿಬಿ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 170 ರನ್ ಗಳಿಸಿತು. ತಂಡದ ಪರ ವಿರಾಟ್ ಕೊಹ್ಲಿ 58, ರಜತ್ ಪಾಟಿದಾರ್ 52 ರನ್ ಗಳಿಸಿದರು. ಉಳಿದಂತೆ ಮ್ಯಾಕ್ಸ್‌ವೆಲ್ 33, ಲೋಮರ್ 16 ರನ್ ಗಳಿಸಿದರು. ಗುಜರಾತ್ ಪರ ಪ್ರದೀಪ್ ಸಾಂಗ್ವಾನ್ 2, ರಶೀದ್ ಖಾನ್, ಲ್ಯೂಕಿ ಫರ್ಗೂಸನ್, ಅಲ್ಜಾರಿ ಜೋಸೆಫ್ ಹಾಗೂ ಶಮಿ ತಲಾ ಒಂದೊಂದು ವಿಕೆಟ್ ಪಡೆದರು. 171 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಗುಜರಾತ್ 19.3 ಓವರ್‌ಗಳಲ್ಲಿ ಇನ್ನೂ 3 ಎಸೆತ ಬಾಕಿ ಇರುವಂತೆಯೇ 174 ರನ್ ಗಳಿಸಿ ಗೆಲುವಿನ ನಗೆ ಬೀರಿತು. ತಂಡದ ಪರ ವೃದ್ಧಿಮಾನ್ ಸಹಾ 29, ಶುಭ್‌ಮನ್ ಗಿಲ್ 31, ಸಾಯಿ ಸುದರ್ಶನ್ 20, ಡೇವಿಡ್ ಮಿಲ್ಲರ್ 39, ರಾಹುಲ್ ತೆವಾಟಿಯಾ 43 ರನ್ ಗಳಿಸಿದರು. ಆರ್‌ಸಿಬಿ ಪರ ಶಹಬ್ಬಾಜ್ ಅಹ್ಮದ್, ವನಿಂದು ಹಸರಂಗ ತಲಾ 2 ವಿಕೆಟ್ ಉರುಳಿಸಿದರು. ರಾಹುಲ್ ತೆವಾಟಿಯಾ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಕೊನೆಗೂ ಗೆಲುವಿನ ನಿಟ್ಟುಸಿರು ಬಿಟ್ಟ ರೋಹಿತ್ ಪಡೆ

ಮುಂಬೈ, ಏ.30– ಸೂರ್ಯಕುಮಾರ್ ಯಾದವ್ ಅವರ ಅರ್ಧಶತಕದ ನೆರವಿನಿಂದ ಮುಂಬೈ ಇಂಡಿಯನ್ಸ್ ರಾಜಸ್ಥಾನ್ ರಾಯಲ್ಸ್ ವಿರುದ್ಧ 5 ವಿಕೆಟ್‌ಗಳ ಗೆಲುವು ದಾಖಲಿಸಿದೆ. ಇದರೊಂದಿಗೆ 8 ಸೋಲು ಅನುಭವಿಸಿದ್ದ ರೋಹಿತ್ ಪಡೆ ಕೊನೆಗೂ ಗೆಲುವಿನ ನಿಟ್ಟುಸಿರು ಬಿಟ್ಟಿದೆ.



ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ್ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 158 ರನ್ ಗಳಿಸಿತು. ತಂಡದ ಪರ ಜೋಸ್ ಬಟ್ಲರ್ 67, ಆರ್.ಅಶ್ವಿನ್ 21, ಡ್ಯಾರೆಲ್ ಮಿಚೆಲ್ 17, ಸಂಜು ಸ್ಯಾಮ್ಸನ್ 16, ದೇವದತ್ ಪಡಿಕ್ಕಲ್ 15 ರನ್ ಗಳಿಸಿದರು. ಮುಂಬೈ ಪರ ಹೃತಿಕ್ ಶೋಕೀನ್, ರಿಲೆ ಮೆರಿಡಿತ್ ತಲಾ 2, ಡ್ಯಾನಿಯಲ್ ಸ್ಯಾಮ್ಸ್, ಕುಮಾರ್ ಕಾರ್ತಿಕೇಯ ತಲಾ ಒಂದೊಂದು ವಿಕೆಟ್ ಪಡೆದರು. ಬಳಿಕ ಗೆಲುವಿನ ಗುರಿ ಬೆನ್ನತ್ತಿದ ಮುಂಬೈ 19.2 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 161 ರನ್ ಗಳಿಸುವ ಮೂಲಕ ಜಯ ಸಾಧಿಸಿತು. ಮುಂಬೈ ಪರ ಸೂರ್ಯಕುಮಾರ್ ಯಾದವ್ 51, ತಿಲಕ್ ವರ್ಮಾ 35, ಇಶನ್ ಕಿಶನ್ 26, ಟೀಮ್ ಡೇವಿಡ್ 20, ಪೋಲಾರ್ಡ್ 10 ರನ್ ಗಳಿಸಿದರು. ರಾಜಸ್ಥಾನ್ ಪರ ಟ್ರೆಂಟ್ ಬೋಲ್ಟ್, ಪ್ರಸಿದ್ಧ ಕೃಷ್ಣ, ಅಶ್ವಿನ್, ಕುದೀಪ್ ಸೇನ್ ಹಾಗೂ ಚಹಲ್ ತಲಾ ಒಂದೊಂದು ವಿಕೆಟ್ ಕಬಳಿಸಿದರು. ಸೂರ್ಯಕುಮಾರ್ ಯಾದವ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವಾರದ ಮಿತ್ರ
ಸಾಪ್ತಾಹಿಕ ಪುರವಣಿ







ಕಾರ್ಮಿಕರ ದಿನ
ಪುಟ್ಟ ಕೈಗಳಿಗಿಲ್ಲವೇ ಮುಕ್ತಿ?

ಮುಗ್ಧ ಮುಖದಲ್ಲಿ ಸ್ನಿಗ್ಧ ನಗುವನ್ನು ಬೀರಿ ನಳನಳಿಸಬೇಕಾದ ನಂದನವನದ ಹೂಗಳು ಕೆಲಸದ ಭರಾಟೆಯಲ್ಲಿ ನಲುಗುತ್ತಿರುವುದು ಇತ್ತೀಚಿನ ದಿನಗಳಲ್ಲಿ ಸರ್ವೇಸಾಮಾನ್ಯವಾಗಿದೆ. ಮೃದುತನಕ್ಕೆ ಮತ್ತೊಂದು ಹೆಸರೇ ಕಂದಮ್ಮಗಳು. ಆದರೂ ಕೆಲವೊಂದು ಬಾರಿ ಬಡತನದ ಬೇಗೆಯಲ್ಲಿ ಬೇಯುತ್ತಿರುವ ಮಕ್ಕಳ ಕರಗಳು ದೊಡ್ಡ ಕೆಲಸಗಳನ್ನು ಮಾಡುವುದರಿಂದಾಗಿ ಅವುಗಳು ಚಿಕ್ಕ ವಯಸ್ಸಿನಲ್ಲೇ ಒರಟಾಗ ತೊಡಗಿರುವುದು ಖೇದಕರ. ಉಳ್ಳವರ ಮಕ್ಕಳ ಪೋಷಕರಿಗೆ ತಮ್ಮ ಮಕ್ಕಳು ಎಲ್ಲಿ ನಡೆದರೇ ತೇಯುತ್ತಾರೋ ಎಂಬ ಆತಂಕ ಮನೆಮಾಡಿ ಅವುಗಳನ್ನು ಅತಿಯಾಗಿಯೇ ಜೋಪಾನ ಮಾಡಲು ಬಯಸುತ್ತಾರೆ. ಆದರೆ ಬಡವರ ಮನೆ ಮಕ್ಕಳು ಬಿಸಿಲು–ಮಳೆ ಎನ್ನದೆ ಎಲ್ಲ ಕಡೆ ದುಡಿಯುವುದನ್ನು ಕಂಡಾಗ ಏಕೀ ತಾರತಮ್ಯ ಎಂಬ ಪ್ರಶ್ನೆ ಎಂತಹವರನ್ನು ಕಾಡದೆ ಬಿಡದು. ಇದೊಂದು ರೀತಿಯಲ್ಲಿ ಮಾನವೀಯತೆಗೆ ಕಳಂಕವೆನಿಸಿದರೂ ಬಾಲ ಕಾರ್ಮಿಕ ಪದ್ಧತಿಯನ್ನು ಕಂಡೂ ಕಾಣದಂತೆ ಸ್ವೀಕರಿಸುವ ಮನೋಭಾವವನ್ನು ರೂಢಿಸಿಕೊಂಡಿರುವುದೂ ಸಹ ಒಂದು ರೀತಿ ವಿಷಾದನೀಯ.



ಬಾಲ ಕಾರ್ಮಿಕ ಪದ್ಧತಿ ಇಂದು ಪಿಡುಗಾಗಿ ಕಾಡುತ್ತಿದೆ. ಇದೊಂದು ಜ್ವಲಂತ ಸಮಸ್ಯೆಯಾಗಿದೆ. ಮಕ್ಕಳನ್ನು ಆ ಚಿಕ್ಕ ವಯಸ್ಸಿಗೇ ದುಡಿಮೆಗೆ ದೂಡುವ ಪೋಷಕರೂ ಸಹ ಇಲ್ಲಿ ಅಪರಾಧಿಗಳಾಗುತ್ತಾರೆ. ಇದೊಂದು ರೀತಿಯ ಸಂಕೀರ್ಣ ಸಮಸ್ಯೆಯಾಗಿ ಪರಿಣಮಿಸಿದೆ. ತಿಂಗಳಿಡೀ ದುಡಿಸಿಕೊಂಡು ಪೋಷಕರ ಕೈಗೆ ಕೇವಲ 150 ರಿಂದ 200 ರೂಗಳನ್ನು ನೀಡುವ ಮಾಲೀಕರಿಗೇನೂ ಕಡಿಮೆಯಿಲ್ಲ. ಇದೊಂದು ರೀತಿ ಮಕ್ಕಳ ಪಾಲಿಗೆ ಯಮಯಾತನೆಯಾದರೂ ಉಗುಳಲೂ ಆಗದ, ನುಂಗಲೂ ಆಗದ ಬಿಸಿತುಪ್ಪವಾಗಿ ತಲೆದೋರಿದೆ. ಹೊಲ ಗದ್ದೆಗಳಲ್ಲಿ ದುಡಿಯುವ ಪೋಷಕರ ಜೊತೆಗೆ ಅವರ ಮಕ್ಕಳು ಹೋಗಿ ದುಡಿಯುವುದು ಸರ್ವೇ ಸಾಮಾನ್ಯವಾಗಿದೆ.

ಆಡಿ, ಓದಿ ನಲಿಯಬೇಕಾದ ವಯಸ್ಸಿನಲ್ಲೇ ಮನಸ್ಸಿನ ಆಸೆಗಳಿಗೆ ಕಡಿವಾಣ ಹಾಕಿ ಗೇಣುದ್ದದ ಹೊಟ್ಟೆಗಾಗಿ ಎಲ್ಲವನ್ನೂ ಸಹಿಸಿಕೊಂಡು ಕೆಲವೊಮ್ಮೆ ಉಪವಾಸದ ರುಚಿಯನ್ನೂ ತನ್ನದಾಗಿಸಿಕೊಳ್ಳುತ್ತಾ ಬದುಕನ್ನು ಕಟ್ಟಿಕೊಳ್ಳುವ ಕಿರಿಯರೂ ಇದ್ದಾರೆ. ನಗುವುದನ್ನೇ ಮರೆತು ದುಡಿಯುವದನ್ನಷ್ಟೇ ಜೀವನ ಎಂದುಕೊಂಡು ಬದುಕನ್ನು ಸವೆಸುತ್ತಿರುವ ಬಾಲಕಾರ್ಮಿಕರು ಅದೆಷ್ಟೋ ಮಂದಿ ನಮ್ಮ ದೇಶದಲ್ಲಿದ್ದಾರೆ.

ದುಡಿಯುವ ಕ್ಷೇತ್ರಗಳು

ಎಲ್ಲೆಂದರಲ್ಲಿ ಕುಣಿಯುತ್ತಾ, ನೆಗೆಯುತ್ತಾ ಬದುಕಿನಲ್ಲಿ ಕೇವಲ ಸಂತೋಷವನ್ನಷ್ಟೇ ಕಾಣಬೇಕಾದ ವಯಸ್ಸಿನಲ್ಲೇ ಯಾವುದೋ ಡಾಬಾ, ಹೋಟೆಲ್, ಸೈಕಲ್ ಷಾಪ್, ಜಮಖಾನೆ ನೇಯುವ, ಊದುಬತ್ತಿ ಹೊಸೆಯುವ, ಕಡ್ಡಿ ಪೆಟ್ಟಿಗೆ ತಯಾರಿಸುವ, ಪಟಾಕಿ ಮಾಡುವ, ಗಾಜಿನ ಬಳೆ ತಯಾರಿಸುವ, ಬೀಡಿ ಕಟ್ಟುವ, ರೇಷ್ಮೆ, ತೋಟಗಾರಿಕೆ, ಗಣಿಗಾರಿಕೆ, ಮರಗೆಲಸ, ಚಪ್ಪಲಿ ರಿಪೇರಿ, ವಾನಹ ಗ್ಯಾರೇಜ್, ಕ್ಯಾಂಟೀನ್ ಟೀ ಅಂಗಡಿಗಳು, ಕಾರು ಗ್ಯಾರೇಜ್, ಸ್ಕೂಟರ್ ವರ್ಕ್‌ಷಾಪ್, ತನ್ನ ವಯಸ್ಸನ್ನು ಮೀರಿಯೂ ದುಡಿಯುವ ಈ ಬಾಲರನ್ನೇ ಬಾಲಕಾರ್ಮಿಕರೆಂದು ಕರೆಯಲಾಗುತ್ತದೆ.

ಬಾಲಕಾರ್ಮಿಕರೆಂದರೆ ಯಾರು?

ಸಾಮಾನ್ಯವಾದ ಪರಿಭಾಷೆಯಲ್ಲಿ 5–14 ವರ್ಷ ವಯೋಮಿತಿಯೊಳಗಿನ ಯಾವುದಾದರೂ ಮಗು ವೇತನಕ್ಕಾಗಿ ಇಲ್ಲವೇ ವೇತನರಹಿತವಾಗಿ ದುಡಿಯುವುದನ್ನು ಬಾಲಕಾರ್ಮಿಕರು ಎನ್ನಲಾಗುತ್ತದೆ. ಕಾರ್ಮಿಕ ಸಚಿವಾಲಯದ ಇಲಾಖೆಯ ಪ್ರಕಾರ ಯಾವುದೇ ಮಗು 5–15 ವರ್ಷ ವಯೋಮಿತಿಯ ಒಳಗಿನವನಾಗಿದ್ದು, ಮನೆಯ ಒಳಗೆ ಇಲ್ಲವೇ ಹೊರಗೆ ಕೂಲಿಗಾಗಿ ಇಲ್ಲವೇ ಹಾಗೆ ಸುಮ್ಮನೇ ದುಡಿಯುವುದು ಕೂಡಾ ಬಾಲ ಕಾರ್ಮಿಕ ಎಂದು ಕರೆದಿರುವುದಿದೆ. ಭಾರತ ಸರ್ಕಾರವು ಯಾವುದೇ ಬಾಲಕ ಆರ್ಥಿಕ ಉತ್ಪಾದನಾ ಕಾರ್ಯಚಟುವಟಿಕೆಗಳಲ್ಲಿ ಭಾಗಿಯಾಗಿರುವುದೇ ಬಾಲಕಾರ್ಮಿಕ ಎಂದಿದೆ. ಯುನಿಸೆಫ್‌ನ ಒಂದು ಅಂದಾಜಿನ ಪ್ರಕಾರ, ಆರು ವರ್ಷದಿಂದ 14 ವರ್ಷದೊಳಗಿನ ಬಾಲ ಕಾರ್ಮಿಕರು, ವಿಶ್ವದಲ್ಲಿ ಸುಮಾರು, 200 ಮಿಲಿಯನ್‌ಗಿಂತ ಹೆಚ್ಚಾಗಿದ್ದಾರೆಂದು ಹೇಳಿದೆ. ಅದರಲ್ಲಿ ಸುಮಾರು ಅರ್ಧದಷ್ಟು ಏಷ್ಯಾ ಖಂಡ ಒಂದರಲ್ಲೇ ಇದ್ದಾರೆಂದು ತಿಳಿಸಿದೆ. ಸುಮಾರು ಶೇ. 154ರಷ್ಟು ಬಾಲ ಕಾರ್ಮಿಕರು ಸಂಘಟಿತ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಮಜೂರಿ ಉದ್ಯೋಗವಾಗಲೀ ಅಥವಾ ಮಜೂರಿಯೇತರ ಉದ್ಯೋಗ ವಾಗಲೀ ಅದು ಬಾಲಕಾರ್ಮಿಕ ಪದ್ಧತಿಯೆನಿಸಿಕೊಳ್ಳುತ್ತದೆ. ಶಾಲಾ ಶಿಕ್ಷಣದಿಂದ ವಂಚಿತರಾದ, ಶಾಲೆಯಿಂದ ಹೊರಗುಳಿದ 14 ವರ್ಷದೊಳಗಿನ ಯಾವುದೇ ಮಕ್ಕಳು ದುಡಿಮೆ ಮಾಡದಿದ್ದರೂ ಬಾಲಕಾರ್ಮಿಕರು.

ಕಾರಣಗಳು: ಅತ್ಯಂತ ಕಡಿಮೆ ವರಮಾನ ಹೊಂದಿರುವ ಕುಟುಂಬಗಳು ಸಂಸಾರದ ನಿರ್ವಹಣೆಗಾಗಿ ಮಕ್ಕಳನ್ನು ಓದು ಬಿಡಿಸಿ ಕೆಲಸಕ್ಕೆ ಹಚ್ಚುವ ಪ್ರವೃತ್ತಿಯೇ ಬಾಲ ಕಾರ್ಮಿಕ ಪದ್ಧತಿಗೆ ಮೂಲ ಕಾರಣ. ವಿಧಿಯಿಲ್ಲದೆ ಪರಿಸ್ಥಿತಿಯ ಒತ್ತಡಕ್ಕೆ ಕಟ್ಟುಬಿದ್ದು ಮಕ್ಕಳನ್ನು ಕೆಲಸಕ್ಕೆ ಕಳುಹಿಸಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸಿಕೊಂಡ ಕುಟುಂಬಗಳೂ ಇಲ್ಲದಿಲ್ಲ. ಮಿತಿಮೀರಿದ ಸಂಸಾರದ ಗಾತ್ರವೂ ಇದಕ್ಕೆ ಒಂದು ಮುಖ್ಯ ಕಾರಣ. ಮಕ್ಕಳ ಭವಿಷ್ಯವನ್ನು ರೂಪಿಸಬೇಕಾದವರೇ ಅವರನ್ನು ಬಾಲ ಕಾರ್ಮಿಕರಾಗಲು ದೂಡುತ್ತಿರುವುದೂ ಕಾಣಸಿಗುತ್ತದೆ. ಮುಖ್ಯವಾಗಿ ಅನಕ್ಷರತೆ, ಹೆಚ್ಚು ಸಂತಾನ, ನಿರುದ್ಯೋಗ, ಉತ್ಪಾದನಾ ಸಾಧನಗಳ ಕೊರತೆ, ಮೂಲ ಸೌಲಭ್ಯಗಳ ಕೊರತೆ, ಉದ್ದಿಮೆದಾರರ ಶೋಷಣೆ, ಜಾತಿ ಮತ್ತು ಸಾಂಸ್ಕೃತಿಕ ಪರಂಪರೆ, ನಗರೀಕರಣ, ವಲಸೆ ಮತ್ತು ಜೀವನ ಸುಭದ್ರತೆಯ ಕೊರತೆ, ಕುಲಕಸುಬುಗಳು, ಪಾಲಕರ ಹೊಣೆಗೇಡಿತನ, ಕೊಳಚೆ ಪ್ರದೇಶ, ಶಾಲೆ ತಪ್ಪಿಸುವದು ಹೀಗೆ ನಾನಾ ಕಾರಣಗಳೂ ಬಾಲಕಾರ್ಮಿಕ ಪದ್ಧತಿಗೆ ಮಕ್ಕಳನ್ನು ದೂಡುವುದರಲ್ಲಿ ತಮ್ಮ ಕರಾಳ ಹಸ್ತವನ್ನು ಚಾಚಿರುವದೇ ಕಾರಣ.

ಅದೂ ಅಲ್ಲದೆ ಮಕ್ಕಳನ್ನೇ ದುಡಿಮೆಗೆ ಬಳಸಿಕೊಳ್ಳಲು ಇನ್ನೂ ಕೆಲವು ಮುಖ್ಯವಾದ ಕಾರಣಗಳಿವೆ. ಅವರಿಂದ ಕಡಿಮೆ ಕೂಲಿಗೆ ಹೆಚ್ಚು ಕೆಲಸ ಮಾಡಿಸಬಹುದು, ಮಕ್ಕಳಲ್ಲಿ ಮೋಸ, ವಂಚನೆಗಳು ತಲೆದೋರುವುದಿಲ್ಲ. ಮಕ್ಕಳಲ್ಲಿ ಪ್ರಶ್ನಿಸುವ ಗುಣವಿರುವುದಿಲ್ಲ. ಬೋನಸ್ ಕೇಳುವುದೇ ಇಲ್ಲ. ಘೇರಾವ್ ಮಾಡುವುದಾಗಲೀ, ಸಂಘಟಿತರಾಗಿ ಮುಷ್ಕರ ಮಾಡುವುದಾಗಲೀ ಮಾಡುವುದಿಲ್ಲ. ಯಾವುದೇ ತಕರಾರು, ಚೌಕಾಸಿ ಮಾಡುವುದಕ್ಕೆ ಬರುವುದಿಲ್ಲ. ಮಕ್ಕಳು ಎಲ್ಲಾ ರೀತಿಯ ಶೋಷಣೆಗೂ ಬಾಯಿ ಬಿಡುವುದಿಲ್ಲ ಎಂಬ ಅಚಲವಾದ ನಂಬಿಕೆಯೇ ಇನ್ನೂ ಬಾಲ ಕಾರ್ಮಿಕ ಪದ್ಧತಿ ಅನುಷ್ಠಾನದಲ್ಲಿರಲು ಮೂಲ ಕಾರಣವಾಗಿದೆ.

ಬಾಲಕಾರ್ಮಿಕರ ಪ್ರಮಾಣ

ಭಾರತ ಸರ್ಕಾರದ ಅಂಕಿ ಅಂಶಗಳ ಪ್ರಕಾರ ಸುಮಾರು 2 ಕೋಟಿ ಮಕ್ಕಳು ನಮ್ಮಲ್ಲಿ ಬಾಲಕಾರ್ಮಿಕರಾಗಿ ದುಡಿಯುತ್ತಿದ್ದಾರೆ ಎನ್ನುವುದಾದರೆ ಕೆಲ ಎನ್.ಜಿ.ಒ.ಗಳ ಪ್ರಕಾರ ಆ ಸಂಖ್ಯೆ ಸುಮಾರು 6 ಕೋಟಿಯಷ್ಟಿದೆ. ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ ಹೇಳುವಂತೆ ಇಡೀ ವಿಶ್ವದಲ್ಲಿ ಸುಮಾರು 21.8 ಕೋಟಿ ಬಾಲಕಾರ್ಮಿಕರಿದ್ದಾರೆ. ಭಾರತದಲ್ಲಿ 5–14 ವರ್ಷ ವಯೋಮಿತಿಯೊಳಗಿನ ಬಾಲಕಾರ್ಮಿಕರ ಪ್ರಮಾಣ 14 ಪ್ರತಿಶತದಷ್ಟಿದೆ. ಎಲ್ಲವೂ ಹಣದ ಮೇಲೆ ನಿಂತಿದೆ ಎನ್ನುವುದಕ್ಕಿಂತ ಎಷ್ಟೋ ಕಡೆಗಳಲ್ಲಿ ಕೇವಲ ಊಟ ಬಟ್ಟೆಗಾಗಿ ದುಡಿಯುವ ಮಕ್ಕಳೂ ಇದ್ದಾರೆ. ಉತ್ತರ ಪ್ರದೇಶದ ಮಿರ್ಜಾಪುರದ ಜಮಖಾನೆ ತಯಾರಿಕ ಉದ್ಯಮ, ಸೂರತ್‌ನ ವಜ್ರ ಸಂಸ್ಕರಣ ಘಟಕ ಶಿವಕಾಶಿಯ ಪಟಾಕಿ ಹಾಗೂ ಕಡ್ಡಿಪೆಟ್ಟಿಗೆ ತಯಾರಿಸುವ ಉದ್ಯಮ, ಫಿರೋಜಾಬಾದ್‌ನ ಗಾಜು ತಯಾರಿಕಾ ಘಟಕ ಹೀಗೆ ಎಲ್ಲ ಕಡೆಯೂ ಬಾಲ ಕಾರ್ಮಿಕರಿಂದ ಕೆಲಸ ಪಡೆದುಕೊಂಡು ಅವರನ್ನು ರೋಗಗ್ರಸ್ಥರನ್ನಾಗಿ ಮಾಡುತ್ತಿರುವ ಉದ್ಯಮಗಳೂ ಇವೆ. ನೂರಾರು ಮಕ್ಕಳು ತಮ್ಮ ಇಷ್ಟಕ್ಕೆ ವಿರುದ್ಧವಾಗಿ ಬಾಲ ಕಾರ್ಮಿಕರಾಗಿ ದುಡಿಯುತಿದ್ದಾರೆ.

ದೌರ್ಜನ್ಯ: ಮೂವರು ಬಾಲಕಾರ್ಮಿಕರಲ್ಲಿ ಇಬ್ಬರ ಮೇಲೆ ದೌರ್ಜನ್ಯಗಳು ಜರುಗುತ್ತವೆ 50 ಪ್ರತಿಶತದಷ್ಟು ಬಾಲಕಾರ್ಮಿಕರು ದೈಹಿಕ ಹಿಂಸೆಯನ್ನು ಅನುಭವಿಸಿರುತ್ತಾರೆ. 50.2 ಪ್ರತಿಶತದಷ್ಟು ಮಕ್ಕಳು ವಾರದ ಏಳೂ ದಿನ ದುಡಿಯುತ್ತಾರೆ. 53 ಪ್ರತಿಶತದಷ್ಟು ಮಕ್ಕಳು ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿರುವುದಿದೆ. ಪ್ರತಿ ಇಬ್ಬರಲ್ಲಿ ಒಬ್ಬ ಬಾಲಕ ಮಾನಸಿಕ ಕಿರಿಕಿರಿ ಅನುಭವಿಸುವದಿದೆ. ಸಾಮಾನ್ಯವಾಗಿ, ಬಾಲ ಕಾರ್ಮಿಕರು, ಅಮಾನವೀಯ ಸ್ಥಿತಿಯಲ್ಲಿ ಕಾರ್ಯನಿರ್ವಹಿಸುತ್ತಾರೆ. ಗಾಳಿ, ಬೆಳಕು ಕಾಣದ, ಹೊಗೆ, ಧೂಳಿನಿಂದ ಕೂಡಿದ ವಾತಾವರಣದಲ್ಲಿ ಹಗಲು ರಾತ್ರಿಯೆನ್ನದೆ ಸತತವಾಗಿ ದುಡಿಯುವ ಅನಿವಾರ್ಯತೆ ಅವರದಾಗಿದ್ದು, ಇದರಿಂದ ದೈಹಿಕವಾಗಿ ಹಾಗೂ ಮಾನಸಿಕವಾಗಿ, ಜರ್ಝರಿತರಾಗುವರಲ್ಲದೆ, ಕ್ಷಯ, ಅಸ್ತಮಾ, ಇನ್ನಿತರ ಚರ್ಮ ರೋಗಗಳಿಗೆ ತುತ್ತಾಗುವರಲ್ಲದೆ, ಕೆಲವರು ಅಕಾಲ ಮರಣಕ್ಕೂ ಗುರಿಯಾಗುವವರಿದ್ದಾರೆ.

ನಿಷೇಧ ಕಾಯ್ದೆ: ಬಾಲಕಾರ್ಮಿಕ ಪದ್ಧತಿ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ –1986ರಲ್ಲಿ ಈಗಾಗಲೇ 13 ವೃತ್ತಿಗಳಲ್ಲಿ ಮತ್ತು ಆ ಸಂಬಂಧ 51 ಪ್ರಕ್ರಿಯೆಗಳಲ್ಲಿ 14 ವರ್ಷದೊಳಗಿನ ಮಕ್ಕಳನ್ನು ತೊಡಗಿಸುವುದು ಅಥವಾ ನೇಮಿಸಿಕೊಳ್ಳುವುದನ್ನು ನಿಷೇಧಿಸಲಾಗಿದೆ. ಈ ವೃತ್ತಿಗಳಲ್ಲದೆ ಮಕ್ಕಳನ್ನು ಗೃಹಕೃತ್ಯ ಕೆಲಸಗಳಲ್ಲಿ ತೊಡಗಿಸಿಕೊಳ್ಳುವುದು, ಡಾಬಾ, ರೆಸ್ಟೋರೆಂಟ್, ಹೋಟೆಲ್, ಚಹಾ ಅಂಗಡಿಗಳು ಮತ್ತು ಮನರಂಜನಾ ಕೇಂದ್ರಗಳಲ್ಲಿ 14 ವರ್ಷದೊಳಗಿನ ಮಕ್ಕಳನ್ನು ದುಡಿಸಿಕೊಳ್ಳುವುದು ಶಿಕ್ಷಾರ್ಹ ಅಪರಾಧವಾಗುತ್ತದೆ. ಈ ಪದ್ಧತಿಯನ್ನು ಸಂಪೂರ್ಣವಾಗಿ ನಿಷೇಧಿಸಿ, ಎಲ್ಲ ಮಕ್ಕಳಿಗೂ ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು ನೀಡಬೇಕು ಎಂಬುದು ಕೇಂದ್ರದ ಉದ್ದೇಶ. ಪ್ರಸ್ತುತ ಕಾನೂನಿನ ಪ್ರಕಾರ, 14 ವರ್ಷ ಒಳಗಿನ ಮಕ್ಕಳು ಅಪಾಯಕಾರಿ ಉದ್ದಿಮೆ ಅಥವಾ ಕಾರ್ಖಾನೆಗಳಲ್ಲಿ ಕೆಲಸ ಮಾಡುವಂತಿಲ್ಲ ಅಪಾಯಕಾರಿಯಲ್ಲದ ಕಡೆ ಕೆಲಸ ಮಾಡಬಹುದು. ಹೊಸ ಕಾನೂನಿನಲ್ಲಿ ಯಾವುದೇ ಕಾರ್ಖಾನೆಯಲ್ಲಿ 16 ವರ್ಷದ ಒಳಗಿನ ಮಕ್ಕಳು ಕೆಲಸ ಮಾಡುವಂತಿಲ್ಲ.

ರಾಜ್ಯದ ಅಂಕಿ ಅಂಶ

ಬಾಲ ಕಾರ್ಮಿಕರನ್ನು ರಕ್ಷಿಸಲು ಕಾರ್ಮಿಕ ಇಲಾಖೆ 2001–12ರ ಅವಧಿಯಲ್ಲಿ 3,63,860 ತಪಾಸಣೆ ನಡೆಸಿ, 1,07,947 ಬಾಲ ಕಾರ್ಮಿಕರನ್ನು ಗುರುತಿಸಿ, ಅವರಿಗೆ ಪುನರ್ವಸತಿ ಕಲ್ಪಿಸಿದೆ. 18,915 ಪ್ರಕರಣ ದಾಖಲಿಸಿದ್ದು, ಅವುಗಳಲ್ಲಿ 1,322 ಇತ್ಯರ್ಥವಾಗಿವೆ. ತಪ್ಪಿತಸ್ಥರಿಂದ 79,18,675 ರೂ. ದಂಡ ವಸೂಲಿ ಮಾಡಲಾಗಿದೆ.

ಐಎಲ್‌ಒ ಸಮೀಕ್ಷೆ

ಕಾರ್ಮಿಕರ ಸಮಸ್ಯೆಗಳನ್ನು ಅರಿಯಲು ಮತ್ತು ಈ ಕುರಿತು ಜಾಗೃತಿ ಮೂಡಿಸಲು 2002ರಲ್ಲಿ ಐಎಲ್‌ಒ ಸ್ಥಾಪನೆಯಾಯಿತು. ಈವರೆಗೆ ಸಂಸ್ಥೆ ವಿಶ್ವದಾದ್ಯಂತ 218 ದಶಲಕ್ಷಬಾಲ ಕಾರ್ಮಿಕರನ್ನು ಗುರುತಿಸಿದೆ. 2001ರ ಜನಗಣತಿಯಲ್ಲಿ ಬಾಲ ಕಾರ್ಮಿಕರ ಸಂಖ್ಯೆ 12.7 ದಶಲಕ್ಷ ಎಂದು ಅಂದಾಜು ಮಾಡಲಾಗಿದೆ. ದೇಶದ ಒಟ್ಟು ಕಾರ್ಮಿಕರಲ್ಲಿ ಶೇ.3.6ರಷ್ಟು ಬಾಲ ಕಾರ್ಮಿಕರಿದ್ದಾರೆ. ಬಡತನ ಸೇರಿದಂತೆ ನಾನಾ ಕಾರಣಗಳಿಂದಾಗಿ ಕೆಲಸ ಮಾಡುವ ಇವರು ಹಕ್ಕು ಹಾಗೂ ಶಿಕ್ಷಣದಿಂದ ವಂಚಿತರಾಗಿದ್ದು, ಭೌತಿಕ ಮತ್ತು ಮಾನಸಿಕವಾಗಿ ಬಳಲುತ್ತಿದ್ದಾರೆ.

ಕಾನೂನು ಕ್ರಮ: ಬಾಲ ನ್ಯಾಯ ಕಾಯ್ದೆ ಅನ್ವಯ ಮಕ್ಕಳಿಗೆ ಶಿಕ್ಷಣ, ಆರೈಕೆ ಮತ್ತು ರಕ್ಷಣೆ ಕೊಡಲೇಬೇಕು. ವಂಚಿತ ಮಕ್ಕಳಿಗೆ ಮಕ್ಕಳ ಕಲ್ಯಾಣ ಸಮಿತಿಯ ಮೂಲಕ ಪರಿಹಾರ ಒದಗಿಸಲಾಗುವುದು. ದೇಶದ ಎಲ್ಲಾ ಮಕ್ಕಳಿಗೂ ಪ್ರಾಥಮಿಕ ಶಿಕ್ಷಣ ಕಡ್ಡಾಯ ಹಾಗೂ ಹೆಣ್ಣು ಮಕ್ಕಳ ಶಿಕ್ಷಣ ಕಲಿಕಗೆ ವಿಶೇಷ ಕಾಳಜಿ ವಹಿಸಲಾಗಿದೆ. ರಾಷ್ಟ್ರೀಯ ಬಾಲಕಾರ್ಮಿಕ ಯೋಜನೆಯು ಬಾಲ ಕಾರ್ಮಿಕರನ್ನು ಗುರುತಿಸಿ ಅಂಥವರಿಗೆ ಪುನರ್ವಸತಿ ಕಲ್ಪಿಸುವ ಗುರಿಹೊಂದಿದೆ. ಬಾಲಕಾರ್ಮಿಕರಿಗಾಗಿ ಎನ್.ಸಿ.ಎಲ್.ಪಿ. ವಿಶೇಷ ಶಾಲೆಗಳು ವಸತಿಶಾಲೆಗಳನ್ನು ಹೊಂದಿದ್ದು ಈ ಶಾಲೆಗಳನ್ನು ಸ್ವಯಂ ಸೇವಾಸಂಸ್ಥೆಗಳು ನಿರ್ವಹಿಸುತ್ತಿವೆ. ಬಾಲ ಕಾರ್ಮಿಕರನ್ನು ದುಡಿಸಿಕೊಳ್ಳುವವರಿಗೆ 3 ತಿಂಗಳಿನಿಂದ 2 ವರ್ಷಗಳವರೆಗೆ ಜೈಲುಶಿಕ್ಷೆ ಮತ್ತು ರೂ. 10,000 ದಿಂದ 20,000 ರೂ. ವರೆಗೂ ದಂಡ ವಿಧಿಸಲಾಗುವುದು. ಮಾಲೀಕರು ಪುನಃ ಅಪರಾಧ ಮಾಡಿದ್ದಲ್ಲಿ 6 ತಿಂಗಳಿನಿಂದ 2 ವರ್ಷಗಳವರೆಗೆ ಸೆರೆವಾಸ ವಿಧಿಸಲಾಗುವುದು. 1996ರ ಬಾಲ ಕಾರ್ಮಿಕರ ನಿಷೇಧ ಕಾಯ್ದೆಗನುಗುಣವಾಗಿ ಮಕ್ಕಳನ್ನು ಕಠಿಣತರವಾದ ಉದ್ಯೋಗಕ್ಕೆ ದುಡಿಸಿಕೊಳ್ಳುವುದನ್ನು ನಿಷೇಧಿಸುವುದರೊಂದಿಗೆ ಅಂತಹ ಮಕ್ಕಳ ಶಿಕ್ಷಣಕ್ಕಾಗಿ 20 ಸಾವಿರ ರೂ.ಗಳನ್ನು ಮೀಸಲು ನಿಧಿಗೆ ನೀಡಬೇಕು. ಬಾಲ ಕಾರ್ಮಿಕರ ಮನೆಯ ವಯಸ್ಕರೊಬ್ಬರಿಗೆ ಕೆಲಸ ನೀಡಬೇಕು.

ಪರಿಹಾರವಿಲ್ಲವೇ?

ಖಂಡಿತಾ ಬಾಲ ಕಾರ್ಮಿಕ ಪದ್ಧತಿಗೆ ಅಂತ್ಯ ಹೇಳಲು ನಾಗರೀಕ ಸಮಾಜದ ಪ್ರತಿಯೊಬ್ಬರೂ ಕಟೀಬದ್ಧರಾಗಬೇಕಾಗಿದೆ. ಮಕ್ಕಳಿಂದ ದುಡಿಸಿಕೊಳ್ಳುವವರ ಮನ ಪರಿವರ್ತನೆಯಾಗಬೇಕು. ಮಕ್ಕಳಿಂದ ದುಡಿಸಿಕೊಂಡು ತಾವು ಸಂಪಾದಿಸುವುದು ಮಹಾಪಾಪ ಎನ್ನವು ಪಾಪಪ್ರಜ್ಞೆಯನ್ನು ಬೆಳೆಸಿಕೊಂಡರೆ ಸಾಧ್ಯವಾಗುವುದು ಕಷ್ಟವೇನಲ್ಲ. ಭವಿಷ್ಯದ ನಾಗರೀಕರನ್ನು ಈ ರೀತಿ ಚಿಕ್ಕ ವಯಸ್ಸಿನಲ್ಲಿಯೇ ದುಡಿಮೆಗೆ ದೂಡುವ ರಾಕ್ಷಸೀ ಪ್ರವೃತ್ತಿಯಿಂದ ಮೊದಲು ಹಿರಿಯರು ಹೊರ ಬಂದರೆ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದರೊಂದಿಗೆ ಅವರ ಮುಂದಿನ ಬಾಳಿಗೆ ಅಡಿಗಲ್ಲಾಗಬಹುದು.

15 ಜಿಲ್ಲೆಗಳಲ್ಲಿ 309 ವಿಶೇಷ ಶಾಲೆಗಳು ಕಾರ್ಯ ನಿರ್ವಹಿಸುತ್ತಿವೆ. ಈ ಶಾಲೆಗಳಲ್ಲಿ 15032 ಮಕ್ಕಳು ತಮ್ಮ ಹೆಸರನ್ನು ನೋಂದಾಯಿಸಿ ಶಿಕ್ಷಣ ಪಡೆಯುತ್ತಿದ್ದಾರೆ. ರಾಜ್ಯ ಸರಕಾರವು 2001ರಲ್ಲಿ ಬಾಲ ಕಾರ್ಮಿಕ ಕ್ರಿಯಾ ಯೋಜನೆಯನ್ನು ಜಾರಿಗೆ ತಂದಿದ್ದು, ಈ ಕ್ರಿಯಾ ಯೋಜನೆಯ ಮೂಲಕ ಬಾಲಕಾರ್ಮಿಕರನ್ನು ಕೆಲಸದಿಂದ ಬಿಡುಗಡೆ ಮಾಡುವುದು ಹಾಗೂ ಬಿಡುಗಡೆ ಹೊಂದಿದ ಮಕ್ಕಳನ್ನು ಶಾಲೆಗೆ ಸೇರಿಸುವ ಕಾರ್ಯಕ್ರಮವನ್ನು ಮಾಡಲಾಗುತ್ತದೆ. ರಾಜ್ಯ ಬಾಲಕಾರ್ಮಿಕ ಯೋಜನೆಯು 14 ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದೆ.


ಬೆಳೆತು ಬಲಿಯುವ ಮುನ್ನವೇ ಮೈಬಗ್ಗಿಸಿ ದುಡಿಯುವ ಪುಟ್ಟ ಜೀವಗಳಿವರು. ಜೀವನವೆಂದರೇನು ಎಂದು ತಿಳಿಯುವ ಮುನ್ನವೇ ಬದುಕಿನ ಬಗ್ಗೆಯೇ ಜಿಗುಪ್ಸೆ ತಾಳಿದವರೆಷ್ಟೋ ಮಂದಿ ಮಕ್ಕಳು ಇಂದು ನಮ್ಮೊಂದಿಗಿದ್ದಾರೆ. ಆಡಿ ಓಡಿ ಓದಬೇಕಾದ ವಯಸ್ಸಿನಲ್ಲಿಯೇ ಬದುಕಿನ ನೊಗವನ್ನು ಕೊರಳಿಗೆ ಕಟ್ಟಿಕೊಂಡು ತಮ್ಮ ಬದುಕು ಇಷ್ಟೇ ಎಂದು ಕೊರಗುವ ಮಕ್ಕಳೂ ಇದ್ದಾರೆ. ಉಪ ವಾಸ, ವನವಾಸಕ್ಕಾಗಿ ತನ್ನನ್ನು ತಾನು ದುಡಿಸಿಕೊಳ್ಳುವ ಮಕ್ಕಳು ತಮ್ಮ ಅಮೂಲ್ಯ ವಾದ ಬಾಲ್ಯವನ್ನು ಬಲಿ ಕೊಡುತ್ತಿರುವ ಪರಿ ಮಾತ್ರ ಕಣ್ಣಾಲಿಗಳನ್ನು ಒದ್ದೆ ಮಾಡುತ್ತದೆ. ತಮ್ಮ ಬಾಲ್ಯವನ್ನು ಯಾರಿಗೋಸ್ಕರಾನೋ ಬಲಿ ಕೊಡುತ್ತಿರುವುದನ್ನು ಕಂಡೂ ಕಾಣದಂತೆ ನಮ್ಮ ವಿವೇಕವಂತ ಸಮಾಜ ತನ್ನಷ್ಟಕ್ಕೆ ತಾನೇ ಸಾಗುತ್ತಿರುವುದನ್ನು ಕಂಡಾಗ ಮನಸ್ಸು ಮುದುಡುತ್ತದೆ.

ಕೆಲವು ಮಕ್ಕಳು ತಮ್ಮ ನಿಜವಾದ ವಯಸ್ಸನ್ನೂ ಮರೆಮಾಚಿ ಕೆಲಸಕ್ಕೆ ಸೇರಿರುವುದೂ ಸಹ ಅರಗಿಸಿಕೊಳ್ಳಲಾಗದ ಸತ್ಯಸಂಗತಿ. ಕುಟುಂಬದ ನಿರ್ವಹಣೆಗಾಗಿ ಪುಟ್ಟದೇಹವನ್ನು ಪಣಕ್ಕಿಡುವ ಮಕ್ಕಳ ಬಗೆ ಮರುಕವೆನಿಸುತ್ತದೆ. ಕೆಲವೊಮ್ಮೆ ಇಂತಹ ಮಕ್ಕಳು ಸಮಾಜ ಘಾತುಕರಾಗಿಯೂ ಬದಲಾಗುತ್ತಿರುವುದೂ ಸಹ ಇಡೀ ನಾಗರೀಕ ಸಮಾಜ ತಲೆತಗ್ಗಿಸುವಂತಾಗಿದೆ. ಇದು ಇಂದು ನೆನ್ನೆಯ ಸಮಸ್ಯೆಯಲ್ಲ ಕಾಲಾಂತರದಿಂದಲೂ ನಡೆದುಕೊಂಡು ಬರುತ್ತಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಸರ್ಕಾರದ ಬಿಗಿ ನಿಲುವಿನಿಂದ, ಸಮಾಜದ ಒಳಿತಿಗಾಗಿ ಸಹಕರಿಸುವವರಿಂದ, ಹೆಚ್ಚುತ್ತಿರುವ ಶಿಕ್ಷಣ ಮಟ್ಟದಿಂದ ಬಾಲ ಕಾರ್ಮಿಕ ಪದ್ಧತಿ ಸ್ವಲ್ಪ ಮಟ್ಟಿಗೆ ಕಡಿಮೆಯಾಗ ತೊಡಗಿದೆ ಎಂಬುದೇ ಸಮಾಧಾನಕರ ಸಂಗತಿ.



ಮ.ನ.ಲತಾಮೋಹನ್
ಮೊ. 9481831434

ವಾರ ಭವಿಷ್ಯ



1.05.2022ರಿಂದ 7.05.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ
ರವಿ–ಮೇಷ, ಚಂದ್ರ–ಮೇಷ, ವೃಷಭ, ಮಿಥುನ, ಕಟಕ, ಕುಜ–ಕುಂಭ, ಬುಧ–ವೃಷಭ, ಗುರು–ಮೀನ, ಶುಕ್ರ–ಮೀನ, ಶನಿ–ಕುಂಭ, ರಾಹು–ಮೇಷ ಮತ್ತು ಕೇತು– ವೃಶ್ಚಿಕ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು". ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ, ವಿಳಾಸ : 533, 6ನೇ ಕ್ರಾಸ್, ಬೋಗಾದಿ ಉತ್ತರ 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ. ಮೈಸೂರು.
ಮೊ.9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ದುಡುಕು ನಿಮ್ಮ ರಾಶಿ ಜನ್ಮಸ್ವಭಾವ. ಅದಕ್ಕೆ ನೀರೆರೆಯಲು ಈಗ ನಿಮ್ಮ ರಾಶಿಗೆ ರಾಹುವಿನ ಆಗಮನವಾಗಿದೆ. ಆದ ಕಾರಣ ಸಂಯಮವೇ ನಿಮ್ಮ ಮೂಲಮಂತ್ರವಾಗಿರಲಿ. ಗೃಹೀಯ ಸಮಸ್ಯೆಗಳನ್ನು ಗೃಹದಲ್ಲೇ ಇತ್ಯರ್ಥಪಡಿಸಿಕೊಂಡರೆ ಒಳಿತಾಗುವುದು. ಉಚ್ಚ ಚಂದ್ರನ ಸಂಚಾರದಿಂದ ಮುನಿದ ಮನಸ್ಸುಗಳು ಸ್ವಸ್ಥವಾಗುವುದು. ಸ್ತ್ರೀಯರು ಪ್ರಸಾಧನ ವಸ್ತು ಖರೀದಿಗೆ ಧಾರಾಳವಾಗಿ ಹಣ ವ್ಯಯಿಸುವರು.– ಜಗದ್ವಂದ್ಯನಾದ ಶ್ರೀಗಣೇಶ ಸೇವೆ, ಶುಭಸಂಖ್ಯೆ–1.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಗುರುದೇವ– ಶನಿದೇವ ಅಶುಭ ಸ್ಥಾನದಲ್ಲಿ ಸಂಚರಿಸುತ್ತಿದ್ದಾರೆ. ಇದರಿಂದ ನಿಮ್ಮ ಶಿಸ್ತು ಪಾಲನೆಗೆ ಭಂಗ ಉಂಟಾಗುತ್ತದೆ. 'ಬಲವಂತದ ಮಾಘ ಸ್ನಾನ' ನಿಮಗೆ ಇಷ್ಟವಿಲ್ಲದಿದ್ದರೂ ಮಾಡಬೇಕಾಗುತ್ತದೆ. ವಾರ ಮಧ್ಯೆ ಉಚ್ಚ ಸ್ಥಾನಕ್ಕೆ ಬರುವ ಚಂದ್ರ ಬುದ್ಧಿ ಬಲ, ಹಣಬಲ, ಧನಬಲವನ್ನು ಒದಗಿಸಲಿದ್ದಾನೆ. ಸರ್ಕಾರಿ ಕೆಲಸ ಕಾರ್ಯಗಳಿಗೆ ಅಧಿಕಾರಿಗಳ ಸಹಕಾರ ದೊರೆಯುತ್ತದೆ. ಜೂಜು, ಸಟ್ಟಾಗಳಿಂದ ದೂರವಿರಿ. – ಶ್ರೀಶನಿ ಸ್ತೋತ್ರಪಠಿಸಿ, ಶುಭಸಂಖ್ಯೆ–2.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಚತುರ ಗುಣವುಳ್ಳ ನೀವು ಸಂಸಾರದಲ್ಲಿ ಬರುವ ಏಳುಬೀಳುಗಳನ್ನು ಸಮರ್ಥವಾಗಿ ಪರಿಹರಿಸಿಕೊಳ್ಳುವಿರಿ. ಗುರು ಬಲದಿಂದ ಆರ್ಥಿಕ ಪರಿಸ್ಥಿತಿಯಲ್ಲಿ ಸುಧಾರಣೆಯಾಗಲಿದೆ. ನೂತನ ವ್ಯವಹಾರಗಳನ್ನು 'ಅಕ್ಷಯ ತೃತೀಯ'ದಂದು ಆರಂಭಿಸಬಹುದು. ಬೆಲೆ ಬಾಳುವ ವಸ್ತ್ರಾಭರಣಗಳನ್ನು ಖರೀದಿಸುವಿರಿ. ವಿದ್ಯಾ, ವ್ಯಾಸಂಗಗಳು ಸುಗುಮವಾಗಿ ಸಾಗುವುದು. ಆಧ್ಯಾತ್ಮ ಗುರುಗಳ ಭೇಟಿ, ಆಶೀರ್ವಚನಗಳು ದೊರೆಯಲಿದೆ. – ಶ್ರೀದೇವಿ ಚರಣ ಪೂಜೆ, ಶುಭಸಂಖ್ಯೆ–4.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)

ಗುರುದೇವ ಸುಸ್ಥಾನದಲ್ಲಿದ್ದಾರೆ. ಶುಭವಾರ್ತೆ, ಪ್ರೀತಿ ಪಾತ್ರರ ಸಮ್ಮಿಲನ, ಕನಕ ವಸ್ತ್ರಾಭರಣ ಖರೀದಿಗಳಿಂದ ವಾರಕ್ಕೆ ಸ್ವಾಗತ. ವಿವಾಹ ಯೋಗ್ಯರಿಗೆ ಮದುವೆ ನಿಶ್ಚಿತಾರ್ಥದ ಯೋಗ. ಸಾರ್ವಜನಿಕ ರಂಗದಲ್ಲಿರುವವರಿಗೆ ಸನ್ಮಾನ, ಗೌರವಗಳು, ನ್ಯಾಯಾಲಯ ವಿಚಾರಗಳು ನಿಮಗೆ ಅನುಕೂಲವಾಗಲಿದೆ. ಆರ್ಥಿಕವಾಗಿ ಮುನ್ನಡೆಯನ್ನು ಸಾಧಿಸುವಿರಿ. ವಾರದ ಕಡೆಗೆ ಪುಣ್ಯ ಕ್ಷೇತ್ರ ಸಂದರ್ಶನದಿಂದ ಸಪ್ತಾಹಕ್ಕೆ ತೆರೆ. – ಶ್ರೀನೃಸಿಂಹ ವಂದನ, ಶುಭಸಂಖ್ಯೆ–5.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ವಾರದಾರಂಭಕ್ಕೆ ಮನಸ್ಸಿಗೆ ಆವರಿಸಿರುವ ದುಗುಡತೆ ನಿವಾರಣೆ ಆಗುವುದು. ಕೆಲಸ ಕಾರ್ಯಗಳು ನೀವಂದುಕೊಂಡಂತೆ ಸಾಗುವುದು. ಹೆಚ್ಚಿನ ಆದಾಯವಿದ್ದಾಗ್ಯೂ ಖರ್ಚುಗಳನ್ನು ನಿಯಂತ್ರಿಸಲಾರಿರಿ. ವಾರ ಮುನ್ನಡೆದಂತೆ ಹಿತೈಷಿಗಳ ಸಹಕಾರದಿಂದ ನಿಂತು ಹೋಗಿದ್ದ, ಕೆಲಸಗಳು ಮರುಚಾಲನೆ ಪಡೆಯಲಿದೆ. ಸರ್ಕಾರಿ ನೌಕರರಿಗೆ ಬಡ್ತಿ ಸಮೇತ ವರ್ಗಾವಣೆಯಾಗುವ ಸಂಭವವಿದೆ. ಉಷ್ಣಜನಿತ ಕಾಯಿಲೆ ಕಾಡಿಸುತ್ತದೆ. – ಶ್ರೀವಿಷ್ಣು ಅರ್ಚನೆ, ಶುಭಸಂಖ್ಯೆ–6.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಯಾವುದನ್ನೂ ಪೂರ್ಣವಾಗಿ ಪರೀಕ್ಷಿಸದೆ ಅಂಗೀಕರಿಸಬೇಡಿ. 'ಧೈರ್ಯವಿದ್ದವರಿಗೆ ದೈವ ಸಹಾಯ' ಎಂಬಂತೆ ಮಾಡುವ ಕೆಲಸವನ್ನು ಶ್ರದ್ಧೆಯಿಂದ ಮಾಡಿ. ಸರ್ಕಾರಿ ಕೆಲಸಗಳು ತಡವೆನಿಸಿದರೂ ಸಕಾರಾತ್ಮಕ ಫಲವನ್ನು ನೀಡುವುದು. ಗಣ್ಯ ವ್ಯಕ್ತಿಗಳ ಭೇಟಿಯಿಂದ ನಿಮ್ಮ ಸಮಸ್ಯೆಗೆ ಪರಿಹಾರ ದೊರಕುವುದು. ಮನೆಯಲ್ಲಿ ಪರಸ್ಪರ ಮಧುರ ಭಾವನೆಗೆ ಧಕ್ಕೆ ಉಂಟಾಗದಂತೆ ನಡೆದುಕೊಳ್ಳಿ. – ಶ್ರೀದತ್ತ ಉಪಾಸನೆ, ಶುಭಸಂಖ್ಯೆ–4.

ಕಟಕ (ಹೀ.ಹು.ಹೆ.ಹೊ.ಡ.ಡಿ.ಡು)

ವೈಯಕ್ತಿಕ ಕೆಲಸ ಕಾರ್ಯಗಳನ್ನು ಆಫೀಸ್ ಜವಾಬ್ದಾರಿಗಳನ್ನು ಅಪ್‌ಡೇಟ್ ಮಾಡಿಕೊಳ್ಳಲು ನಿಮಗೆ ಗ್ರಹಬಲವಿದೆ. ವಾರ ಮಧ್ಯೆ ನಿಮ್ಮ ರಾಶ್ಯಾಧಿಪತಿ ಚಂದ್ರ ಉಚ್ಚಕ್ಕೆ ಬರುವುದರಿಂದ ಧನ–ಕನಕ ಪ್ರಾಪ್ತಿ, ವಾಹನ ಖರೀದಿಗೆ ಪ್ರೇರಣೆ ಉಂಟಾಗುವುದು. ಸರ್ಕಾರಿ ಕಚೇರಿ ಕೆಲಸಗಳು ತ್ವರಿತವಾಗಿ ವಿಲೇವಾರಿಯಾಗುವುದು. ಹಾಲು ಜನ್ಯ ವಸ್ತು ಮಾರಾಟ, ಐಸ್‌ಕ್ರೀಂ ಮಾರಾಟ ಭರಾಟೆಯಾಗಿ ನಡೆಯಲಿದೆ. ವಾರಾಂತ್ಯಕ್ಕೆ ಮಿತ್ರರೊಡಗೂಡಿ 'ಪಾರ್ಟಿ'. – ಶ್ರೀ ರಾಜರಾಜೇಶ್ವರಿ ಸ್ತೋತ್ರ ಪಠಿಸಿ, ಶುಭಸಂಖ್ಯೆ–3.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

'ಸರಳತನ ಸಜ್ಜನರಿಗೆ ಭೂಷಣ' ಎಂಬಂತೆ ನಡೆದು ಸಾಮಾಜಿಕವಾಗಿ ಗೌರವಾಧರಗಳಿಗೆ ಭಾಜನರಾಗುವಿರಿ. ಕೈಗೊಂಡ ಕೆಲಸ ಕಾರ್ಯಗಳು ಶನಿದೇವನ ಅಡ್ಡ ಪರಿಣಾಮದ ಹೊರತಾಗಿಯೂ ಜಯದ ಹಾದಿಯಲ್ಲಿ ಸಾಗಿದೆ. ನಿಮ್ಮ ಮನೋವಿಕಾರಗಳನ್ನು ಹತೋಟಿಯಲ್ಲಿಡಿ, ಅನ್ಯಥಾ ರಾಹು ನಿಮ್ಮ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಬಹುದು. ವಾಹನ ಚಾಲನೆ ಮೋಜಿಗಲ್ಲ ಎಂಬ ಅರಿವಿದ್ದರೆ ಆಗುವ ಅನಾಹುತ ತಪ್ಪಿಸಿಕೊಳ್ಳಬಹುದು. – 'ಓಂ ನಮೋ ನಾರಾಯಣ' ಮಂತ್ರ ಜಪಿಸಿ, ಶುಭಸಂಖ್ಯೆ–3.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ದೃಢ ಚಿತ್ತ ಉಳ್ಳವರಾದ ನೀವು 'ಹಸಿದು ಉಂಡ ಊಟ ಚೆನ್ನ' ಎಂಬ ಆಶಾಭಾವನೆಯಿಂದ ಮುಂದುವರೆಯಿರಿ. ಗುರುಗ್ರಹ ಅಷ್ಟಮಕ್ಕೆ ಬಂದಿರುವ ಕಾರಣ ನಿಮ್ಮ ಬಹು ನಿರೀಕ್ಷಿತ ಕೆಲಸಗಳು ಯಶಸ್ಸಿನ ಹಾದಿಯಲ್ಲಿ ಸಾಗದೆ ಮನಸ್ಸಿಗೆ ಬೇಸರವೆನಿಸುವುದು. ಧರ್ಮಗುರುಗಳ ಮಾರ್ಗದರ್ಶನ ಮುಂದಿನ ಹಾದಿ ತೋರಲಿದೆ. ಗಾರ್ಮೆಂಟ್ ವ್ಯಾಪಾರಿಗಳಿಗೆ ಉತ್ತಮ ವ್ಯಾಪಾರವಾಗಲಿದೆ. ಪುಣ್ಯ ಕೆಲಸಗಳಿಂದ ಪ್ರಸಿದ್ಧಿಗೆ ಬರುವಿರಿ. – ಶ್ರೀ ಸೂರ್ಯಾಷ್ಟಕ ಪಠಿಸಿ, ಶುಭಸಂಖ್ಯೆ–8.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

'ಪ್ರಾರ್ಥಿಸುವಾಗ ಪ್ರಸಾದದ ಚಿಂತೆ ಏಕೆ' ಎಂಬ ನಾಣ್ನುಡಿಯಂತೆ ಶುಭಫಲದ ನಿಮ್ಮ ನಿರೀಕ್ಷೆ ಸಾಕಾರವಾಗಲಿದೆ. ಇದೀಗ ತಾನೆ ದ್ವಿತೀಯ ಸ್ಥಾನಕ್ಕೆ ಪಲ್ಲಟವಾಗಿರುವ ಗುರು ಕರುಣೆಯಿಂದ ನಿಮ್ಮ ಬಹು ನಿರೀಕ್ಷಿತ ಕೆಲಸಗಳು ಯಶಸ್ಸಿನ ಹಾದಿಯಲ್ಲಿ ಸಾಗುವುದು. ಸಮಯೋಚಿತ ಜಾಣ್ಮೆಯಿಂದ ಮೇಲಧಿಕಾರಿಗಳ ಪ್ರಶಂಸೆಗೆ ಪಾತ್ರರಾಗುವಿರಿ. ಹಳೆಯ ಮಿತ್ರರ ಸಮಾಗಮ ಖುಷಿ ತಂದರೂ ಅವರ 'ಟ್ರೀಟ್'ಗಾಗಿ ಹೆಚ್ಚಿನ ಹಣ ವ್ಯಯವಾಗುವುದು. – ಶ್ರೀಶಿವಾಷ್ಟೋತ್ತರ ಪಠಿಸಿ, ಶುಭಸಂಖ್ಯೆ–7.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಸಪ್ತಮ ಭಾವದಲ್ಲಿರುವ ಶುಭ ಗುರುವಿನ ಬಲದ ಸುಫಲವಾಗಬೇಕಾದರೆ ಸ್ವಂತ ಪರಿಶ್ರಮದ ಅಗತ್ಯವೂ ಬೇಕು. 'ಪ್ರಯತ್ನ ಪುರುಷಾಧೀನ ಫಲ ದೈವಾಧೀನ' ಶಿಕ್ಷಣದಲ್ಲಿ ಹೆಚ್ಚಿನ ಉನ್ನತಿಯನ್ನು ಸಾಧಿಸುವಿರಿ. ಪಾಲುದಾರಿಕೆ ವ್ಯವಹಾರಗಳು ಹೆಚ್ಚಿನ ಧನಾದಾಯವನ್ನು ತಂದು ಕೊಡುವುದು. ಮನೆಯಲ್ಲಿ ಶಾಂತಿಯ ವಾತಾವರಣ ನೆಲೆಯಾಗಲು ಶ್ರೀತುಳಸಿ ಪೂಜೆ ಮಾಡಿ. ವಾಯು ಸಂಬಂಧಿ ಕಾಯಿಲೆ ಕಾಡಬಹುದು. – ಶ್ರೀವಿಷ್ಣುವಿಗೆ ತುಳಸಿ ಸಮರ್ಪಣೆ, ಶುಭಸಂಖ್ಯೆ–9.

ಮೀನ (ದಿ.ದು.ಖ.ಝ.ಥ.ದೆ.ದೊ.ಚ.ಚಿ)

ಈ ವಾರ ಮನೋಕಾರಕ ಚಂದ್ರನಿಂದಾಗಿ ಹರ್ಷ, ಸಂತೋಷಗಳಿಂದ ವಾರದ ಆಗಮನ. ಹೊಸ ಯೋಚನೆಗಳ ಸಾಕಾರಕ್ಕೆ ಹೊಸ ಹುಮ್ಮಸ್ಸಿನಿಂದ ಪ್ರಯತ್ನಿಸುವಿರಿ. ಐಷಾರಾಮಿ ವಸ್ತು ಮಾರಾಟಗಾರರಿಗೆ ಹೇರಳ ಧನಲಾಭವಾಗುವುದು. ಆಡಿಟ್ ಹಾಗೂ ಸನ್ನದುದಾರರಿಗೆ ಬೇಡಿಕೆ ಹಾಗೂ ಆದಾಯ ಹೆಚ್ಚಾಗಲಿದೆ. ಸ್ಥಿರಾಸ್ತಿ ವಿಲೇವಾರಿ ಮಾಡುವ ಹವಣಿಕೆಯಲ್ಲಿದ್ದರೆ ಕೊಂಚ ಸಮಯ ಮುಂದೂಡಿ, ಪ್ರಯಾಣ ಸಮಯದಲ್ಲಿ ಕಳ್ಳಕಾಕರಿಂದ ಜಾಗೃತರಾಗಿರಿ. – ಶ್ರೀ ಚಾಮುಂಡೇಶ್ವರಿ ದರ್ಶನ. ಶುಭಸಂಖ್ಯೆ–6.

ಮೈಸೂರು ಮಿತ್ರ ಭಾನುವಾರ 01 ಮೇ 2022

ಮಳೆ ಅವಾಂತರ: ರಂಗನತಿಟ್ಟು ಪಕ್ಷಿಧಾಮ ಮೂರು ದಿನ ಬಂದ್

ಶ್ರೀರಂಗಪಟ್ಟಣ,ಏ.30(ವಿನಯ್ ಕಾರೇಕುರ)– ಪಟ್ಟಣದಲ್ಲಿ ಗುಡುಗು–ಸಿಡಿಲು, ಬಿರುಗಾಳಿ ಸಹಿತ ಶುಕ್ರವಾರ ರಾತ್ರಿ ಸುರಿದ ಭಾರೀ ಮಳೆಗೆ ಶ್ರೀರಂಗಪಟ್ಟಣ ತಾಲೂಕು ತತ್ತರಿಸಿದ್ದು, ವಿಶ್ವ ವಿಖ್ಯಾತ ಪ್ರವಾಸಿ ತಾಣ ರಂಗನತಿಟ್ಟು ಪಕ್ಷಿಧಾಮ ಹಾನಿಗೀಡಾಗಿದ್ದು, ಶನಿವಾರ ಸೇರಿದಂತೆ 3 ದಿನ ಬಂದ್ ಮಾಡಲಾಗಿದೆ.

ಶುಕ್ರವಾರ ಸಂಜೆ 7 ಗಂಟೆ ಸುಮಾರಿಗೆ ಭಾರೀ ಗುಡುಗು, ಸಿಡಿಲು ಆರ್ಭಟದೊಂದಿಗೆ ಬೀಸಿದ ಬಿರುಗಾಳಿಗೆ ಅಕ್ಷರಶಃ ಸಹ ಶ್ರೀರಂಗಪಟ್ಟಣ ತಾಲೂಕು, ಅದರಲ್ಲಿಯೂ ಬೆಳಗೊಳ ಹೋಬಳಿ ತತ್ತರಿಸಿದೆ. ಕೆಲವೆಡೆ ಆಲಿಕಲ್ಲು ಮಳೆ ಸುರಿದಿದೆ.

ಪಕ್ಷಿಧಾಮ 2 ದಿನ ಬಂದ್: ಭಾರೀ ಮಳೆಗೆ ಪ್ರವಾಸಿ ತಾಣ ರಂಗನತಿಟ್ಟು ಪಕ್ಷಿಧಾಮ ಸಂಪೂರ್ಣ ಹಾನಿಗೊಳಗಾಗಿದ್ದು, 20ಕ್ಕೂ ಹೆಚ್ಚು ಬೃಹತ್ ಮರಗಳು ಬುಡ ಸಮೇತ ನೆಲಕ್ಕುರುಳಿವೆ. ನೂರಾರು ಮರಗಳ ರಂಬೆ–ಕೊಂಬೆ ಮುರಿದು ಬಿದ್ದು, ಸಾಕಷ್ಟು ಹಾನಿಯಾಗಿದೆ. ಹೆದ್ದಾರಿಯಿಂದ ಪಕ್ಷಿಧಾಮಕ್ಕೆ ಬರುವ ಹಾದಿಯಲ್ಲೂ ಹತ್ತಾರು ಮರಗಳು ಧರೆಗೆ ಉರುಳಿರುವುದರಿಂದ ತೆರವಿಗೆ 2 ದಿನಗಳ ಕಾಲಾವಕಾಶ ಹಿಡಿಯಲಿದೆ. ಹೀಗಾಗಿ ಅರಣ್ಯ ಇಲಾಖೆ ಸಿಬ್ಬಂದಿ ಶನಿವಾರ ರಸ್ತೆಯಲ್ಲೇ ಪ್ರವಾಸಿಗರನ್ನು ತಡೆದು ಎರಡು ದಿನ ಪಕ್ಷಿಧಾಮ ಬಂದ್ ಮಾಡಲಾಗಿದೆ ಎಂದು ವಾಪಸ್ ಕಳುಹಿಸಿದರು. ಮೇಲಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದು, ಅರಣ್ಯ ಸಿಬ್ಬಂದಿ ಬಿದ್ದ ಮರಗಳ ತೆರವು ಕಾರ್ಯ ಆರಂಭಿಸಿದ್ದಾರೆ.



ಅಲ್ಲದೆ ತಾಲೂಕಿನ ಪಾಲಹಳ್ಳಿ ಗ್ರಾಮ ಸೇರಿದಂತೆ ಹಲವೆಡೆ ಅನೇಕ ಮನೆಗಳು ಕುಸಿತಗೊಂಡು, ಮನೆಗಳ ಶೀಟ್ ಹಾರಿ ಹೋಗಿವೆ. ಮಳೆಗೆ ತಾಲೂಕಿನಲ್ಲಿ ಅಪಾರ ಪ್ರಮಾಣದ ಬೆಳೆ ಹಾನಿಯಾಗಿದ್ದು, ಅಂದಾಜು 25 ಎಕರೆಯಷ್ಟು ಬಾಳೆ–ಕಬ್ಬು, 50 ಎಕರೆಯಷ್ಟು ತೋಟಗಾರಿಕೆ ಬೆಳೆಗಳಾದ ತೆಂಗು, ಅಡಿಕೆ, ಹೆಬ್ಬೇವು ಸೇರಿದಂತೆ ರೈತರ ಹಲವು ಬೆಳೆಗಳು ನೆಲಕ್ಕುರುಳಿ, ರೈತರಿಗೆ ಅಪಾರ ನಷ್ಟವಾಗಿದೆ.

ವಿದ್ಯುತ್ ಸಂಪರ್ಕ ಸ್ಥಗಿತ: ತಾಲೂಕಿನಾದ್ಯಂತ 70 ವಿದ್ಯುತ್ ಕಂಬಗಳು ನೆಲಕ್ಕುರುಳಿದ್ದು, 15ಕ್ಕೂ ಹೆಚ್ಚು ಟ್ರಾನ್ಸ್‌ಫಾರ್ಮರ್‌ಗಳು ಹಾನಿಗೊಳಗಾಗಿವೆ. ಹಲವೆಡೆ ಮರಗಳು ವಿದ್ಯುತ್ ತಂತಿಯ ಮೇಲೆ ಬಿದ್ದಿದ್ದು, ತಡರಾತ್ರಿಯಿಂದಲೇ ಸೆಸ್ಕ್ ಸಿಬ್ಬಂದಿ ನಿರಂತರವಾಗಿ ವಿದ್ಯುತ್ ಸಂಪರ್ಕ ನೀಡಲು ಶ್ರಮಿಸುತ್ತಿದ್ದಾರೆ. ಕೆಲ ಭಾಗಗಳಿಗೆ ಶನಿವಾರ ಸಂಜೆ ವೇಳೆಗೆ ವಿದ್ಯುತ್ ಸಂಪರ್ಕ ನೀಡಿದ್ದು, ಹೆಚ್ಚು ಹಾನಿಗೊಳಗಾಗಿರುವ ಕಡೆ ದುರಸ್ತಿ ಕಾರ್ಯ ಮುಂದುವರೆದಿದೆ.

ಮೈಸೂರಿಗೆ ನೀರು ಪೂರೈಕೆ ಮಾಡುವ ಯಂತ್ರಾಗಾರದ ಮುಂಭಾಗವಿದ್ದ ತೆಂಗಿನ ಮರ ಪಂಪ್‌ಸೆಟ್ ಇದ್ದ ಕಟ್ಟಡದ ಮೇಲೆ ಬಿದ್ದು ಕಟ್ಟಡ ಸಂಪೂರ್ಣ ಜಖಂಗೊಂಡಿದೆ. ಸ್ಥಳೀಯ ಗ್ರಾಪಂ ಸಿಬ್ಬಂದಿ ಹಾನಿಗೊಳಗಾದ ಜಮೀನುಗಳು ಹಾಗೂ ಮನೆಗಳಿಗೆ ಭೇಟಿ ನೀಡಿ ಪರಿಶೀಲಿಸಿ ಮೇಲಾಧಿಕಾರಿಗಳಿಗೆ ವರದಿ ನೀಡುವುದಾಗಿ ತಿಳಿಸಿದ್ದಾರೆ.

ಮಾನವೀಯತೆ ಮೆರೆದ ಜನತೆ: ಆಲಿಕಲ್ಲು ಮಳೆಗೆ ಪಟ್ಟಣದ ಕೆನರಾ ಬ್ಯಾಂಕ್ ಮುಂಭಾಗವಿದ್ದ ಮರದಲ್ಲಿದ್ದ ನೂರಾರು ಗಿಳಿಗಳು ಮೃತಪಟ್ಟಿವೆ. ಬಿರುಗಾಳಿಗೆ ಮರ ಬುಡ ಸಹಿತ ನೆಲಕ್ಕೆ ಉರುಳಿದ್ದು, ಗಿಳಿಗಳು ಮತ್ತು ಮರಿಗಳು ಗೂಡು ಸಹಿತ ನೆಲಕ್ಕೆ ಬಿದ್ದು ಮೃತಪಟ್ಟರೆ, ಉಳಿದವು ಆಲಿಕಲ್ಲುಗಳ ಪೆಟ್ಟು ತಾಳಲಾರದೆ ಸ್ಥಳದಲ್ಲೇ ಅಸುನೀಗಿವೆ. ನೂರಾರು ಗಿಳಿಗಳ ಮೃತಪಟ್ಟಿರುವುದನ್ನು ಕಂಡು ಪಟ್ಟಣದ ಜನತೆ ಮರುಕ ವ್ಯಕ್ತಪಡಿಸಿದರು. ಪಕ್ಷಿ ಪ್ರೇಮಿಗಳು ಗಿಳಿಗಳ ಕಳೇಬರಗಳನ್ನು ಸಾಮೂಹಿಕವಾಗಿ ಅಂತ್ಯಕ್ರಿಯೆ ನಡೆಸಿ ಮಾನವೀಯತೆ ಮೆರೆದಿದ್ದಾರೆ.

> ಕೋವಿಡ್ ಲಾಕ್‌ಡೌನ್ ನಂತರ ಈಗಷ್ಟೇ ಪಕ್ಷಿಧಾಮ ಚೇತರಿಕೆ ಕಂಡಿತ್ತು. ಇದು ಪ್ರವಾಸಿಗರು ಹೆಚ್ಚು ಬರುವ ಕಾಲ. ಮಳೆಹಾನಿಯಿಂದ ಗಾಯದ ಮೇಲೆ ಬರೆ ಎಳೆದಂತಾಗಿದೆ. ದಿನಕ್ಕೆ 3 ರಿಂದ 5 ಲಕ್ಷ ಆದಾಯ ಬರುತ್ತಿದ್ದು, ಮಳೆ ಹಾನಿಯಿಂದ 3 ದಿನವರೆಗೆ 10 ರಿಂದ 15 ಲಕ್ಷ ದವರೆಗೆ ಆದಾಯ ಕುಂಟಿತ ಗೊಳ್ಳಲಿದೆ. ಬಿದ್ದಿರುವ ಮರಗಳ ಬದಲಿಗೆ ಆದಷ್ಟು ಬೇಗ ಮತ್ತೆ ಗಿಡಗಳನ್ನು ನೆಡುವ ಕೆಲಸ ಮಾಡಲಾಗುವುದು.
>
> **–ಸಂತೋಷ್ ಹೂಗಾರ್,** ವಲಯ ಅರಣ್ಯಾಧಿಕಾರಿ.

> ಸಾಕಷ್ಟು ಕಡೆ ಮರಗಳು ವಿದ್ಯುತ್ ತಂತಿಯ ಮೇಲೆ ಬಿದ್ದು ತಂತಿಗಳೆಲ್ಲ ಹಾಳಾಗಿವೆ. ತಡ ರಾತ್ರಿಯಿಂದಲೇ ಇಲಾಖೆ ಸಿಬ್ಬಂದಿ ವಿದ್ಯುತ್ ಮಾರ್ಗ ದುರಸ್ತಿಗೆ ನಿರಂತರವಾಗಿ ಶ್ರಮಿಸಿದ್ದಾರೆ. ಕೆಲ ಭಾಗಗಳಿಗೆ ಶನಿವಾರ ಸಂಜೆ ವೇಳೆಗೆ ವಿದ್ಯುತ್ ಸಂಪರ್ಕ ನೀಡಿದ್ದು, ಹೆಚ್ಚು ಹಾನಿಗೊಳಗಾಗಿರುವ ಕಡೆ ದುರಸ್ತಿ ಕಾರ್ಯ ಚುರುಕುಗೊಳಿಸಿ, ಆದಷ್ಟು ಬೇಗ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು
>
> **–ಮಂಜು ಪ್ರಸಾದ್,** ಕೆಇಬಿ ಎಇಇ

ನಾಗಮಂಗಲದಲ್ಲಿ ಮಳೆಗೆ ಅಪಾರ ಹಾನಿ

ಶಾಸಕ ಸುರೇಶ್ ಗೌಡ ಪರಿಶೀಲನೆ, ನೆರವು



ನಾಗಮಂಗಲ,ಏ.30–ಶುಕ್ರವಾರ ತಾಲೂಕಿನ ವಿವಿಧೆಡೆ ಸುರಿದ ಭಾರೀ ಬಿರುಗಾಳಿ–ಮಳೆಗೆ ಅನೇಕ ಮನೆಗಳ ಮೇಲ್ಛಾವಣಿ ಹಾರಿಹೋಗಿದ್ದು, ತೆಂಗಿನ ಮರಗಳು ಹಾಗೂ ವಿದ್ಯುತ್ ಕಂಬಗಳು ಧರೆಗುರುಳಿದರೆ, ರೈತರ ಬೆಳೆ ನಾಶವಾಗಿ ಸಾಕಷ್ಟು ಹಾನಿಯಾಗಿದೆ.

ತಾಲೂಕಿನ ದೇವಲಾಪುರ ಮತ್ತು ಹೊಣಕೆರೆ ಹೋಬಳಿಯ ಸುತ್ತ ಮುತ್ತ ಸುರಿದ ಬಿರುಗಾಳಿ–ಮಳೆಗೆ ಅನೇಕ ಮನೆಗಳ ಮೇಲ್ಛಾವಣಿ ಹಾರಿಹೋಗಿದೆ. ಸಾಮಕಹಳ್ಳಿಯಲ್ಲಿ ಟೊಮೋಟೊ, ಸೌತೆಕಾಯಿ ಬೆಳೆ ಹಾನಿಗೀಡಾಗಿದೆ. ಹುರುಳಿ ಗಂಗನಹಳ್ಳಿ ಗ್ರಾಮದ ರಾಮಣ್ಣನವರ 2 ಎಕರೆ ಜಮೀನಿನಲ್ಲಿ ಬೆಳೆದಿದ್ದ ಸೌತೆಕಾಯಿ, ಮಲ್ಲೇಗೌಡನಹಳ್ಳಿ ರಾಜು, ಶಾನಿಬೋಗನಹಳ್ಳಿ ಲೋಕೇಶ್ ಅವರು ತಮ್ಮ ಜಮೀನಿನಲ್ಲಿ ಬೆಳೆದಿದ್ದ ದಪ್ಪ ಮೆಣಸಿನಕಾಯಿ ಹಾಗೂ ಗ್ರಾಮದ ವಸಂತ ಅವರು ಬೆಳೆದಿದ್ದ ಬಜ್ಜಿ ಮೆಣಸಿನಕಾಯಿ ಬೆಳೆ ನಷ್ಟವಾಗಿದ್ದು, ತಲೆಯ ಮೇಲೆ ಕೈ ಹೊತ್ತು ಕೂರುವಂತಾಗಿದೆ.

ದೇವಲಾಪುರ ಹೋಬಳಿ ಬಿಂಡೇನಹಳ್ಳಿ ಹಾಗೂ ಹುಲ್ಲೇನಹಳ್ಳಿ 25ಕ್ಕೂ ಮನೆಗಳು ಹಾನಿಗೀಡಾಗಿವೆ. ಬಿಂಡೇನಹಳ್ಳಿ ಗ್ರಾಮದ ಕೆಂಪೇಗೌಡ, ಮಾಯಣ್ಣ, ನಾರಾಯಣ, ಸೀತಾರಾಮು ಅವರ ಮನೆಯ ಶೀಟ್‌ಗಳು ಬಿರುಗಾಳಿಗೆ ಹಾರಿ ಹೋಗಿವೆ. ಹುಲ್ಲೇನಹಳ್ಳಿ ಗ್ರಾಮದ ಶಾಂತಮ್ಮ ಅವರ ಜಮೀನಿನಲ್ಲಿ ಬಾಳೆ ಗಿಡಗಳು ನೆಲಕಚ್ಚಿದ್ದು, 70 ಸಾವಿರ ರೂ.ಗೂ ಹೆಚ್ಚು ನಷ್ಟವಾಗಿರ ಬಹುದು ಎಂದು ಅಂದಾಜಿಸಲಾಗಿದ್ದು, ಅವರದೇ ಆದ ಮಾವಿನ ಫಸಲು ಸಹ ಹಾಳಾಗಿದೆ. ಅದಂಗೆರೆ ಗ್ರಾಮದಲ್ಲೂ ಸಹ ಅನೇಕ ತೆಂಗಿನ ಮರಗಳು ಧರೆಗುರುಳಿರುವೆ.

ಶಾಸಕ ಸುರೇಶ್ ಗೌಡ ಭೇಟಿ: ವಿಷಯ ತಿಳಿಯುತ್ತಿದ್ದಂತೆ ಶಾಸಕ ಸುರೇಶಗೌಡ ಹಾನಿ ಗೊಳಗಾದ ಗ್ರಾಮಗಳಿಗೆ ಭೇಟಿ ನೀಡಿ ಪರಿ ಶೀಲಿಸಿದರಲ್ಲದೆ, ರೈತರಿಗೆ ಸಾಂತ್ವನ ಹೇಳಿ, ಸ್ಥಳದಲ್ಲೇ ಸರ್ಕಾರದಿಂದ ಪರಿಹಾರ ನೀಡಲಾಯಿತು. ಎನ್‌ಡಿಆರ್ ಯೋಜನೆಯಡಿ ದಪ್ಪ ಮೆಣಸಿನಕಾಯಿ ಸೌತೆಕಾಯಿ, ಹುರುಳಿ ಕಾಯಿ ಬೆಳೆಗಳಿಗೆ ಹೆಕ್ಟೇರ್‌ಗೆ 13.500 ರೂ., ಬಹು ವಾರ್ಷಿಕ ತೆಂಗು ಬೆಳೆಗೆ ಒಂದು ಗಿಡಕ್ಕೆ 180 ರೂ.ಗಳಂತೆ ಹಾಗೂ ಮನೆಗಳಿಗೆ ಆಗಿರುವ ಹಾನಿ ಆಧರಿಸಿ ಪರಿಹಾರ ವಿತರಿಸಲಾಯಿತು.

ಈ ಸಂದರ್ಭದಲ್ಲಿ ತೋಟಗಾರಿಕೆ ಇಲಾಖೆ ಶ್ರೀಮತಿ ಶಾಂತ, ಜಿಪಂ ಎಇಇ ಎಂಶಿವಣ್ಣ ಸಹಾಯಕ ಕೃಷಿ ಅಧಿಕಾರಿ ಜಯರಾಮ್, ರಾಜಸ್ವ ನಿರೀಕ್ಷಕ ರಂಗಯ್ಯ, ಮುಖಂಡರಾದ ಅಶೋಕ್, ಕಾಂತರಾಜು ಕೃಷ್ಣೇಗೌಡ, ರಾಜು, ಚಂದ್ರು, ಗ್ರಾಪಂ ಸದಸ್ಯ ರಾಘವೇಂದ್ರ ಮತ್ತಿತರಿದ್ದರು.

ಗ್ರಾಪಂ ಉಪ ಚುನಾವಣೆಗೆ ವೇಳಾಪಟ್ಟಿ ಪ್ರಕಟ

ಮಂಡ್ಯ,ಏ.30(ಮೋಹನ್‌ರಾಜ್)–ಜಿಲ್ಲೆಯ ಗ್ರಾಮ ಪಂಚಾಯಿತಿಗಳಲ್ಲಿ ವಿವಿಧ ಕಾರಣಗಳಿಂದ ತೆರವಾಗಿರುವ ಸದಸ್ಯ ಸ್ಥಾನಗಳಿಗೆ ಉಪ ಚುನಾವಣೆ ನಡೆಸಲು ವೇಳಪಟ್ಟಿ ಪ್ರಕಟವಾಗಿದೆ.

ಜಿಲ್ಲಾಧಿಕಾರಿ ಎಸ್.ಅಶ್ವಥಿ ಪ್ರಕಟಣೆ ಹೊರಡಿಸಿದ್ದು, ಮೇ 5 ರಿಂದ ಮೇ 10 ರವರೆಗೆ ನಾಮಪತ್ರ ಸಲ್ಲಿಸಬಹುದು. ನಾಮಪತ್ರಗಳ ಪರಿಶೀಲನೆ ಮೇ 11, ಉಮೇದುವಾರಿಕೆ ಹಿಂಪಡೆಯಲು ಮೇ 13 ಕೊನೆಯ ದಿನ. ಮತದಾನ ಮೇ 20ರಂದು ಬೆಳಗ್ಗೆ 7 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ನಡೆಯಲಿದೆ. ಮತ ಎಣಿಕೆ ತಾಲೂಕು ಕೇಂದ್ರಗಳಲ್ಲಿ ಮೇ 22 ರಂದು ಬೆಳಗ್ಗೆ 8 ಗಂಟೆಯಿಂದ ನಡೆಯಲಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಶ್ರೀಕ್ಷೇತ್ರಗಳು ದೋಷಗ್ರಹಣ ನಿವಾರಣಾ ಕೇಂದ್ರಗಳಾಗಲಿ

ಕನಕಗಿರಿ ಅತಿಶಯ ಮಹೋತ್ಸವದಲ್ಲಿ ಡಾ.ವೀರೇಂದ್ರ ಹೆಗ್ಗಡೆ ಆಶಯ

ಚಾಮರಾಜನಗರ, ಏ.30(ಎಸ್‌ಎಸ್)– ಶ್ರೀಕ್ಷೇತ್ರಗಳು ದೋಷಗ್ರಹಣ ಹಾಗೂ ಸಂಕಷ್ಟಗಳನ್ನು ನಿವಾರಣಾ ಮಾಡುವ ಕೇಂದ್ರಗಳಾಗಬೇಕು ಎಂದು ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಡಾ.ವೀರೇಂದ್ರ ಹೆಗ್ಗಡೆ ಆಶಯ ವ್ಯಕ್ತಪಡಿಸಿದರು.

ತಾಲೂಕಿನ ಮಲೆಯೂರು ಗ್ರಾಮದ ಬಳಿ ಇರುವ ಶ್ರೀಕ್ಷೇತ್ರ ಕನಕಗಿರಿಯಲ್ಲಿ ನಡೆಯುತ್ತಿರುವ ಅತಿಶಯ ಮಹೋತ್ಸವ–2022ರ ಪ್ರಯುಕ್ತ ಶನಿವಾರ ನಡೆದ ಧಾರ್ಮಿಕ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.



ಅನೇಕ ಶ್ರೀಕ್ಷೇತ್ರಗಳಲ್ಲಿ ದೋಷ ನಿವಾರಣೆ ಮಾಡಲಾಗುತ್ತಿದೆ. ಧರ್ಮಸ್ಥಳಕ್ಕೂ ಸಹ ದೋಷ ನಿವಾರಣೆಗಾಗಿ ಜನರು ಆಗಮಿಸುತ್ತಿದ್ದಾರೆ. ದೋಷಗಳನ್ನು ನಿವಾರಿಸುವ ಸ್ಥಳಗಳಿಗೆ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಾರೆ. ಪುಣ್ಯ ದಾನ ಮಾಡುತ್ತೇನೆ ಎಂದರೆ, ಅದನ್ನು ಪಡೆಯಲು ಬಹಳಷ್ಟು ಜನರು ಮುಂದೆ ಬರುತ್ತಾರೆ. ಆದರೆ, ದೋಷ ಕೊಡುತ್ತೇನೆ ಎಂದರೆ ಅದನ್ನು ಪಡೆಯಲು ಯಾರೂ ಸಹ ಮುಂದೆ ಬರುವುದಿಲ್ಲ. ಇದಕ್ಕಾಗಿ ಶ್ರೀಕ್ಷೇತ್ರಗಳು ಸಂಕಷ್ಟ ಹಾಗೂ ದೋಷ ಗ್ರಹಣ ನಿವಾರಣೆ ಮಾಡುವ ಸ್ಥಳಗಳಾಗಬೇಕು ಎಂದು ಹೇಳಿದರು.

ಜನರು ಪಿತೃದೋಷ, ಶಾಪ ವಿಮೋಚನೆ ಸೇರಿದಂತೆ ಇತರ ಅನೇಕ ವಿಮೋಚನೆಗಳನ್ನು ಪರಿಹರಿಸಿಕೊಳ್ಳಲು ಶ್ರೀಕ್ಷೇತ್ರಗಳಿಗೆ ಭೇಟಿ ನೀಡುತ್ತಾರೆ. ಜಾತಿ, ಮತ ಭೇದವಿಲ್ಲದೆ ಜನರು ಶ್ರೀ ಕ್ಷೇತ್ರಗಳಿಗೆ ತೆರಳುತ್ತಾರೆ. ಈ ಕನಕಗಿರಿ ಶ್ರೀಕ್ಷೇತ್ರವೂ ಸಹ ಎಲ್ಲರಿಗೂ ಒಳಿತು ಮಾಡುವ ಕ್ಷೇತ್ರವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ ಮಾತನಾಡಿ, ಜೈನ ಧರ್ಮಕ್ಕೆ ತನ್ನದೇ ಆದ ಇತಿಹಾಸ, ಪರಂಪರೆ ಇದೆ. ದೇಶದಲ್ಲಿರುವ 16 ಸಾವಿರ ಗೋ ಶಾಲೆಗಳಲ್ಲಿ 12 ಸಾವಿರ ಗೋ ಶಾಲೆಗಳನ್ನು ನೋಡಿಕೊಳ್ಳುವುದರಲ್ಲಿ ಜೈನ ಸಮಾಜದವರು ಪ್ರಮುಖ ಸ್ಥಾನದಲ್ಲಿದ್ದಾರೆ. ಜೈನ ಸಮಾಜ ಸಂಘರ್ಷ ಬಯಸುವುದಿಲ್ಲ. ಅದು ಶಾಂತಿಯ ಧರ್ಮವಾಗಿದೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ಮಾತನಾಡಿ, ಕನಕಗಿರಿ ಕ್ಷೇತ್ರದ ಶ್ರೀಭುವನ ಕೀರ್ತಿ ಭಟ್ಟಾರಕ ಸ್ವಾಮೀಜಿ ಅವರು 25 ವರ್ಷದ ಅವಧಿಯಲ್ಲಿ 100 ವರ್ಷದ ಸಾಧನೆ ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ಈ ಶ್ರೀಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುವುದಾಗಿ ಭರವಸೆ ನೀಡಿದರು.

ಕನಕಗಿರಿ ಶ್ರೀಕ್ಷೇತ್ರದ ಶ್ರೀಭುವನಕೀರ್ತಿ ಭಟ್ಟಾರಕ ಸ್ವಾಮೀಜಿ ಮಾತನಾಡಿ, ಶ್ರೀಕ್ಷೇತ್ರದಲ್ಲಿ ಇನ್ನೂ ಅನೇಕ ಕಾರ್ಯಗಳಾಗಬೇಕಾಗಿದೆ. ಇದಕ್ಕಾಗಿ ಎಲ್ಲರೂ ತಮ್ಮೊಂದಿಗೆ ಕೈ ಜೋಡಿಸಬೇಕು ಎಂದು ಮನವಿ ಮಾಡಿದರು. ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಸಿ.ಎಸ್. ನಿರಂಜನ್‌ಕುಮಾರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಅಮೋಘ ಕೀರ್ತಿ ಮಹಾರಾಜರು, ಅಮರಕೀರ್ತಿ ಮಹಾರಾಜರು ಸಾನ್ನಿಧ್ಯ ವಹಿಸಿದ್ದರು. ಪ್ರವಾಸೋದ್ಯಮ ಸಚಿವ ಆನಂದಸಿಂಗ್, ಶಾಸಕ ಸಿ.ಮಹೇಶ್, ಮಾಜಿ ಸಚಿವ ಸಿ.ಹೆಚ್.ವಿಜಯ್‌ಶಂಕರ್, ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ, ಗ್ರಾಪಂ ಅಧ್ಯಕ್ಷ ಪುಟ್ಟಸ್ವಾಮಿ, ಬಿಜೆಪಿ ಮುಖಂಡ ವೆಂಕಟೇಶ್, ಜಿಲ್ಲಾಧಿಕಾರಿ ಚಾರುಲತಾ ಸೋಮಲ್, ಹೆಚ್ಚುವರಿ ಜಿಲ್ಲಾಧಿಕಾರಿ ಕ್ಯಾತಾಯಿನಿ ದೇವಿ, ಜಿಪಂ ಸಿಇಓ ಡಾ.ಕೆ.ಎಂ.ಗಾಯತ್ರಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಂದರ್‌ರಾಜ್ ಇತರರು ಹಾಜರಿದ್ದರು.

ಆನೆದಂತ, ಚಿಪ್ಪುಹಂದಿಯ ಚಿಪ್ಪು ಸಾಗಾಣಿಕೆ: ಐವರ ಬಂಧನ

ಕೊಳ್ಳೇಗಾಲ,ಏ.30(ನಾಗೇಂದ್ರಸ್ವಾಮಿ)– ಕೊಳ್ಳೇಗಾಲ ಸಿಐಡಿ ಅರಣ್ಯ ಸಂಚಾರಿ ದಳದ ಪೊಲೀಸರು ಶನಿವಾರ ಪಟ್ಟಣದಲ್ಲಿ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಆನೆದಂತ, ಚಿಪ್ಪುಹಂದಿಯ ಚಿಪ್ಪು ಸಾಗಿಸುತ್ತಿದ್ದ ಐವರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಆನೆದಂತ ಸಾಗಿಸುತ್ತಿದ್ದ ಇಬ್ಬರ ಸೆರೆ: ಪಟ್ಟಣದ ಕುರುಬನಕಟ್ಟೆ ರಸ್ತೆಯ ಬಳಿ ಶನಿವಾರ ಆನೆದಂತ ಸಾಗಿಸುತ್ತಿದ್ದ ಇಬ್ಬರನ್ನು ಬಂಧಿಸಿ, ಕೃತ್ಯಕ್ಕೆ ಬಳಸಿದ ಬೈಕ್ ವಶಪಡಿಸಿಕೊಂಡಿದ್ದಾರೆ. ಯಳಂದೂರು ತಾಲೂಕಿನ ಟಿ.ಹೊಸೂರು ಗ್ರಾಮದವರಾದ ಪವನ್‌ಕುಮಾರ್, ನಂಜುಂಡ ಬಂಧಿತರು. ಇವರು ಬೈಕ್‌ನಲ್ಲಿ 860 ಗ್ರಾಂ ತೂಕದ ಆನೆ ದಂತವನ್ನು ಸಾಗಿಸುತ್ತಿದ್ದಾಗ ಪಿಎಸ್‌ಐ ಆನಂದಕುಮಾರ್ ನೇತೃತ್ವದ ತಂಡ ಆರೋಪಿಗಳನ್ನು ಬಂಧಿಸಿ, ಆನೆದಂತ, 2 ಮೊಬೈಲ್ ಹಾಗೂ ಬೈಕ್ ವಶಪಡಿಸಿಕೊಂಡಿದ್ದಾರೆ.

ಚಿಪ್ಪು ಹಂದಿಯ ಚಿಪ್ಪು ಸಾಗಿಸುತ್ತಿದ್ದ ಮೂವರ ಸೆರೆ: ಪಟ್ಟಣದ ಗೌಡಳ್ಳಿ ಮುಖ್ಯರಸ್ತೆ ಬಳಿ ಚಿಪ್ಪು ಹಂದಿಯ ಚಿಪ್ಪುಗಳನ್ನು ಸಾಗಿಸುತ್ತಿದ್ದ ಇಬ್ಬರನ್ನು ಬಂಧಿಸಲಾಗಿದೆ. ಬಿಳಿಗಿರಂಗನಬೆಟ್ಟದ ಹೊಸಪೋಡಿನ ಖೇತ(26), ದೊಡ್ಡಸಂಪಿಗೆ ಗ್ರಾಮದ ನಾಗೇಶ್(35), ಮಾಂಬಳ್ಳಿಯ ಚೇತನ್ ಬಂಧಿತರು. ಇವರು ಬಿಳಿಗಿರಿರಂಗನಬೆಟ್ಟ ವನ್ಯಜೀವಿ ವಲಯದಲ್ಲಿ ಚಿಪ್ಪು ಹಂದಿಗಳನ್ನು ಬೇಟೆಯಾಡಿ, ಅದರ ಮಾಂಸ ತಿಂದು ಹಂದಿಯ ಚಿಪ್ಪುಗಳನ್ನು ಬೈಕ್‌ನಲ್ಲಿ ಸಾಗಿಸುತ್ತಿದ್ದಾಗ ಸಿಐಡಿ ಅರಣ್ಯ ಸಂಚಾರಿ ದಳದ ಪಿಎಸ್‌ಐ ಹೆಚ್.ಆನಂದ್‌ಕುಮಾರ್ ನೇತೃತ್ವದ ತಂಡ ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಿದ್ದು, 350 ಚಿಪ್ಪುಗಳು, 3 ಮೊಬೈಲ್, 2 ಬೈಕ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಸಂಬಂಧ ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ. ಈ ಎರಡೂ ಕಾರ್ಯಾಚರಣೆಯಲ್ಲಿ ಮುಖ್ಯಪೇದೆಗಳಾದ ಬಸವರಾಜು, ರಾಮಚಂದ್ರ, ಸ್ವಾಮಿ, ತಖೀಉಲ್ಲಾ, ಶಂಕರ್, ಚಾಲಕ ಪ್ರಭಾಕರ್ ಪಾಲ್ಗೊಂಡಿದ್ದರು.

ಕಾರಿಗೆ ಲಾರಿ ಡಿಕ್ಕಿ: ಯುವಕ ಸಾವು

ಬದನಗುಪ್ಪೆ,ಏ.30(ಮಲ್ಲಣ್ಣ)–ಕಾರು ಹಾಗೂ ಲಾರಿ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ, ಕಾರು ಚಾಲನೆ ಮಾಡುತ್ತಿದ್ದ ಯುವಕ ಸ್ಥಳದಲ್ಲಿಯೇ ಸಾವನ್ನಪ್ಪಿರುವ ಘಟನೆ ಚಾಮ ರಾಜನಗರ ತಾಲೂಕಿನ ಬದನಗುಪ್ಪೆ ಗ್ರಾಮದಲ್ಲಿ ಶುಕ್ರವಾರ ಮಧ್ಯರಾತ್ರಿ ನಡೆದಿದೆ.



ಚಾಮರಾಜನಗರ ತಾಲೂಕಿನ ಆಲೂರು ಗ್ರಾಮದ ನಿವಾಸಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕೃಷ್ಣಮೂರ್ತಿ ಅವರ ಪುತ್ರ ಭರತ್ ಉರುಫ್ ಗುಂಡ(22) ಮೃತಪಟ್ಟ ಯುವಕ.

ಭರತ್ ಕಾರಿನಲ್ಲಿ ಚಾಮರಾಜನಗರದಿಂದ ನಂಜನಗೂಡು ಕಡೆಗೆ ತೆರಳುತ್ತಿದ್ದ. ಈ ವೇಳೆ ಬದನಗುಪ್ಪೆ ಗ್ರಾಮದ ಸರ್ಕಾರಿ ಶಾಲೆ ಮುಂಭಾಗ ಎದುರಿನಿಂದ ಬಂದ ಲಾರಿ ಡಿಕ್ಕಿ ಹೊಡೆದಿದೆ. ಪರಿಣಾಮ ಭರತ್ ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾನೆ ಎಂದು ಸಂಚಾರ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ನಂದೀಶ್‌ಕುಮಾರ್ ತಿಳಿಸಿದರು.

ಪಟ್ಟಣ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ತಿಮ್ಮರಾಜು ಹಾಗೂ ನಂದೀಶ್‌ಕುಮಾರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿರು. ಈ ಸಂಬಂಧ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪದವೀಧರ ಚುನಾವಣೆ: ಜೆಡಿಎಸ್ ಅಭ್ಯರ್ಥಿ ರಾಮು ಬೆಂಬಲಿಸಿ

ಚಾಮರಾಜನಗರ, ಏ.30– ದಕ್ಷಿಣ ಪದವೀಧರ ಕ್ಷೇತ್ರದ ವಿಧಾನಪರಿಷತ್ ಚುನಾವಣೆ–2022ರ ಹಿನ್ನೆಲೆಯಲ್ಲಿ ನಗರದ ಸತ್ಯಮಂಗಲ ಮುಖ್ಯರಸ್ತೆಯಲ್ಲಿರುವ ರತ್ನೇಶ್ವರಿ ರೆಸಿಡೆನ್ಸಿ ಸಭಾಂಗಣದಲ್ಲಿ ಶನಿವಾರ ಜೆಡಿಎಸ್‌ನಿಂದ ಪದವೀಧರರು, ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರ ಸಭೆ ನಡೆಯಿತು.

ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದ ಪಕ್ಷದ ಮುಖಂಡರು, ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮುರವರಿಗೆ ಪ್ರಥಮ ಪ್ರಾಶಸ್ತ್ಯದ ಮತ ನೀಡಿ ಜಯಶೀಲರನ್ನಾಗಿಸಬೇಕು ಎಂದು ಒಕ್ಕೊರಲಿನಿಂದ ಮನವಿ ಮಾಡಿದರು.



ಅಭ್ಯರ್ಥಿ ಹೆಚ್.ಕೆ.ರಾಮು ಮಾತನಾಡಿ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ನನ್ನ ಮೇಲೆ ವಿಶ್ವಾಸ ಇಟ್ಟು, ಚುನಾವಣೆ ಐದೂವರೆ ತಿಂಗಳಿಗೂ ಮುಂಚೆ ಅಭ್ಯರ್ಥಿಯನ್ನಾಗಿ ಘೋಷಿಸಿದ್ದು, ಪ್ರಥಮ ಪ್ರಾಶಸ್ತ್ಯದ ಮತಗಳಲ್ಲಿ ಗೆದ್ದು, ಈ ಕ್ಷೇತ್ರವನ್ನು ಜೆಡಿಎಸ್ ಭದ್ರಕೋಟೆಯನ್ನಾಗಿ ಮಾಡಬೇಕೆಂದು ನಿರ್ಧರಿಸಿ ಸಂಘಟನೆಯಲ್ಲಿ ತೊಡಗಿದ್ದು, ಪಧವೀಧರರು ನನಗೆ ಪ್ರಥಮ ಪ್ರಾಶಸ್ತ್ಯದ ಮತ ನೀಡಿ ಜಯಶೀಲನನ್ನಾಗಿಸುವ ಮೂಲಕ ತಮ್ಮ ಸೇವೆಗೆ ಅವಕಾಶ ಕಲ್ಪಿಸಿಕೊಡಬೇಕು ಎಂದು ಮನವಿ ಮಾಡಿದರು. ಸಭೆಯಲ್ಲಿ ಜೆಡಿಎಸ್‌ನ ಮುಖಂಡರು ಕಾರ್ಯಕರ್ತರು ಭಾಗವಹಿಸಿದ್ದರು.

ನಿಧನ

ಹುಲುಗಾದ್ರಾಚಾರ್



ಗುಂಡ್ಲುಪೇಟೆ, ಏ.30– ಪಟ್ಟಣದ ಟಿ.ಬಿ.ಬಡಾವಣೆ ನಿವಾಸಿ ಹುಲುಗಾದ್ರಾಚಾರ್ (75) ಶನಿವಾರ ನಿಧನರಾದರು. ಮೃತರಿಗೆ ಪತ್ನಿ, ಇಬ್ಬರು ಪುತ್ರರು ಮತ್ತು ಇಬ್ಬರು ಪುತ್ರಿಯರಿದ್ದಾರೆ. ಅಂತ್ಯಕ್ರಿಯೆಯು ಪಟ್ಟಣದ ರುದ್ರಭೂಮಿಯಲ್ಲಿ ನೆರವೇರಿತು.

ಕೊಡವ ಭಾಷಿಕ ಸಮುದಾಯಗಳ ಕೂಟದ ಮಹಾಸಭೆ

18 ಕೊಡವ ಭಾಷಿಕ ಜನಾಂಗ ಒಗ್ಗಟ್ಟು ಪ್ರದರ್ಶಿಸಬೇಕು

ಮಡಿಕೇರಿ,ಏ.30– ಕೊಡವ ಭಾಷೆ, ಸಾಹಿತ್ಯ, ಸಂಸ್ಕೃತಿ, ಸಂಪ್ರದಾಯ, ಪದ್ಧತಿ, ಪರಂಪರೆಯನ್ನು ಮೈಗೂಡಿಸಿಕೊಂಡು ಜವಾಬ್ದಾರಿಯುತವಾಗಿ ಉಳಿಸಿ, ಬೆಳೆಸಿಕೊಂಡು ಬರುತ್ತಿರುವ 18 ಕೊಡವ ಭಾಷಿಕ ಜನಾಂಗದವರು ಮೂಲಭೂತ ಸೌಕರ್ಯಗಳನ್ನು ಪಡೆಯಲು ಒಗ್ಗಟ್ಟಿನ ಹೋರಾಟ ನಡೆಸುವ ಅನಿವಾರ್ಯತೆಯಿದೆ ಎಂದು ಕೊಡವ ಭಾಷಿಕ ಸಮುದಾಯಗಳ ಕೂಟದ ಅಧ್ಯಕ್ಷ ಡಾ. ಮೇಚಿರ ಸುಭಾಷ್ ನಾಣಯ್ಯ ತಿಳಿಸಿದ್ದಾರೆ.

ವಿರಾಜಪೇಟೆ ಗಣಪತಿ ಆರ್ಕೆಡ್ ಕಟ್ಟಡದ ಸಭಾಂಗಣದಲ್ಲಿ ನಡೆದ ಕೂಟದ 2021–22ನೇ ಸಾಲಿನ ಮಹಾಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಡಾ.ಮೇಚಿರ ಸುಭಾಷ್ ನಾಣಯ್ಯ



ಇಂದು ಕೊಡವ ಭಾಷೆ, ಸಂಸ್ಕೃತಿ, ಪದ್ಧತಿ, ಆಚಾರ, ವಿಚಾರ ಅಳಿಯದೆ ಉಳಿದಿರುವುದಕ್ಕೆ 18 ಭಾಷಿಕ ಜನಾಂಗದವರ ಶ್ರಮ, ಕೊಡುಗೆ ಅಪಾರವಾಗಿದೆ. ಬೆಲೆ ಕಟ್ಟಲು ಸಾಧ್ಯವಿಲ್ಲದಷ್ಟರ ಮಟ್ಟಿಗೆ, ಎಲೆ ಮರೆಯ ಕಾಯಿಯಂತೆ ತಮ್ಮ ಬದುಕಿನಲ್ಲಿ ಕಸುಬಿನೊಂದಿಗೆ ಸಂಸ್ಕೃತಿಯನ್ನು ಬೆಳೆಸುವಲ್ಲಿ ಸಫಲರಾಗಿದ್ದಾರೆ. ಆದರೂ, ಜನಾಂಗದ ಬಡಕುಟುಂಬಗಳು ಮೂಲಭೂತ ಸೌಕರ್ಯಗಳಿಲ್ಲದೆ ಬಳಲುತ್ತಿರುವುದು ವಿಪರ್ಯಾಸ ಎಂದು ಬೇಸರ ವ್ಯಕ್ತಪಡಿಸಿದರು.

ನಮ್ಮ ಮೂಲಭೂತ ಹಕ್ಕುಗಳನ್ನು ಪಡೆದುಕೊಳ್ಳಲು ಬೀದಿಗಿಳಿದು ಹೋರಾಟ ನಡೆಸಬೇಕಾದ ಪರಿಸ್ಥಿತಿ ಉದ್ಭವಿಸಿದ್ದು, ಜನಾಂಗ ಬಾಂಧವರೆಲ್ಲರು ಒಗ್ಗಟ್ಟಿನಿಂದ ಸಹಕಾರ ನೀಡಬೇಕೆಂದು ಮನವಿ ಮಾಡಿದರು.

ಕೂಟದ ಉಪಾಧ್ಯಕ್ಷ ವಕೀಲ ಹಾಗೂ ಕೊಡಗು ಹೆಗ್ಗಡೆ ಸಮಾಜದ ಅಧ್ಯಕ್ಷ ಪಡಿಞರಂಡ ಜಿ.ಅಯ್ಯಪ್ಪ ಮಾತನಾಡಿ, ಕಳೆದ ಹಲವು ವರ್ಷಗಳಿಂದ ಸರ್ಕಾರ ಹಾಗೂ ಜನಪ್ರತಿನಿಧಿಗಳು ಕೊಡವ ಭಾಷಿಕ ಜನಾಂಗದವರನ್ನು ತಾತ್ಸಾರ ಮನೋಭಾವನೆಯಿಂದ ಕಾಣುತ್ತಿದ್ದಾರೆ ಎಂದು ಆರೋಪಿಸಿದರು. ತೀರ ಹಿಂದುಳಿದ ಮೂಲ ನಿವಾಸಿ ಕೊಡವ ಭಾಷಿಕ ಜನಾಂಗದವರ ಅಭ್ಯುದಯಕ್ಕಾಗಿ ಸರ್ಕಾರ ಕನಿಷ್ಠ ರೂ.100 ಕೋಟಿ ಅನುದಾನ ಬಿಡುಗಡೆ ಮಾಡಬೇಕು ಮತ್ತು ಅಭಿವೃದ್ಧಿ ನಿಗಮ ಸ್ಥಾಪಿಸಬೇಕು ಎಂದು ಒತ್ತಾಯಿಸಿದ ಅವರು ಬೇಡಿಕೆಗಳ ಕುರಿತು ಸರ್ಕಾರದ ಗಮನ ಸೆಳೆಯಬೇಕೆಂದು ಹೇಳಿದರು.

ತಾಪಂ ಮಾಜಿ ಸದಸ್ಯೆ ನರಿಯಡಮ್ಮಂಡ ಉಮಾಪ್ರಭು ಹಾಗೂ ವಿರಾಜಪೇಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಹಾಗೂ ಕೊಡವ ಭಾಷಾ ಎಂ.ಎ.ತರಗತಿ ಪ್ರಾಧ್ಯಾಪಕರಾದ ಅಣ್ಣಾಳಪ್ಪಂಡ ವಾಣಿ ಧರ್ಮಶೀಲ ಮಾತನಾಡಿದರು.


18 ಭಾಷಿಕ ಜನಾಂಗದ ಪ್ರಮುಖರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿ, ಇಂದು ಭಾಷಿಕ ಜನಾಂಗದವರನ್ನು ಕೇವಲ ಓಟು ಬ್ಯಾಂಕಿಗಾಗಿ ಬಳಸಿಕೊಳ್ಳುವ ಪ್ರವೃತ್ತಿ ಕೆಲವು ರಾಜಕೀಯ ಪಕ್ಷಗಳಲ್ಲಿ ಕಂಡುಬರುತ್ತಿದ್ದು, ನಾವೆಲ್ಲರೂ ನಮ್ಮತನವನ್ನು ತೋರ್ಪಡಿಸಬೇಕಾಗಿದೆ. ಜನಾಂಗದ ಸ್ವಾಭಿಮಾನಕ್ಕೆ ಧಕ್ಕೆ ಬರುವಂತಹ ಯಾವುದೇ ಸಮಸ್ಯೆ ಎದುರಾದರೂ ಕೂಟದ ಮೂಲಕ ಹೋರಾಟಕ್ಕೆ ಮುಂದಾಗಬೇಕು. ಪ್ರತಿಷ್ಠೆಗಳನ್ನು ಬದಿಗೊತ್ತಿ ಎಲ್ಲರೂ ಒಂದಾಗಿ ಬೀದಿಗಿಳಿದು ಹೋರಾಟ ಮಾಡಲು ಸಿದ್ಧ ಇರುವುದಾಗಿ ಬೆಂಬಲ ವ್ಯಕ್ತಪಡಿಸಿದರು.

ಗೌರವ ಕಾರ್ಯದರ್ಶಿ ಕೂಡಂಡ ಸಾಬ ಸುಬ್ರಮಣಿ 3 ವರ್ಷಗಳ ನಡಾವಳಿ ವರದಿಯನ್ನು ಓದಿದರು. ನಡಾವಳಿ ಚರ್ಚೆಯಿಲ್ಲದೆ ಅನುಮೋದಿಸಲ್ಪಟ್ಟಿತು. ಮೃತಪಟ್ಟ ಸದಸ್ಯರಿಗೆ ಸಭೆಯಲ್ಲಿ ಸಂತಾಪ ಸೂಚಿಸಲಾಯಿತು.

ಇಂದು ಪೊರುಕೊಂಡ ಕ್ರಿಕೆಟ್ ನಮ್ಮೆಗೆ ಚಾಲನೆ

ಗೋಣಿಕೊಪ್ಪ,ಏ.30– ಅಮ್ಮತ್ತಿ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ ಪೊರುಕೊಂಡ ಕ್ರಿಕೆಟ್ ನಮ್ಮೆಗೆ ಭಾನುವಾರ ಚಾಲನೆ ನೀಡಲಾಗುತ್ತದೆ. ಮೇ 18 ರವರೆಗೆ ನಡೆಯಲಿರುವ ನಮ್ಮೆಯಲ್ಲಿ 192 ತಂಡಗಳು ಪೈಪೋಟಿಯಲ್ಲಿವೆ.

20ನೇ ವರ್ಷದ ಕೊಡವ ಕೌಟುಂಬಿಕ ಕ್ರಿಕೆಟ್ ನಮ್ಮೆ ಕೊಡವ ಕ್ರಿಕೆಟ್ ಅಕಾಡೆಮಿ ಸಹಯೋಗದಲ್ಲಿ ನಡೆಯುತ್ತಿದ್ದು, ಅಮ್ಮತ್ತಿ ಪ್ರೌಢ ಮತ್ತು ಪ್ರಾಥಮಿಕ ಶಾಲಾ ಮೈದಾನದಲ್ಲಿ ಪ್ರತ್ಯೇಕವಾಗಿ ಪಂದ್ಯಗಳು ನಡೆಯಲಿವೆ. ಬೆಳಗ್ಗೆ 9.30 ಗಂಟೆಗೆ ಸೌತ್ ಕೂರ್ಗ್ ಮತ್ತು ನಾರ್ತ್ ಕೂರ್ಗ್ ತಂಡಗಳ ನಡುವೆ ಲೆದರ್‌ಬಾಲ್ ಕ್ರಿಕೆಟ್ ಪ್ರದರ್ಶನ ಪಂದ್ಯ ಆಯೋಜಿಸಲಾಗಿದೆ. ನಂತರ, ಟೂರ್ನಿಯ 4 ಪಂದ್ಯಗಳು ನಡೆಯುತ್ತವೆ.



ಪೊರುಕೊಂಡ ನಮ್ಮೆ ಲೋಗೋ

ಭಾನುವಾರ ಬೆಳಗ್ಗೆ 10.30 ಗಂಟೆಗೆ ಕರ್ನಾಟಕ ವಿದ್ಯುತ್ ನಿಗಮ ಮಹಾಪ್ರಬಂಧಕ ಹಾಗೂ ಪದ ನಿಮಿತ್ತ ಹೆಚ್ಚುವರಿ ಕಾರ್ಯದರ್ಶಿ ತೀತೀರ ರೋಶನ್ ಅಪ್ಪಚ್ಚು ನಮ್ಮೆಯನ್ನು ಉದ್ಘಾಟಿಸಲಿದ್ದಾರೆ. ಕೊಡವ ಕ್ರಿಕೆಟ್ ಅಕಾಡೆಮಿ ಕೀತಿಯಂಡ ಕಾರ್ಸನ್ ಕಾರ್ಯಪ್ಪ ಧ್ವಜಾರೋಹಣ ನೆರವೇರಿಸಲಿದ್ದಾರೆ.

ಅತಿಥಿಯಾಗಿ ವಿಧಾನ ಪರಿಷತ್ ಸದಸ್ಯೆ ಶಾಂತೆಯಂಡ ವೀಣಾ ಅಚ್ಚಯ್ಯ, ಶಾಸಕ ಕೆ.ಜಿ. ಬೋಪಯ್ಯ, ಎಂಎಲ್‌ಸಿ ಸುಜಾ ಕುಶಾಲಪ್ಪ, ಪೊಲೀಸ್ ವರಿಷ್ಠಾಧಿಕಾರಿ ಮಲಚೀರ ಎ ಅಯ್ಯಪ್ಪ, ಉದ್ಯಮಿ ಚೇರಂಡ ಕಿಶನ್ ಮಾದಪ್ಪ, ಕಾರ್ಮಾಡು ಗ್ರಾಪಂ ಸದಸ್ಯ ಚೋವಂಡ ನಾಚಪ್ಪ, ಕೊಡಗು ಫುಟ್ಬಾಲ್ ಅಸೋಸಿಯೇಷನ್ ಅಧ್ಯಕ್ಷ ನೆಲ್ಲಮಕ್ಕಡ ಮೋಹನ್ ಅಯ್ಯಪ್ಪ, ಅಮ್ಮತ್ತಿ ಪ್ರೌಢಶಾಲೆ ಆಡಳಿತ ಮಂಡಳಿ ಅಧ್ಯಕ್ಷ ಕರ್ನಲ್ ಕಂಡ್ರತಂಡ ಸುಬ್ಬಯ್ಯ, ಮುಖ್ಯಶಿಕ್ಷಕ ದೊಡ್ಡ ತಮ್ಮಯ್ಯ, ಟೂರ್ನಿ ನಿರ್ದೇಶಕ ನೆಲ್ಲಚಂಡ ಯತೀಶ್ ನಾಚಪ್ಪ, ಪೊರುಕೊಂಡ ಕುಟುಂಬದ ಪಟ್ಟೆದಾರ ಪಿ. ಎಂ. ಜೋಯಪ್ಪ, ಅಧ್ಯಕ್ಷ ಪಿ.ಯು. ಬೋಪಣ್ಣ ಪಾಲ್ಗೊಳ್ಳಲಿದ್ದಾರೆ.

ಇಂದಿನ ಪಂದ್ಯಗಳು

ಮಧ್ಯಾಹ್ನ 1.30 ಗಂಟೆಗೆ
ಚೋಡುಮಾಡ–ಬೇರೇರ
ಮಧ್ಯಾಹ್ನ 2.30 ಗಂಟೆಗೆ
ಅಮ್ಮಣಕುಟ್ಟಂಡ–ಮುಂಡ್ಯೋಳಂಡ
ಮಧ್ಯಾಹ್ನ 3.30 ಗಂಟೆಗೆ
ಅಮ್ಮಂಡ – ಕಾಂಡೇರ

ವಿ.ಪೇಟೆ ಡಿವೈಎಸ್ಪಿ ನಿರಂಜನರಾಜೇ ಅರಸ್ ಅಧಿಕಾರ ಸ್ವೀಕಾರ

ವಿರಾಜಪೇಟೆ, ಏ.30–ವಿರಾಜಪೇಟೆಗೆ ನೂತನ ಡಿವೈಎಸ್ಪಿಯಾಗಿ ನಿರಂಜನರಾಜೇ ಅರಸ್ ಅವರು ಅಧಿಕಾರ ವಹಿಸಿಕೊಂಡಿದ್ದಾರೆ. ಈ ಹಿಂದೆ ವಿರಾಜಪೇಟೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಡಿವೈಎಸ್‌ಪಿ ಜಯಕುಮಾರ್ ವರ್ಗಾವಣೆಗೊಂಡ ಹಿನ್ನೆಲೆ, ಮಡಿಕೇರಿ ಉಪ ವಿಭಾಗದ ಅಧೀಕ್ಷಕರಾದ ಗಜೇಂದ್ರ ಪ್ರಸಾದ್ ಅವರು ಅಧಿಕಾರ ಹಸ್ತಾಂತರ ಮಾಡಿದರು. ನಿರಂಜನರಾಜೇ ಅರಸ್ ಬೆಂಗಳೂರು ಗುಪ್ತವಾರ್ತೆ ಘಟಕದಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಈ ಸಂದರ್ಭ ವಿರಾಜಪೇಟೆ ನಗರ ಮತ್ತು ಗ್ರಾಮಾಂತರ ಠಾಣಾಧಿಕಾರಿಗಳು, ಗೋಣಿಕೊಪ್ಪ, ಕುಟ್ಟ ವಿಭಾಗದ ವೃತ್ತ ನಿರೀಕ್ಷಕರುಗಳು, ಪೊನ್ನಂಪೇಟೆ ತಾಲೂಕು ವಿವಿಧ ಠಾಣಾಧಿಕಾರಿಗಳು ನೂತನ ಅಧಿಕಾರಿಗೆ ಪುಷ್ಪಗುಚ್ಛ ನೀಡಿ ಸ್ವಾಗತಿಸಿದರು.



ಮೇ 3 ರಂದು ಬಸವ ಜಯಂತಿ

ಮಡಿಕೇರಿ,ಏ.30– ನಗರದಲ್ಲಿ ಮೇ 3 ರಂದು ಬಸವ ಜಯಂತಿಯನ್ನು ಅರ್ಥಪೂರ್ಣವಾಗಿ ಆಯೋಜಿಸಲು ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರ ಅಧ್ಯಕ್ಷತೆಯಲ್ಲಿ ಶನಿವಾರ ನಡೆದ ಸಭೆಯಲ್ಲಿ ನಿರ್ಧರಿಸಲಾಯಿತು. ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಡಾ.ಸತೀಶ, ಸರ್ಕಾರದ ನಿರ್ದೇಶನದಂತೆ ಬಸವ ಜಯಂತಿ ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ಆಯೋಜಿಸಲು ಕ್ರಮವಹಿಸುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಿಗೆ ಸೂಚಿಸಿದರು. ನಗರದ ಮಹದೇವಪೇಟೆಯಿಂದ ಮುಖ್ಯರಸ್ತೆ ಮೂಲಕ ಓಂಕಾರೇಶ್ವರ ದೇವಸ್ಥಾನ ಬಳಿ ಇರುವ ಭಾರತೀಯ ವಿದ್ಯಾಭವನದಲ್ಲಿ ಕಾರ್ಯಕ್ರಮ ಆಯೋಜಿಸಲು ಸಭೆಯಲ್ಲಿ ನಿರ್ಧರಿಸಲಾಯಿತು. ಕಿರಿಕೊಡ್ಲಿ ಮಠದ ಶ್ರೀ ಸದಾಶಿವ ಸ್ವಾಮೀಜಿ ಅವರು ಬಸವೇಶ್ವರರ ಬಗ್ಗೆ ಪ್ರವಚನ ನೀಡಲಿದ್ದಾರೆ ಎಂದು ವೀರಶೈವ ಮಹಾಸಭಾ ಅಧ್ಯಕ್ಷ ಎಚ್.ವಿ.ಶಿವಪ್ಪ ಹೇಳಿದರು. ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ನಂಜುಂಡೇಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕೆ.ಟಿ. ದರ್ಶನ, ಮಣಜೂರು ಮಂಜುನಾಥ್, ಸಮಾಜದ ಪ್ರಮುಖ ಮುಖಂಡರು ಇದ್ದರು.



ಪತಿಯಿಂದ ಪತ್ನಿ ಕೊಲೆ

ಮಡಿಕೇರಿ,ಏ.30– ದಂಪತಿ ಕಲಹ ಪತ್ನಿಯ ಸಾವಿನಲ್ಲಿ ಅಂತ್ಯ ಕಂಡಿರುವ ಘಟನೆ ದಕ್ಷಿಣ ಕೊಡಗಿನ ಕಾಕೋಟುಪರಂಬು ನಾಲ್ಕೇರಿ ಗ್ರಾಮದಲ್ಲಿ ನಡೆದಿದೆ.

ತೋಟದ ಲೈನ್ ಮನೆಯಲ್ಲಿ ವಾಸವಿದ್ದ ಜೇನು ಕುರುಬರ ಸುಮಿತ್ರ(25) ಪತಿ ಚೋಮಚ್ಚೀರ ಲವನಿಂದ ಕೊಲೆಯಾದ ದುರ್ದೈವಿಯಾಗಿದ್ದಾರೆ. ಶುಕ್ರವಾರ ರಾತ್ರಿ ಕಬ್ಬಿಣದ ಸಲಾಕೆಯಿಂದ ಪತ್ನಿ ಮೇಲೆ ಹಲ್ಲೆ ಮಾಡಿದ ಲವ ಬಳಿಕ ಬೇರೆ ಕೋಣೆಯಲ್ಲಿ ನಿದ್ರಿಸಿದ್ದಾನೆ. ಬೆಳಗ್ಗೆ ತೋಟದ ಮಾಲೀಕರು ಲೈನ್ ಮನೆಯಿಂದ ಯಾವುದೇ ಪ್ರತಿಕ್ರಿಯೆ ಬಾರದೆ ಇದ್ದಾಗ ಇತರ ಕಾರ್ಮಿಕರ ಮೂಲಕ ಪರಿಶೀಲಿಸಿದಾಗ ಸುಮಿತ್ರ ಮೃತಪಟ್ಟಿರುವುದು ಕಂಡು ಬಂದಿದೆ. ಪಕ್ಕದ ಕೋಣೆಯಲ್ಲಿದ್ದ ಲವ ನಡೆದ ಘಟನೆಯನ್ನು ವಿವರಿಸಿ ತಪ್ಪೊಪ್ಪಿಕೊಂಡಿದ್ದಾನೆ ಎಂದು ಹೇಳಲಾಗಿದೆ. ರಾತ್ರಿ ನಡೆದ ಕಲಹದ ಸಂದರ್ಭ ಪತ್ನಿ ಮಾತಿಗೆ ಮಾತು ಬೆಳೆಸಿದ್ದರಿಂದ ಹಲ್ಲೆ ಮಾಡಿರುವುದಾಗಿ ಹೇಳಿದ್ದಾನೆ. ಲವನನ್ನು ಪೊಲೀಸರು ಬಂಧಿಸಿದ್ದು, ಎರಡೂವರೆ ವರ್ಷದ ಪುತ್ರ ಹಾಗೂ 6 ತಿಂಗಳ ಪುತ್ರಿ ಅನಾಥರಾಗಿದ್ದಾರೆ.

ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎ.ಅಯ್ಯಪ್ಪ, ವಿರಾಜಪೇಟೆ ಡಿವೈಎಸ್‌ಪಿ ಗಜೇಂದ್ರ ಪ್ರಸಾದ್, ವೃತ್ತ ನಿರೀಕ್ಷಕ ಶಿವರುದ್ರಪ್ಪ, ಗ್ರಾಮಾಂತರ ಠಾಣೆ ಪಿಎಸ್‌ಐ ಸಿದ್ದಲಿಂಗ ಭಿ ಬಾಣಸೆ, ಅಪರಾಧ ವಿಭಾಗದ ಪಿಎಸ್‌ಐ ಸಿ.ಬಿ.ಶ್ರೀಧರ್ ಭೇಟಿ ನೀಡಿ ಪರಿಶೀಲಿಸಿದರು.

ಅಕ್ಷಯ ತೃತೀಯ

ಸುವರ್ಣ ಕ್ಷಣಗಳಿಗೆ ಕಾದಿರುವ ಮೈಸೂರಿನ ಆಭರಣ ವರ್ತಕರು


ಭೀಮಾ ಜ್ಯುವೆಲರ್ಸ್, ಬಿ.ಎನ್.ರಸ್ತೆ

ಮೈಸೂರು, ಏ.30(ಆರ್‌ಕೆ)– ಹಿಂದೂ ಕ್ಯಾಲೆಂಡರ್‌ನಲ್ಲಿ 'ಅಕ್ಷಯ ತೃತೀಯ' ಈಗ ಅತ್ಯಂತ ಪ್ರಮುಖ ದಿನ. ಈ ವರ್ಷ ಮೇ 3ರಂದು ಆಚರಿಸಲಿರುವ ಈ ಸುವರ್ಣ ದಿನದಂದು ಚಿನ್ನ ಖರೀದಿಸಿದರೆ ಸಂಪತ್ತು ವೃದ್ಧಿಯಾಗುತ್ತದೆ ಎಂಬುದು ಬಹುತೇಕರ ನಂಬಿಕೆ. ಹಾಗಾಗಿ ಇತ್ತೀಚಿನ ವರ್ಷಗಳಲ್ಲಿ ಶಕ್ತ್ಯಾನುಸಾರ ಚಿನ್ನಾಭರಣ ಖರೀದಿಸುವ ಪರಿಪಾಠ ಬೆಳೆದುಬಂದಿದೆ.

ಜ್ಯೋತಿಷಿಗಳ ಪ್ರಕಾರ ಈ ವರ್ಷ ಮೇ 3ರಂದು ಮುಂಜಾನೆ 5.39ರಿಂದ ಮೇ 4ರ ಮುಂಜಾನೆ 5.38ರ ವರೆಗೆ ಅಕ್ಷಯ ತೃತೀಯ ಮುಹೂರ್ತವಿರುತ್ತದೆ. ಈ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಮಹಿಳೆಯರು ಚಿನ್ನ, ಬೆಳ್ಳಿ, ವಜ್ರದ ಆಭರಣಗಳನ್ನು ಖರೀದಿಸಲು ಆಭರಣಗಳ ಮಳಿಗೆಗಳಿಗೆ ಮುಗಿ ಬೀಳುವುದು ಸಾಮಾನ್ಯವಾಗಿದೆ.

ಉತ್ತಮ ವ್ಯಾಪಾರ ನಿರೀಕ್ಷೆ

ಮೈಸೂರಿನ ಬಿ.ಎನ್.ರಸ್ತೆಯ ಭೀಮಾ ಜುವೆಲ್ಸ್ ಮಾರ್ಕೆಟಿಂಗ್ ಮ್ಯಾನೇಜರ್ ಚಂದ್ರಶೇಖರ್ 'ಮೈಸೂರು ಮಿತ್ರ' ನೊಂದಿಗೆ ಮಾತನಾಡುತ್ತಾ ಕೋವಿಡ್ ಪೂರ್ವ ಪರಿಸ್ಥಿತಿಗೆ ಹೋಲಿಸಿದಾಗ ಕಳೆದೆರಡು ದಿನಗಳಿಂದ ಆಭರಣಗಳ ವ್ಯಾಪಾರದಲ್ಲಿ ಚೇತರಿಕೆ ಕಂಡು ಬರುತ್ತಿದೆ. ಚಿನ್ನ ಮತ್ತು ವಜ್ರದ ಆಭರಣಗಳ ಮೇಲೆ ರಿಯಾಯಿತಿ ಆಫರ್ ನೀಡಿರುವುದರಿಂದ ಗ್ರಾಹಕರು ಹೆಚ್ಚಾಗಿ ಬರುತ್ತಿದ್ದಾರೆ. ಮುಂದಿನ 3 ದಿನಗಳಲ್ಲಿ ವ್ಯಾಪಾರ ಮತ್ತಷ್ಟು ಹೆಚ್ಚಾಗುವ ನಿರೀಕ್ಷೆಯಲ್ಲಿದ್ದೇವೆ ಎಂದರು.

2 ದಿನದಲ್ಲಿ ಹೆಚ್ಚಳ

ಕೊರೊನಾದಿಂದಾಗಿ ವ್ಯಾಪಾರವಿಲ್ಲದೇ ನಷ್ಟ ಅನುಭವಿಸಿದ ನಮಗೆ ಇದೀಗ ವಹಿವಾಟು ಚೇತರಿಸಿಕೊಂಡಿದೆ. ಸಾಕಷ್ಟು ಆಕರ್ಷಕ ಆಫರ್ ನೀಡಿರುವುದರಿಂದ ಈ ಬಾರಿಯ ಅಕ್ಷಯ ತೃತೀಯದಲ್ಲಿ ವ್ಯಾಪಾರ ಮತ್ತಷ್ಟು ಅಧಿಕವಾಗುವ ಸಾಧ್ಯತೆ ಇದೆ ಎಂದು ಬಿ.ಎನ್.ರಸ್ತೆಯ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ ಸ್ಟೋರ್ ಮ್ಯಾನೇಜರ್ ಶರಫುದ್ದೀನ್ ಅಭಿಪ್ರಾಯಪಟ್ಟಿದ್ದಾರೆ.

ಗ್ರಾಹಕರ ಉತ್ಸುಕತೆ

ಎರಡು ವರ್ಷಗಳ ನಂತರ ಇದೀಗ ಜನತೆ ಅಕ್ಷಯ ತೃತೀಯಕ್ಕೆ ಚಿನ್ನ ಖರೀದಿಸಲು ಉತ್ಸುಕತೆ ತೋರುತ್ತಿದ್ದಾರೆ. ಈಗಾಗಲೇ ಸಾಕಷ್ಟು ಬುಕ್ಕಿಂಗ್ ಆಗಿದ್ದು, ಭಾನುವಾರ ಮತ್ತು ಸೋಮವಾರ ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಬರುವ ನಿರೀಕ್ಷೆ ಇರುವುದರಿಂದ ನಾವು ಸಾಕಷ್ಟು ಸಿದ್ಧತೆ ಮಾಡಿಕೊಂಡಿದ್ದೇವೆ. ಈಗಾಗಲೇ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ ಎಂದು ಬಿಎನ್ ರಸ್ತೆಯ ಜೋಸ್ ಆಲುಕ್ಕಾಸ್ ಮ್ಯಾನೇಜರ್ ಸಿಯೋ ಅವರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ

ಮುಂದಿನ ಪೀಳಿಗೆಗೆ ಆದ್ಯತೆ

ಮುಂದಿನ ಪೀಳಿಗೆಯು ಚಿನ್ನ ಖರೀದಿಗೆ ಉತ್ಸುಕತೆ ತೋರದಿರಬಹುದು. ಆಭರಣ ವರ್ತಕರಾಗಿ ನಾವು ಅವರ ಸೆಳೆಯಲು ಹೊಸ ತಂತ್ರ ರೂಪಿಸಬೇಕಿದೆ. ಚಿನ್ನ, ವಜ್ರ ಮತ್ತು ಬೆಳ್ಳಿ ಖರೀದಿಸಲು ಆಕರ್ಷಿಸಲೇ ಬೇಕಾಗಿರುವುದರಿಂದ ಹೊಸ ಪೀಳಿಗೆಗೆ ನಮ್ಮಲ್ಲಿ ಹೆಚ್ಚಿನ ಆದ್ಯತೆ ಎಂದು ಕೆ.ಆರ್. ಸರ್ಕಲ್‌ನ ಎ.ಶಂಕರ್ ಚೆಟ್ಟಿ ಅಂಡ್ ಸನ್ಸ್ ಮ್ಯಾನೇಜಿಂಗ್ ಡೈರೆಕ್ಟರ್ ಆದರ್ಶ ಕೆ.ಮೂರ್ತಿ ತಿಳಿಸಿದ್ದಾರೆ.

ಕೋವಿಡ್‌ಗೆ ಮುಂಚೆ ವ್ಯಾಪಾರ ಚೆನ್ನಾಗಿತ್ತು. ಕಳೆದ ಎರಡು ವರ್ಷಗಳಲ್ಲಿ ವ್ಯಾಪಾರ ಕಳೆದುಕೊಂಡಿದ್ದೆವು. ಈ ವರ್ಷವೂ ಹೇಳಿಕೊಳ್ಳುವಷ್ಟು ಅಡ್ವಾನ್ಸ್ ಬುಕ್ಕಿಂಗ್ ಇಲ್ಲ. ಜನರಲ್ಲಿ 4ನೇ ಅಲೆ ಭಯ ಇರಬಹುದು. ಹಾಗಾಗಿ ತುರ್ತು ಆರೋಗ್ಯ ಸೇವೆಗೆ ಜನರು ಹಣ ಉಳಿಸಿಡುತ್ತಿರಬಹುದು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ನಿರೀಕ್ಷೆಯಲ್ಲಿದ್ದೇವೆ

ಕಳೆದ ಒಂದು ವಾರದಿಂದ ಗ್ರಾಹಕರು ಆಭರಣ ಮಳಿಗೆಗಳತ್ತ ಬರುತ್ತಿದ್ದಾರೆ. 2019ರ ಅಕ್ಷಯ ತೃತೀಯವೇ ಕಡೆ. ನಂತರ ಕೋವಿಡ್ ಬಂತು. ಈ ವರ್ಷ ಹೆಚ್ಚು ಮಂದಿ ನಿರೀಕ್ಷಿಸಿದ್ದೇವೆ. ಬಹುತೇಕ ಗ್ರಾಹಕರು ಆಫರ್ ಇದೆಯೇ ಎಂದು ದೂರವಾಣಿ ಮೂಲಕವೇ ವಿಚಾರಿಸುತ್ತಿದ್ದಾರೆ. ಒಳ್ಳೆ ವ್ಯಾಪಾರವಾಗಬಹುದೆಂಬ ನಿರೀಕ್ಷೆ ಇದೆ ಎಂದು ಬಿಎನ್ ರಸ್ತೆಯ ಜೋಯಾಲುಕ್ಕಾಸ್ ಸ್ಟೋರ್ ಅಸಿಸ್ಟೆಂಟ್ ಮ್ಯಾನೇಜರ್ ಬಾಲಕೃಷ್ಣನ್ ತಿಳಿಸಿದರು.

ಅಭದ್ರತೆ ಕಾಡುತ್ತಿದೆ

ಗ್ರಾಹಕರಿಂದ ಸಾಧಾರಣ ಪ್ರತಿಕ್ರಿಯೆ ವ್ಯಕ್ತವಾಗಿದೆ. ಚಿನ್ನ ಮತ್ತು ವಜ್ರದ ಮೇಲೆ ಹಣ ತೊಡಗಿಸಲು ಅಭದ್ರತೆ ಕಾಡುತ್ತಿದೆ. ಕೋವಿಡ್ ವಕ್ಕರಿಸಿದರೆ ಆಸ್ಪತ್ರೆ ವೆಚ್ಚಕ್ಕೆಂದು ಜನ ಭಯದಿಂದ ಹಣ ಮೀಸಲಿಡುತ್ತಿರಬಹುದು. ಕಳೆದ ಎರಡು ದಿನಗಳಿಂದ ಸ್ವಲ್ಪ ಮಟ್ಟದ ಸುಧಾರಣೆಯಾಗುತ್ತಿದ್ದು, ಅಕ್ಷಯ ತೃತೀಯಾದ ವೇಳೆಗೆ ಉತ್ತಮವಾಗಬಹುದೆಂಬ ನಿರೀಕ್ಷೆ ಇದೆ ಎಂದು ವಿವಿ ಮೊಹಲ್ಲಾದ ತೊಳಸಿ ಜುವೆಲ್ಸ್ ಮ್ಯಾನೇಜಿಂಗ್ ಪಾರ್ಟ್‌ನರ್ ಹರ್ಷವರ್ಧನ್ ದತ್ತತೊಳಸಿ ಅಭಿಪ್ರಾಯಪಟ್ಟಿದ್ದಾರೆ

ಮದುವೆ ಸೀಸನ್

ಗ್ರಾಹಕರು ಬುಕ್ಕಿಂಗ್ ಮಾಡುತ್ತಿದ್ದಾರೆ. ಆದರೆ, ಈಗ ಚಿನ್ನದ ಬೆಲೆ ಹೆಚ್ಚಾಗಿದೆ. ಇಲ್ಲದಿದ್ದರೆ ಉತ್ತಮ ವ್ಯಾಪಾರವಾಗುತ್ತಿತ್ತು. ಎರಡು ವರ್ಷಗಳ ನಂತರ ಇದೀಗ ಮದುವೆ ಸೀಜನ್ ಆರಂಭವಾಗಿದೆ. ಜನ ಚಿನ್ನ ಖರೀದಿಸಲೇಬೇಕು. ಅಕ್ಷಯ ತೃತೀಯದಿಂದ ಒಂದು ವಾರ ಬ್ಯುಸಿನೆಸ್ ಆಗಬಹುದು. ಆದರೆ ಮದುವೆಗೆ ಖರೀದಿ ಮುಂದುವರೆಯಲಿದೆ ಎಂದು ಲಷ್ಕರ್ ಮೊಹಲ್ಲಾದ ಕಲ್ಯಾಣ್ ಜುವೆಲರ್ಸ್ ಸ್ಟೋರ್ ಮ್ಯಾನೇಜರ್ ರಂಜಿತಾ ತಿಳಿಸಿದ್ದಾರೆ.

ವರ್ಷವಿಡೀ ಉತ್ತಮ ಬೆಲೆ

ನಾವು ವರ್ಷವಿಡೀ ಗ್ರಾಹಕರಿಗೆ ಉತ್ತಮ ಬೆಲೆ ಕೊಡುತ್ತೇವೆ. ಬೇರೆ ಅಂಗಡಿಗಳಲ್ಲಿ ದರದ ಬಗ್ಗೆ ವಿಚಾರಿಸಿದ ನಂತರವೇ ನಮ್ಮಲ್ಲಿ ಖರೀದಿಸಬಹುದು ಹಾಗಾಗಿ ನಾವು ಸ್ಪೆಷಲ್ ಆಫರ್ ಕೊಡುವುದಿಲ್ಲ. ವ್ಯಾಪಾರ ಚೆನ್ನಾಗಿದೆ, ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ಬರುತ್ತಿದೆ ಎಂದು ಶಿವರಾಂಪೇಟೆಯ ಪ್ರಕಾಶ್ ಜುವೆಲರ್ಸ್ ಮ್ಯಾನೇಜರ್ ಸಚಿತ್ ತಿಳಿಸಿದ್ದಾರೆ.

ವ್ಯಾಪಾರ ಚೆನ್ನಾಗಿದೆ

ಎರಡು ವರ್ಷಗಳಿಂದ ನೆಲ ಕಚ್ಚಿದ್ದ ವ್ಯಾಪಾರ ಈಗ ಚೆನ್ನಾಗಿದೆ. ಗ್ರಾಹಕರು ವಿವಿಧ ಡಿಸೈನ್‌ಗಳನ್ನು ಅಪೇಕ್ಷಿಸುತ್ತಿದ್ದಾರೆ. ಈ ಬಾರಿ ತಿಂಗಳ ಆರಂಭದಲ್ಲೇ ಅಕ್ಷಯ ತೃತೀಯ ಬಂದಿರುವುದರಿಂದ ಹಾಗೂ ಭಾನುವಾರ ಮತ್ತು ಸೋಮವಾರ ಉತ್ತಮ ಪ್ರತಿಕ್ರಿಯೆ ನಿರೀಕ್ಷಿಸಿದ್ದೇವೆ ಎಂದು ಬಿಎನ್ ರಸ್ತೆಯ ತನಿಷ್ಕ್ ಜುವೆಲರಿ ಸ್ಟೋರ್ ಮ್ಯಾನೇಜರ್ ವಿನೋದ ತಿಳಿಸಿದ್ದಾರೆ.

ಜನತೆ ತೊಂದರೆಯಲ್ಲಿದ್ದಾರೆ

ಕಳೆದ 2 ವರ್ಷಗಳಿಗೆ ಹೋಲಿಸಿದರೆ ಈಗ ವ್ಯಾಪಾರ ಉತ್ತಮವಾಗಿದೆ. 4ನೇ ಅಲೆಯ ಕೋವಿಡ್ ಭೀತಿ ಇರುವುದರಿಂದ ಜನರು ತೊಂದರೆಯಲ್ಲಿದ್ದಂತೆ ಕಾಣುತ್ತಿದೆ ಎಂದು ಡಿ.ದೇವರಾಜ ಅರಸು ರಸ್ತೆಯ ರಾಜ್ ಡೈಮಂಡ್ಸ್‌ನ ಪ್ರಸನ್ನಕುಮಾರ್ ಅಭಿಪ್ರಾಯಪಟ್ಟರು.

ನಿರಾಸೆ ತಂದಿದೆ

ಚಿನ್ನ ಖರೀದಿಸಲು ಜನ ಮುಂದಾಗುತ್ತಿರುವುದು ಅಕ್ಷಯ ತೃತೀಯಕ್ಕಲ್ಲ ದರದ ಅನಿಶ್ಚಿತತೆಯಿಂದ. ದಿನದಿಂದ ದಿನಕ್ಕೆ ಚಿನ್ನ, ವಜ್ರದ ಬೆಲೆ ಏರುತ್ತಿರುವುದರಿಂದ ಅವರ ಬಜೆಟ್‌ನೊಳಗೇ ಖರೀದಿಸಲೆಂದು ನೋಡುತ್ತಾರೆ. ನಾವು ಹೆಚ್ಚು ವ್ಯಾಪಾರ ನಿರೀಕ್ಷಿಸಿದ್ದೆವಾದರೂ ಮಾರಾಟ ನಿರಾಸೆ ತಂದಿದೆ. ಅಷ್ಟಕ್ಕೂ ಜನರ ಮನಸ್ಥಿತಿ ಅರ್ಥ ಮಾಡಿಕೊಳ್ಳುವುದು ಕಷ್ಟ ಎಂದು ಡಿ.ದೇವರಾಜ ಅರಸು ರಸ್ತೆಯ ಜುವೆಲ್ ಮಂದಿರ್‌ನ ದೀಪಕ್ ತಿಳಿಸಿದ್ದಾರೆ.

ಮೈಸೂರಿನಲ್ಲಿ 600 ಅಂಗಡಿಗಳು

ಕೋವಿಡ್ ಪರಿಸ್ಥಿತಿಗೂ ಮುನ್ನ ಅಕ್ಷಯ ತೃತೀಯದ ಸಂದರ್ಭ ಒಳ್ಳೆಯ ಎಲ್ಲಾ ವಿಧದ ಆಭರಣಗಳ ವ್ಯಾಪಾರವಾಗುತ್ತಿತ್ತು. ಪ್ರತಿ ಅಂಗಡಿಗೆ 500ರಿಂದ 600 ಬುಕಿಂಗ್‌ಗಳಾಗುತ್ತಿದ್ದವು. ಆದರೆ ಈಗ ಅಂತಹ ಒಳ್ಳೆ ಪ್ರತಿಕ್ರಿಯೆ ಇಲ್ಲ ಎಂದು ಮೈಸೂರು ಶ್ರಾಫ್ ಅಸೋಸಿಯೇಷನ್ (ಜುವೆಲರ್ಸ್ ಅಸೋಸಿಯೇಷನ್) ಅಧ್ಯಕ್ಷರಾದ ಅಶೋಕ ರಸ್ತೆಯ ಲಲಿತ್ ಜುವೆಲರಿ ಮಾರ್ಟ್ ಪಾಲುದಾರ ಸಿ.ಎಸ್.ಅಮರ್‌ನಾಥ್ ತಿಳಿಸಿದ್ದಾರೆ. ಮೈಸೂರಿನಲ್ಲಿ ಸುಮಾರು 600 ಚಿನ್ನ ಮತ್ತು ವಜ್ರದ ಅಂಗಡಿಗಳಿವೆ ಕೋವಿಡ್ ನಂತರ ಈಗ ವಹಿವಾಟು ಸುಧಾರಿಸುತ್ತಿದೆ. ಮೊದಲಿನ ಸ್ಥಿತಿಗೆ ಬರಲು ಇನ್ನೂ ಸಮಯ ಬೇಕು ಎಂದು ಅವರು ತಿಳಿಸಿದರು.


ಪ್ರಕಾಶ್ ಜ್ಯುವೆಲರ್ಸ್, ಶಿವರಾಂಪೇಟೆ


ತೊಳಸಿ ಜ್ಯುವೆಲರ್ಸ್, ವಿ.ವಿ.ಮೊಹಲ್ಲಾ


ಕಲ್ಯಾಣ್ ಜ್ಯುವೆಲರ್ಸ್, ಬಿ.ಎನ್.ರಸ್ತೆ


ಜೋಸ್ ಆಲುಕ್ಕಾಸ್, ಬಿ.ಎನ್.ರಸ್ತೆ


ತನಿಷ್ಕ್ ಜ್ಯುವೆಲರಿ, ಬಿ.ಎನ್.ರಸ್ತೆ


ಜೋಯ್ ಆಲುಕ್ಕಾಸ್, ಬಿ.ಎನ್.ರಸ್ತೆ


ಮಲಬಾರ್ ಗೋಲ್ಡ್ & ಡೈಮಂಡ್ಸ್, ಬಿ.ಎನ್.ರಸ್ತೆ


ಎ.ಶಂಕರ್ ಚೆಟ್ಟಿ ಅಂಡ್ ಸನ್ಸ್, ಕೆ.ಆರ್.ಸರ್ಕಲ್

ಮೈಸೂರಲ್ಲಿ ಮುಂದುವರೆದ ವರ್ಷಧಾರೆ: ಭಾರೀ ಗಾಳಿಗೆ ಮೂರು ಮರಗಳು ಧರೆಗೆ

● ವಾಹನಗಳ ಸಂಚಾರ ಅಸ್ತವ್ಯಸ್ತ ● ತಗ್ಗು ಪ್ರದೇಶಗಳಿಗೆ ನೀರು ನುಗ್ಗಿ ಅವಾಂತರ



ಮೈಸೂರು, ಏ.30(ಎಂಕೆ)– ಮೈಸೂರು ನಗರ ಸೇರಿದಂತೆ ಜಿಲ್ಲೆಯಾದ್ಯಂತ ಮಳೆ ಅಬ್ಬರ ಮುಂದುವರೆದಿದೆ. ಶನಿವಾರ ಗುಡುಗು–ಮಿಂಚು ಸಹಿತ ಸುರಿದ ಭಾರೀ ಮಳೆ–ಗಾಳಿಗೆ ಮೂರು ಮರಗಳು ಹಾಗೂ ಮೂರು ವಿದ್ಯುತ್ ಕಂಬಗಳು ಧರೆಗುರುಳಿದ್ದು, ವಾಹನಗಳ ಸಂಚಾರ ಅಸ್ತವ್ಯಸ್ತಗೊಂಡಿತ್ತು. ರಾತ್ರಿ 10 ಗಂಟೆ ಸುಮಾರಿಗೆ ಶುರುವಾದ ಮಳೆ ತಡರಾತ್ರಿಯವರೆಗೂ ಜೋರಾಗಿ ಸುರಿಯಿತು. ಪರಿಣಾಮ ಯಾದವಗಿರಿ(ನಗರಪಾಲಿಕೆ ಆಯುಕ್ತರ ಮನೆ ಸಮೀಪ), ವಿಜಯನಗರ 2ನೇ ಹಂತ ಹಾಗೂ ಚಾಮರಾಜ ಜೋಡಿ ರಸ್ತೆ(ಗಾಯತ್ರಿ ಚಿತ್ರಮಂದಿರ ಬಳಿ) ಬೃಹತ್ ಮರಗಳು ಬುಡ ಸಮೇತ ನೆಲಕ್ಕುರುಳಿವೆ. ವಿಜಯನಗರ 2ನೇ ಹಂತದಲ್ಲಿ ಮೂರು ವಿದ್ಯುತ್ ಕಂಬಗಳು ಮುರಿದು ಬಿದ್ದಿದ್ದು, ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕಾಗಮಿಸಿದ ಪಾಲಿಕೆ ಅಭಯ–3 ಸಿಬ್ಬಂದಿ ಮಳೆಯ ನಡುವೆಯೂ ಕಾರ್ಯಾಚರಣೆ ನಡೆಸಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ತಗ್ಗು ಪ್ರದೇಶಗಳಿಗೆ ನೀರು: ಕನಕಗಿರಿ, ಮುನೇಶ್ವರನಗರ, ಗುಂಡೂರಾವ್‌ನಗರ, ಬೈರವೇಶ್ವರ ನಗರ, ಆನಂದ ನಗರ, ಐಶ್ವರ್ಯ ಬಡಾವಣೆ(ಆರ್.ಎಂ.ಪಿ. ಕ್ವಾರ್ಟರ್ಸ್ ಹಿಂಭಾಗದ ಬಡಾವಣೆ) ಮತ್ತು ಸೂರ್ಯ ಬಡಾವಣೆ ಸೇರಿದಂತೆ ನಗರದ ತಗ್ಗು ಪ್ರದೇಶದಲ್ಲಿರುವ ಬಡಾವಣೆಗೆ ನೀರು ನುಗ್ಗಿ ಅವಾಂತರ ಸೃಷ್ಟಿಸಿದೆ ಅಲ್ಲದೆ ಕುವೆಂಪುನಗರದ ಅಪೋಲೋ ಆಸ್ಪತ್ರೆ ಎದುರಿನ ಆದಿಚುಂಚನಗಿರಿ ರಸ್ತೆಯಲ್ಲಿ ಎರಡು ಅಡಿಗಳಷ್ಟು ನೀರು ತುಂಬಿದ್ದು, ವಾಹನ ಸವಾರರು ಪರದಾಡುವಂತಾಯಿತು.

ಜಲಾವೃತ: ಮಳೆ ಅಬ್ಬರಕ್ಕೆ ನಗರದ ಪ್ರಮುಖ ರಸ್ತೆ, ವೃತ್ತಗಳು ನೀರಿನಿಂದ ಆವೃತವಾಗಿದ್ದವು. ವಿವಿಧ ಕಾಮಗಾರಿ ಹಿನ್ನೆಲೆ ಅಗೆದಿರುವ ಗುಂಡಿಗಳು ಮಳೆ ನೀರಿನಿಂದ ತುಂಬಿದ್ದು, ರಾತ್ರಿ ವೇಳೆ ಸಂಚಾರಕ್ಕೆ ಭಾರೀ ತೊಂದರೆ ಉಂಟಾಗುತ್ತಿದ್ದೆ. ಮಳೆಗಾಲ ಆರಂಭವಾದಾಗಲೇ ಪಾಲಿಕೆಯವರು ಗುಂಡಿ ತೆಗೆಯುವಂತಹ ಕಾಮಗಾರಿಗಳಿಗೆ ಕೈ ಹಾಕುವುದು ಎಂದು ಕೆಲ ಮೈಸೂರಿಗರು ಕಿಡಿಕಾರಿದ್ದಾರೆ.

ವಿದ್ಯುತ್ ಕಂಬಗಳು ಮುರಿದು ಬಿದ್ದಿರುವ ಸಾಧ್ಯತೆ: ನಿನ್ನೆ(ಏ.29) ಸುರಿದ ಮಳೆಗೆ ಮೈಸೂರು ನಗರ ಸೇರಿದಂತೆ ಜಿಲ್ಲೆಯಾದ್ಯಂತ 35 ವಿದ್ಯುತ್ ಕಂಬಗಳು ಮುರಿದು ಬಿದ್ದಿದ್ದು, ಇಂದೂ ಸಹ ಕೂಡ ಹಲವೆಡೆ ವಿದ್ಯುತ್ ಕಂಬಗಳು ಮುರಿದು ಬಿದ್ದಿರುವ ಸಾಧ್ಯತೆ ಇದೆ ಎಂದು ಚೆಸ್ಕಾಂ ಅಧಿಕಾರಿಗಳು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಸೋಮವಾರವೇ ರಂಜಾನ್

ಬೆಂಗಳೂರು, ಏ. 30– ಮುಸ್ಲಿಂ ಬಾಂಧವರು ಸೋಮವಾರ (ಮೇ 2)ವೇ ರಂಜಾನ್ ಆಚರಿಸಲು ನಿರ್ಧರಿಸಿದ್ದು, ರಾಜ್ಯ ಸರ್ಕಾರ ಸೋಮವಾರವೇ ಸಾರ್ವತ್ರಿಕ ರಜೆ ಘೋಷಿಸಿ, ಆದೇಶ ಹೊರಡಿಸಿದೆ.ಈ ಹಿಂದೆ ಮಂಗಳವಾರ (ಮೇ 3) ರಂಜಾನ್ ನಿಗದಿಯಾಗಿತ್ತು. ಆದರೆ ಇಂದು ಸಭೆ ಸೇರಿದ್ದ ಮೂನ್ ಕಮಿಟಿಯು ಸೋಮವಾರವೇ ರಂಜಾನ್ ಆಚರಿಸಲು ನಿರ್ಧರಿಸಿರುವ ಹಿನ್ನೆಲೆಯಲ್ಲಿ ಸರ್ಕಾರ ಅಂದು ಸರ್ಕಾರಿ ರಜೆ ಘೋಷಿಸಿ ಆದೇಶ ಹೊರಡಿಸಿದೆ. ಇದರಿಂದ ಸೋಮವಾರ ಬ್ಯಾಂಕುಗಳು ಸೇರಿದಂತೆ ಎಲ್ಲಾ ಸರ್ಕಾರಿ ಕಚೇರಿಗಳು ಮತ್ತು ಶಾಲಾ–ಕಾಲೇಜುಗಳಿಗೆ ರಜಾ ದಿನವಾಗಿರುತ್ತದೆ.

ಕೊಳದ ಮಠದ ಶಾಂತವೀರ ಸ್ವಾಮೀಜಿ ಶಿವೈಕ್ಯ



ಬೆಂಗಳೂರು, ಏ. 30– ಇಂದು ಮುಂಜಾನೆ ಬೆಂಗಳೂರಿನ ಕೊಳದ ಮಠದ ಶಾಂತವೀರ ಸ್ವಾಮೀಜಿ ಹೃದಯಾಘಾತದಿಂದ ಶಿವೈಕ್ಯರಾಗಿದ್ದಾರೆ.


ನಿನ್ನೆಯಷ್ಟೇ ಮಹಾಲಕ್ಷ್ಮಿ ಲೇಔಟ್ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಇಂದು ಮುಂಜಾನೆ ದಿಢೀರನೆ ಎದೆನೋವು ಕಾಣಿಸಿಕೊಂಡಿದ್ದು, ಶಾಂತವೀರ ಶ್ರೀಗಳಿಗೆ 80 ವರ್ಷ ವಯಸ್ಸಾಗಿತ್ತು. ಭಕ್ತರ ದರ್ಶನಕ್ಕೆ ಮಠದ ಆವರಣದಲ್ಲಿ ಅವಕಾಶ ಮಾಡಿಕೊಡಲಾಗಿದ್ದು, ಶನಿವಾರ ಸಂಜೆಯೇ ಮಠದ ಆವರಣದಲ್ಲಿ ಅಂತ್ಯಸಂಸ್ಕಾರ ನಡೆಯಿತು. ಗಣ್ಯರು ಶ್ರೀಗಳ ಪಾರ್ಥಿವ ಶರೀರದ ದರ್ಶನ ಪಡೆದರು.



ಮೈಸೂರಿನ ವಿಜಯನಗರ 1ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಪುಣ್ಯಕೋಟಿ ಸೇವಾ ಟ್ರಸ್ಟ್, ಐಶ್ವರ್ಯ ಫೌಂಡೇಷನ್, ಓವೈಹೆಚ್‌ಎಸ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ನಾಡೋಜ ಪ್ರಶಸ್ತಿ ಪುರಸ್ಕೃತರಾದ ಪ್ರೊ ಭಾಷ್ಯಂ ಸ್ವಾಮೀಜಿ ಹಾಗೂ ಪ್ರೊ.ಟಿ.ವಿ. ವೆಂಕಟಾಚಲಶಾಸ್ತ್ರಿ ಅವರನ್ನು ಅಭಿನಂದಿಸಲಾಯಿತು. ವಾಗ್ಮಿ ಪ್ರೊ.ಎಂ. ಕೃಷ್ಣೇಗೌಡ, ಮುಖಂಡರಾದ ಎಂ.ಕೆ. ನಂಜಯ್ಯ, ಕೆ.ಕಾಳಿಂಗು, ಆರ್.ಬಸವಣ್ಣ, ಗೋಪಾಲಸ್ವಾಮಿ ಮತ್ತಿತರರಿದ್ದರು.

ಸಂವಿಧಾನ ಜಾರಿಗೆ ಬಂದು 73 ವರ್ಷವಾದರೂ ಅದಕ್ಕನುಗುಣವಾಗಿ ನಾವು ಇನ್ನೂ ನಡೆದುಕೊಳ್ಳುತ್ತಿಲ್ಲ

● ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ್‌ದಾಸ್ ವಿಷಾದ ● ರಾಜಕೀಯ ಪ್ರಜಾಪ್ರಭುತ್ವವಿದ್ದರೆ ಸಾಲದು, ಆರ್ಥಿಕ, ಸಾಮಾಜಿಕ ಪ್ರಜಾಪ್ರಭುತ್ವ ಬಂದಾಗ ದೇಶದ ಅಭಿವೃದ್ಧಿ ಸಾಧ್ಯ



ಮೈಸೂರು, ಏ.30(ಎಂಕೆ)– ರಾಜಕೀಯ ಪ್ರಜಾಪ್ರಭುತ್ವದೊಂದಿಗೆ ಆರ್ಥಿಕ ಮತ್ತು ಸಾಮಾಜಿಕ ಪ್ರಜಾಪ್ರಭುತ್ವವನ್ನು ಒಂದೂಗೂಡಿಸಿದರೆ ಮಾತ್ರವೇ ಡಾ.ಬಿ.ಆರ್.ಅಂಬೇಡ್ಕರ್ ಕನಸಿನ ನಿಜವಾದ ಪ್ರಜಾಪ್ರಭುತ್ವ ಅನುಷ್ಠಾನಕ್ಕೆ ಬರಲು ಸಾಧ್ಯ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ್‌ದಾಸ್ ಅಭಿಪ್ರಾಯಪಟ್ಟರು.

ಪರಿಶಿಷ್ಟ ಜಾತಿ ನಾಗರಿಕ ಕ್ಷೇಮಾಭಿವೃದ್ಧಿ ಸಂಘ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 'ಅಂಬೇಡ್ಕರ್ ಅವರ 131ನೇ ಜನ್ಮ ದಿನಾಚರಣೆ' ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಳೆದ 73 ವರ್ಷಗಳಿಂದಲೂ ಪ್ರಜಾಪ್ರಭುತ್ವ ಎಂದರೆ 5 ವರ್ಷಕ್ಕೊಮ್ಮೆ ನಡೆಯುವ ಚುನಾವಣೆಗಳು ಎಂದುಕೊಂಡಿದ್ದೇವೆ. ಆದ್ದರಿಂದಲೇ ಚುನಾವಣೆ ಬಂದರೆ ದೇಶದಲ್ಲಿ ಮಂದಿರ, ಮಸೀದಿ, ಹಲಾಲ್, ಹಿಜಾಬ್ ಇನ್ನಿತರೆ ಭಾವನಾತ್ಮಕ ವಿಚಾರಗಳು ಚರ್ಚೆಗೆ ಬರುತ್ತವೆಯೇ ಹೊರತು ನಿರುದ್ಯೋಗ, ರೈತರ ಆತ್ಮಹತ್ಯೆ, ಕೆಲಸ ಕಳೆದುಕೊಳ್ಳುತ್ತಿರುವ ಕಾರ್ಮಿಕರ ವಿಚಾರಗಳು ಚರ್ಚೆಗೆ ಬರುವುದಿಲ್ಲ ಎಂದು ಹೇಳಿದರು.

ದೇಶದಲ್ಲಿ ನಿರುದ್ಯೋಗ ಹೆಚ್ಚಾಗುತ್ತಲೇ ಇದೆ. ಅರ್ಧದಷ್ಟು ಮಹಿಳೆಯರು ಅಪೌಷ್ಟಿಕತೆಯಿಂದ ಸಾಯುತ್ತಿದ್ದಾರೆ. ಇನ್ನೂ ಒಂದಷ್ಟು ಜನಕ್ಕೆ ಶಿಕ್ಷಣ, ಆರೋಗ್ಯ, ವಸತಿಯಿಲ್ಲ. ಕೃಷಿ–ಕೈಗಾರಿಕಾ ಬಿಕ್ಕಟ್ಟಿದೆ. ಇನ್ನೂ ಜನ–ಜೀವನ ಕಷ್ಟವಿದೆ. ಇದಕ್ಕೆಲ್ಲಾ ಕಾರಣ ಭಾರತ ಸಂವಿಧಾನವಲ್ಲ. ಬದಲಿಗೆ ನಾವುಗಳು. ಸಂವಿಧಾನ ಜಾರಿಗೆ ಬಂದು 73 ವರ್ಷಗಳಾಗಿವೆ. ಆದರೆ ಈ ದೇಶದ ಬಹುದೊಡ್ಡ ಜನಸಂಖ್ಯೆ ಸಂವಿಧಾನವನ್ನು ಓದಲೇ ಇಲ್ಲ. ಅರ್ಥ ಮಾಡಿಕೊಂಡು ಅದರಂತೆ ನಡೆದುಕೊಂಡಿಲ್ಲ. ರಾಜಕೀಯ ಪ್ರಜಾಪ್ರಭುತ್ವದೊಂದಿಗೆ ಆರ್ಥಿಕ ಮತ್ತು ಸಾಮಾಜಿಕ ಪ್ರಜಾಪ್ರಭುತ್ವವನ್ನು ಒಂದೂಗೂಡಿಸಿದರಷ್ಟೇ ದೇಶದ ಅಭಿವೃದ್ಧಿ ವಿಚಾರಗಳು ಚರ್ಚೆಗೆ ಬರಲು ಸಾಧ್ಯ ಎಂದು ಹೇಳಿದರು.

ದಲಿತರ, ಕಾರ್ಮಿಕರ, ಮಹಿಳೆಯರ ನಾಯಕರು ಹಾಗೂ ದೇಶಕ್ಕೆ ಸಂವಿಧಾನ ಕೊಟ್ಟ ಕಾನೂನು ತಜ್ಞರೂ ಆದ ಬಾಬಾ ಸಾಹೇಬ್ ಅಂಬೇಡ್ಕರ್ ಜಾಗತಿಕ ದುರೀಣರಾಗಿದ್ದಾರೆ. ಅವರಿಗೆ ಗೌರವ ಕೊಡುವುದು ಎಂದರೆ ಅವರ ಅಮಲಿನಲ್ಲಿ ಇರುವುದಲ್ಲ. ಅವರ ವಿಚಾರಗಳನ್ನು ಅರಿಯುವುದು. ಅಂಬೇಡ್ಕರ್ ವಿಚಾರಗಳು ನಮ್ಮ ಬದುಕಿನ ವಿಚಾರಗಳಾಗಬೇಕು. ನಮ್ಮಲ್ಲಿ ಅಂಬೇಡ್ಕರ್ ಅವರ ಅರಿವು ಹೆಚ್ಚಾಗಬೇಕಾದರೆ ಮೊದಲು ಭಾರತದ ಸಂವಿಧಾನವನ್ನು ಓದಬೇಕು. ನಾವೆಲ್ಲರೂ ಸಂವಿಧಾನವನ್ನು ಓದಿ, ಅರ್ಥಮಾಡಿಕೊಂಡು ಅದರಂತೆ ನಡೆದಾಗಲೇ ದೇಶದ ಅಭಿವೃದ್ಧಿ ಸಾಧ್ಯ. ದೇಶದಲ್ಲಿ ಇಷ್ಟು ಜಾತಿ–ಧರ್ಮಗಳಿದ್ದರೂ 73 ವರ್ಷಗಳಿಂದಲೂ ನಮ್ಮನ್ನು ಭಾರತೀಯರನ್ನಾಗಿ ಮುನ್ನಡೆಸುತ್ತಿರುವುದು ಭಾರತೀಯ ಸಂವಿಧಾನ ಎಂಬುದನ್ನು ಮರೆಯಬಾರದು ಎಂದು ತಿಳಿಹೇಳಿದರು.

ಮಹಿಳೆಯರಿಗೆ ಸಮಾನತೆ ದೊರಕಿಸುವುದಕ್ಕಾಗಿ ರಚನೆಗೊಂಡ ಹಿಂದೂ ಕೋಡ್ ಬಿಲ್ ಸದನದಲ್ಲಿ ಪಾಸ್ ಆಗಲಿಲ್ಲಾ ಎಂಬ ಕಾರಣಕ್ಕೆ ತಮ್ಮ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೊರಬಂದ ಏಕೈಕ ವ್ಯಕ್ತಿ ಬಾಬಾ ಸಾಹೇಬ್ ಅಂಬೇಡ್ಕರ್. ಅವರ ನಂತರ ನಮ್ಮಲ್ಲಿ ಅನೇಕ ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದಾರೆ. ಯಾವ ಕಾರಣಕ್ಕೆ ಭ್ರಷ್ಟಾಚಾರ, ಮಹಿಳೆಯರ ಮೇಲೆ ಅತ್ಯಾಚಾರ, ಸದನದಲ್ಲಿ ಅಶ್ಲೀಲ ದೃಶ್ಯಗಳನ್ನು ನೋಡಿ ರಾಜೀನಾಮೆ ಕೊಟ್ಟಿದ್ದಾರೆಯೇ ಹೊರತು ಜನಹಿತಕ್ಕಾಗಿ ಅಲ್ಲ ಎಂದರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಸಾಹಿತಿ ಪ್ರೊ. ಅರವಿಂದ ಮಾಲಗತ್ತಿ, ಪರಿಶಿಷ್ಟ ಜಾತಿ ನಾಗರಿಕ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಬಿ.ಬೋರಯ್ಯ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಿಗೆ ಬರುವುದೆಂದರೆ ಇಷ್ಟ...

ಮತ್ತೆ ಮತ್ತೆ ಮೈಸೂರಿಗೆ ಬರುತ್ತಿದ್ದರೆ ಒಂದು ಘಟನೆ ನೆನಪಾಗುತ್ತದೆ. ಸುಮಾರು 25 ವರ್ಷಗಳ ಹಿಂದೆ ಇಲ್ಲಿನ ಹೋಟೆಲ್ ಮಾಲೀಕರೊಬ್ಬರು, ನಮ್ಮ ಹೋಟೆಲ್‌ನಲ್ಲಿ ಕ್ಯಾಬರೆ ಡ್ಯಾನ್ಸ್ ನಡೆಸಲು ಅನುಮತಿ ಕೊಡಿ ಎಂದು ಪಾಲಿಕೆ ಆಯುಕ್ತರಿಗೆ ಅರ್ಜಿ ಸಲ್ಲಿಸಿದ್ದರು. ಆ ಅರ್ಜಿಯನ್ನು ಆಯುಕ್ತರು ತಿರಸ್ಕರಿಸಿದ್ದಕ್ಕೆ, ಹೋಟೆಲ್ ಮಾಲೀಕ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸುತ್ತಾನೆ. ಆಗ ಹೈಕೋರ್ಟ್‌ನಲ್ಲಿ ನ್ಯಾಯಾಧೀಶರು, ಆಯುಕ್ತರು ನೀಡಿದ ತಿರಸ್ಕಾರದ ಆದೇಶ ಪತ್ರದಲ್ಲಿ ಏನಿದೆ ಎಂಬುದನ್ನು ನೀವೆ ಓದಿ ಎನ್ನುತ್ತಾರೆ. ಪತ್ರದಲ್ಲಿ 'ಕರ್ನಾಟಕ ರಾಜ್ಯದ ಸಾಂಸ್ಕೃತಿಕ ನಗರವಾದ ಮೈಸೂರಲ್ಲಿ ಅರೆ ನಗ್ನ ನೃತ್ಯಕ್ಕೆ ಅನುಮತಿ ನೀಡಿದರೆ ಪಾರ್ಥೇನಿಯಂ ಗಿಡ ನೆಟ್ಟಂತೆ'. ಆದ್ದರಿಂದ ಈ ಅರ್ಜಿಯನ್ನು ತಿರಸ್ಕರಿಸಿದ್ದೇನೆ ಎಂದಿತ್ತು. ಪಾಲಿಕೆ ಆಯುಕ್ತರು ತಮ್ಮ ತಿರಸ್ಕಾರ ಆದೇಶದಲ್ಲಿ ಸಕಾರಣ ನೀಡಿದ್ದಾರೆ ಎಂದು ಹೈಕೋರ್ಟ್ ನ್ಯಾಯಮೂರ್ತಿಗಳು ಕೂಡ ರಿಟ್ ಅರ್ಜಿಯನ್ನು ವಜಾ ಮಾಡಿದರು. ಅಂತಹ ಸಾಂಸ್ಕೃತಿಕ ನಗರಕ್ಕೆ ಮತ್ತೆ ಮತ್ತೆ ಬರುವುದೆಂದರೆ ನನಗೆ ಖುಷಿ.

- ಹೆಚ್.ಎನ್.ನಾಗಮೋಹನ್‌ದಾಸ್,
ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ

ಒಂದನೇ ಪುಟದಿಂದ

ಆದ್ಯತೆ ನೀಡಬೇಕಿದೆ

ನ್ಯಾಯಾಲಯಗಳಲ್ಲಿ ನ್ಯಾಯ ವಿತರಣೆಯನ್ನು ವೇಗ ಹಾಗೂ ಸುಲಭಗೊಳಿಸಲು ಹಳೆಯದಾದ ಕಾನೂನುಗಳನ್ನು ರದ್ದುಪಡಿಸುವಂತೆ ಸಿಎಂಗಳಿಗೆ ಸಲಹೆ ನೀಡಿದ ಅವರು, 2015ರಲ್ಲಿ ಸುಮಾರು 1,800 ಅಪ್ರಸ್ತುತ ಕಾನೂನುಗಳನ್ನು ಗುರುತಿಸಿದ್ದೇವೆ. ಅದರಲ್ಲಿ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುವ 1,450 ಕಾನೂನುಗಳನ್ನು ಈಗಾಗಲೇ ರದ್ದುಗೊಳಿಸಲಾಗಿದೆ. ಆದರೆ ಅಂತಹ ಕೇವಲ 75 ಕಾನೂನುಗಳನ್ನು ಮಾತ್ರ ರಾಜ್ಯಗಳು ರದ್ದುಪಡಿಸಿವೆ ಎಂದರು.

ಭಾರತವು ಸ್ವಾತಂತ್ರ್ಯದ 75ನೇ ವರ್ಷಾಚರಣೆ ಮಾಡುತ್ತಿರುವಾಗ ಜನಸಾಮಾನ್ಯರಿಗೆ ಸುಲಭವಾಗಿ ಹಾಗೂ ತ್ವರಿತವಾಗಿ ನ್ಯಾಯ ದೊರೆಯುವ ನಿಟ್ಟಿನಲ್ಲಿ ನ್ಯಾಯಾಂಗ ವ್ಯವಸ್ಥೆ ಕಾರ್ಯನಿರ್ವಹಿಸುವತ್ತ ಗಮನಹರಿಸಬೇಕು. ನಮ್ಮ ದೇಶದಲ್ಲಿ ನ್ಯಾಯಾಂಗದ ಪಾತ್ರವು ಸಂವಿಧಾನದ ರಕ್ಷಕರದ್ದಾಗಿದೆ. ಶಾಸಕಾಂಗವು ನಾಗರಿಕರ ಆಕಾಂಕ್ಷೆಗಳನ್ನು ಪ್ರತಿನಿಧಿಸುತ್ತದೆ. ಇವೆರಡರ ಸಂಗಮವು ಪರಿಣಾಮಕಾರಿ ಮತ್ತು ಕಾಲಮಿತಿಯ ನ್ಯಾಯಾಂಗ ವ್ಯವಸ್ಥೆಗೆ ಮಾರ್ಗಸೂಚಿಯನ್ನು ಸಿದ್ಧಪಡಿಸುತ್ತದೆ ಎಂದು ತಾವು ನಂಬುವುದಾಗಿ ಹೇಳಿದರು.

ನ್ಯಾಯಾಲಯದ ಘನತೆ, ಗೌರವ ಕಾಪಾಡಬೇಕು: ನ್ಯಾಯಾಲಯಗಳು ನ್ಯಾಯದ ದೇಗುಲಗಳಾಗಿರುವುದರಿಂದ ಅಲ್ಲಿ ಭಯ ಮುಕ್ತ ವಾತಾವರಣ ಇರಬೇಕು. ನ್ಯಾಯದ ಘನತೆ, ಗೌರವವನ್ನು ನ್ಯಾಯ ದೇಗುಲಗಳಲ್ಲಿ ಎತ್ತಿ ಹಿಡಿಯಬೇಕು ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಅಭಿಪ್ರಾಯಪಟ್ಟರು.

ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕೆಲವು ಜಿಲ್ಲಾ ನ್ಯಾಯಾಲಯಗಳ ಪರಿಸ್ಥಿತಿ ಹೇಗಿದೆಯೆಂದರೆ ಮಹಿಳಾ ನ್ಯಾಯಾಧೀಶರೇ ಕೋರ್ಟ್ ಹಾಲ್ ಪ್ರವೇಶಿಸಲು ಹೆದರುವಂತಿದೆ ಎಂದು ಆತಂಕ ವ್ಯಕ್ತಪಡಿಸಿದರು. ಇಂತಹ ಪರಿಸ್ಥಿತಿಯನ್ನು ಹೋಗಲಾಡಿಸಬೇಕಾಗಿರುವುದು ಅತ್ಯಗತ್ಯ ಎಂದ ಅವರು, ನ್ಯಾಯಾಲಯಗಳಲ್ಲಿ ಈಗಿರುವ ಮೂಲಭೂತ ಸೌಕರ್ಯಗಳು ಮತ್ತು ಜನರಿಗೆ ದೊರೆಯಬೇಕಾದ ನ್ಯಾಯದ ಅಗತ್ಯತೆ ಬಗ್ಗೆ ವಿಶಾಲ ಅಂತರವಿದೆ. ನ್ಯಾಯಾಂಗದ ಮೂಲ ಸೌಕರ್ಯವನ್ನು ಪ್ರಮಾಣೀಕರಿಸಲು ಹಾಗೂ ಸುಧಾರಿಸಲು ರಾಷ್ಟ್ರೀಯ ನ್ಯಾಯಾಂಗ ಮೂಲ ಸೌಕರ್ಯ ಪ್ರಾಧಿಕಾರ ಬೇಕು. ಈ ಪ್ರಾಧಿಕಾರವು ಪ್ರಸ್ತುತ ಸಾಲಿನಲ್ಲಿ ರಾಜ್ಯ ನ್ಯಾಯಾಂಗ ಮೂಲ ಸೌಕರ್ಯ ಪ್ರಾಧಿಕಾರಗಳ ಮೇಲೆ ಗಮನ ಹರಿಸಬೇಕಾದ ಅಗತ್ಯವಿದೆ. ಮೂಲ ಸೌಕರ್ಯ ಒದಗಿಸಲು ಹಣದ ಕೊರತೆಯೇನಿಲ್ಲ. ಕೇಂದ್ರ ಸರ್ಕಾರ ಪ್ರಾಯೋಜಿತ ಯೋಜನೆ ಮೂಲಕ ಈ ಉದ್ದೇಶಕ್ಕಾಗಿ ಬಜೆಟ್‌ನಲ್ಲಿ ಹಣ ಮೀಸಲಿಟ್ಟಿದೆ. 1993–94ರಲ್ಲಿ ಯೋಜನೆ ಪ್ರಾರಂಭವಾದಾಗಿನಿಂದ ಕಾರ್ಯವಿಧಾನದ ಕೊರತೆಯಿಂದ ಮಂಜೂರು ಮಾಡಿದ ಹಣ ಕಡಿಮೆ ಬಳಕೆಯಾಗುತ್ತಿದೆ. ಪ್ರಸ್ತುತ ತಾತ್ಕಾಲಿಕ ಸಮಿತಿಗಳಿಂದ ಹೆಚ್ಚು ವ್ಯವಸ್ಥಿತ, ಜವಾಬ್ದಾರಿಯುತ ಹಾಗೂ ಸಂಘಟನಾ ಸಮಿತಿಗಳನ್ನು ರಚಿಸುವ ಅಗತ್ಯವಿದೆ ಎಂದು ಅವರು ಹೇಳಿದರು.

ಶೇ.90 ಕಡಿಮೆ

ಗ್ರಾಮಾಂತರ ಪ್ರಮುಖರ ಸಭೆಯಲ್ಲಿ ಮಾತನಾಡಿದ ಅವರು, ಬಿಜೆಪಿಯಲ್ಲಿ ಅಪಾರ ಪ್ರಾಮುಖ್ಯತೆ, ಪಕ್ಷತೆ ಇದೆ. ಬದಲಾವಣೆ ಹಾಗೂ ಸುಧಾರಣೆಗೆ ಕ್ರಮ ಕೈಗೊಳ್ಳುವ ಧೈರ್ಯ ಹಾಗೂ ವಿಶ್ವಾಸ ಪಕ್ಷದಲ್ಲಿದೆ. ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಜಿಲ್ಲೆಯಲ್ಲಿ ಹೆಚ್ಚಿ ಸ್ಥಾನ ಗೆಲ್ಲುವ ಮೂಲಕ ಪಕ್ಷಕ್ಕೆ ಬಹುಮತ ತಂದುಕೊಡಬೇಕು. ಇಲ್ಲಿನ 11 ಕ್ಷೇತ್ರದಲ್ಲೂ ಪ್ರಬಲ ಪೈಪೋಟಿ ನೀಡಿ, 9 ಕ್ಷೇತ್ರದಲ್ಲಾದರೂ ಗೆದ್ದು ಸಾಧನೆ ಮಾಡಬೇಕಿದೆ ಎಂದರು.

ಜಿಲ್ಲೆಯಲ್ಲಿ 30–40 ಮಂದಿ ಟಿಕೆಟ್ ಆಕಾಂಕ್ಷಿಗಳಿರಬಹುದು. ಆದರೆ ತಳಮಟ್ಟದ ಸಂಘಟನೆಯನ್ನು ಯಾವ ಕಾರಣಕ್ಕೂ ಇಬ್ಭಾಗ ಮಾಡಬೇಡಿ. ಹಾಲಿ ಶಾಸಕರು 2018ರ ಚುನಾವಣೆಯಲ್ಲಿ ತಮ್ಮ ಜೊತೆ ಕೆಲಸ ಮಾಡಿ, ಈಗ ದೂರವಾಗಿರುವ ಕಾರ್ಯಕರ್ತರ ಪಟ್ಟಿ ಮಾಡಿ, ಅದು ದೊಡ್ಡದಿರುತ್ತದೆ. ಕಾರ್ಯಕರ್ತರನ್ನು ಕಳೆದುಕೊಳ್ಳುವ ಹಕ್ಕು ಯಾರಿಗೂ ಇಲ್ಲ. ಈ ಕಾರ್ಯಕರ್ತ ಜೊತೆಯಲ್ಲಿ ಇಲ್ಲದಿದ್ದರೂ ಸಮಸ್ಯೆಯಿಲ್ಲ ಎನ್ನುವ ಉಡಾಫೆ ಬೇಡ. ಸಾಧ್ಯವಾದರೆ ನಿಮ್ಮ ಹಂತದಲ್ಲೇ ಸರಿಪಡಿಸಿಕೊಳ್ಳುವ ಪ್ರಯತ್ನ ಮಾಡಿ. ಇಲ್ಲವೇ ನಾಯಕರ ಗಮನಕ್ಕೆ ತನ್ನಿ, ಮತ್ತೆ ಕೆಲವರನ್ನು ಕಾಲವೇ ಸರಿಪಡಿಸುತ್ತದೆ ಎಂದರು.

ಸರ್ಟಿಫಿಕೇಟ್ ಅಗತ್ಯವಿಲ್ಲ: ಕಾಂಗ್ರೆಸ್‌ನಲ್ಲಿ ಯುವ ನಾಯಕರೆಂದರೆ ಸಿದ್ದರಾಮಯ್ಯ, ಜಾಫರ್ ಷರೀಫ್, ಹ್ಯಾರಿಸ್ ಮಕ್ಕಳನ್ನು ತೋರಿಸಬೇಕಷ್ಟೇ. ಇವರೆಲ್ಲಾ ಕುಟುಂಬದಿಂದ ಬಂದವರೇ ಹೊರತು ಸಮಾಜದ ನಡುವಿನಿಂದ ನಾಯಕರಾಗಿ ಬೆಳೆದಿಲ್ಲ. ಹೀಗೆ ಶಿವಸೇನೆ, ಸಮಾಜವಾದಿ ಇನ್ನಿತರ ಪಕ್ಷಗಳಲ್ಲಿ ಸ್ಥಾನ ಪಡೆಯಬೇಕಾದರೆ ಬರ್ತ್ ಸರ್ಟಿಫಿಕೇಟ್ ಅಥವಾ ಮ್ಯಾರೇಜ್ ಸರ್ಟಿಫಿಕೇಟ್ ನೀಡಬೇಕು. ಅಂದರೆ ನಾಯಕನ ಮಗನಾಗಿರಬೇಕು ಇಲ್ಲವೇ ಅಂತಹವರ ಮನೆ ಅಳಿಯನಾಗಿರಬೇಕು. ಆದರೆ ದೇಶದಲ್ಲಿರುವ ಬಿಜೆಪಿ ಮುಖ್ಯ ಮಂತ್ರಿಗಳ ಸರಾಸರಿ ವಯಸ್ಸು 56 ವರ್ಷ. ಇವರಲ್ಲಿ 4 ಜನ 50 ವರ್ಷದೊಳಗಿದ್ದಾರೆ. ಇನ್ನು ಸಚಿವರ ಸರಾಸರಿ ವಯಸ್ಸು 57 ವರ್ಷ. ಇವರಲ್ಲಿ ಶೇ.99.9 ಮಂದಿ ಈ ರೀತಿಯ ನಿಶ್ಚಿತ ಕುಟುಂಬಕ್ಕೆ ಸೇರಿದವರಲ್ಲ. ಗುಜರಾತ್‌ನಲ್ಲಿ ಮುಖ್ಯಮಂತ್ರಿಯೊಂದಿಗೆ ಇಡೀ ಸಚಿವ ಸಂಪುಟವೇ ಬದಲಾಯಿತು. ಅಲ್ಲಿನ ಸ್ಥಳೀಯ ಸಂಸ್ಥೆಯಲ್ಲಿ 2 ಬಾರಿ ಆಯ್ಕೆಯಾದವರನ್ನು ಕೈಬಿಟ್ಟು ಹೊಸಬರಿಗೆ ಅವಕಾಶ ನೀಡಲಾಯಿತು. ನಮ್ಮ ಪಕ್ಷದಲ್ಲಿ ಕಾರ್ಯಕರ್ತರೇ ಯುವ ನಾಯಕರು. ಇಂತಹ ಪರಿಣಾಮಕಾರಿ ಕ್ರಮ ಕೈಗೊಳ್ಳುವ ಧೈರ್ಯ ಹಾಗೂ ತಾಕತ್ತು ಬಿಜೆಪಿಗೆ ಇದೆ ಎನ್ನುವ ಮೂಲಕ ವಿರೋಧ ಪಕ್ಷದವರ ಜೊತೆಗೆ ತಮ್ಮದೇ ಪಕ್ಷದ ಜನಪ್ರತಿನಿಧಿಗಳು ಹಾಗೂ ನಾಯಕರಿಗೆ ಸೂಚ್ಯವಾಗಿ ಎಚ್ಚರಿಕೆ ನೀಡಿದರು.

ಜಂಗಮಕ್ಕೆ ಅಳಿವಿಲ್ಲ: ಸ್ಥಾವರಕ್ಕಳಿವುಂಟು ಜಂಗಮಕ್ಕೆ ಅಳಿವಿಲ್ಲ ಎನ್ನುವಂತೆ ಯಾವುದು ಬದಲಾಗುತ್ತದೆಯೋ ಅದು ನಾಶವಾಗುವುದಿಲ್ಲ. ಈ ನಿಟ್ಟಿನಲ್ಲಿ ಬಿಜೆಪಿಯು ಬದಲಾವಣೆ ಚಕ್ರ ಮುಂದುವರೆಸಿದೆ. ಮೇಲಿನ ವ್ಯವಸ್ಥೆ ಸರಿಯಾಗಿದ್ದರೆ ತಳ ಹಂತದಲ್ಲೂ ಸರಿಯಾಗಿರುತ್ತದೆ. ಜನರ ಆಶೋತ್ತರ, ನಿರೀಕ್ಷೆಗೆ ತಕ್ಕಂತೆ ಬದಲಾಗಬೇಕಾಗುತ್ತದೆ. ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ, ನಡ್ಡಾ ಸೇರಿದಂತೆ ಹಲವು ನಾಯಕರು ರಾಜಕೀಯ ಕುಟುಂಬದ ಹಿನ್ನೆಲೆಯಿಲ್ಲ, ಅವರೆಲ್ಲಾ ಬಡ ಹಾಗೂ ಮಧ್ಯಮ ಕುಟುಂಬದವರು. ಸ್ವಂತ ಪರಿಶ್ರಮದಿಂದ ಬೆಳೆದು ಬಂದವರು. ಪ್ರಚಾರಕರಾಗಿದ್ದ ಮೋದಿ ಮುಖ್ಯಮಂತ್ರಿಯಾಗಿ, ಪ್ರಧಾನಿಯಾಗಿದ್ದಾರೆ ಎನ್ನುವ ಉದಾಹರಣೆಯೊಂದೇ ಸಾಕು. ನೀವೂ ಈ ಸಾಧಕರ ಶ್ರೇಣಿಯಲ್ಲಿ ಸೇರಬೇಕಾದರೆ ಅವರಂತೆಯೇ ಶ್ರಮಿಸಬೇಕು ಎಂದು ಸಲಹೆ ನೀಡಿದರು.

ಮೋದಿ ಮಾತಿನಂತೆ ನಡೆದಿದ್ದಾರೆ: ಮೋದಿ ಅವರು 2014ರ ಆಗಸ್ಟ್‌ನಲ್ಲಿ ಬೆಂಗಳೂರಿಗೆ ಬಂದಿದ್ದಾಗ '5 ವರ್ಷದ ನಂತರ ಮತ್ತೆ ಜನರ ಬಳಿ ಓಟು ಕೇಳಲು ಹೋದಾಗ ನಿಮಗೆ ಸಂಕೋಚವಾಗದಂತೆ ಹಾಗೂ ಜಗತ್ತಿನ ಯಾವ ಮೂಲೆಯಲ್ಲಿದ್ದರೂ ನಾನು ಭಾರತೀಯ ಎಂದು ಗರ್ವದಿಂದ ಹೇಳಿಕೊಳ್ಳುವಂತೆ ನಾನು ಕಾರ್ಯ ನಿರ್ವಹಿಸುತ್ತೇನೆ' ಎಂದು ವಾಗ್ದಾನ ನೀಡಿದ್ದರು. ಅದು ಸತ್ಯವಾಗಿದೆ. ಜಗತ್ತಿನಲ್ಲಿ ಭಾರತಕ್ಕೆ ಗೌರವ ಹೆಚ್ಚಿದೆ. ಹೆಮ್ಮೆಯಿಂದ ಮತಯಾಚಿಸುವ ಪರಿಸ್ಥಿತಿ ಇದೆ. ಉಕ್ರೇನ್–ರಷ್ಯಾ ರಾಷ್ಟ್ರಗಳು 2 ಬಾರಿ ಕೆಲ ಗಂಟೆ ಯುದ್ಧಕ್ಕೆ ವಿರಾಮ ನೀಡಿ, ಭಾರತೀಯರ ರಕ್ಷಣೆಗೆ ಅವಕಾಶ ನೀಡಿದ್ದರು. ಉಭಯ ರಾಷ್ಟ್ರಾಧ್ಯಕ್ಷರು ಎಂದೂ ದೇಶದ ಪ್ರಧಾನಿಯೊಂದಿಗೆ ಮಾತುಕತೆ ನಡೆಸಿದ್ದಾರೆ ಎಂದರೆ ಅದು ಮೋದಿ ಅವರೊಂದಿಗೆ ಮಾತ್ರ. 'ಮಿಷನ್ ಕರ್ಮಯೋಗಿ' ಮೂಲಕ ಸರ್ಕಾರಿ ಅಧಿಕಾರಿಗಳು ಹಾಗೂ ಸಿಬ್ಬಂದಿಯ ಮಾನವ ಸಂವೇದನೆ ಜಾಗೃತಗೊಳಿಸಿ ಅವರ ಕಾರ್ಯ ರೀತಿಯನ್ನು ಸುಧಾರಿಸುವ ಪ್ರಯತ್ನ ನಡೆದಿದೆ. ಸರ್ಕಾರಿ ಸಂಸ್ಥೆಗಳಲ್ಲಿ ಕೊರೊನಾ ವ್ಯಾಕ್ಸಿನ್ ಪಡೆಯಲು ಯಾರೂ ಲಂಚ ನೀಡಿಲ್ಲ, ಲಾಠಿ ಪ್ರಹಾರವಾಗಿಲ್ಲ, ಪ್ರಭಾವಿಗಳ ಉಪಟಳವಿರಲಿಲ್ಲ. ಕೇಂದ್ರೀಯ ವಿದ್ಯಾಲಯದಲ್ಲಿದ್ದ ಸುಮಾರು 40 ಸಾವಿರ ಸೀಟುಗಳ ಕೋಟಾ ರದ್ದುಪಡಿಸಲಾಗಿದೆ. ಹೀಗೆ ಹಂತಹಂತವಾಗಿ ವ್ಯವಸ್ಥೆ ಸರಿಪಡಿಸಲಾಗುತ್ತಿದೆ ಎಂದು ತಿಳಿಸಿದರು.

ಮೈ ಮರೆಯಬಾರದು: ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿ, ಏಕಚಕ್ರಾಧಿಪತ್ಯಕ್ಕೆ ಹವಣಿಸಿದ್ದು ಕಾಂಗ್ರೆಸ್ ಮಾತ್ರ ಇದನ್ನು ವಿಪಕ್ಷ ನಾಯಕ ಸಿದ್ದರಾಮಯ್ಯ ಅವರಿಗೆ ಪದೇ ಪದೇ ನೆನಪು ಮಾಡಿಕೊಡಬೇಕು. ತುರ್ತು ಪರಿಸ್ಥಿತಿಯಲ್ಲಿ ಹೋರಾಟ ನಡೆಸಿದವರ ಮನೆಗೆ ಹೋಗಿ ತಿಳಿದುಕೊಳ್ಳಬೇಕು. ಜನ ಒಪ್ಪುವ ರೀತಿಯಲ್ಲಿ ಆಡಳಿತ ನಡೆಸುತ್ತಿರುವ ಕಾರಣಕ್ಕೆ ಪಂಚರಾಜ್ಯಗಳ ಚುನಾವಣೆಯಲ್ಲಿ ಸಾಧನೆ ಸಾಧ್ಯವಾಯಿತು. 4 ರಾಜ್ಯಗಳಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದಿತು. 8–10 ವರ್ಷಗಳಿಂದ ಕಾರ್ಯಕರ್ತರು ಮೈಮರೆಯದೆ ಸಂಘಟನೆಯಲ್ಲಿ ತೊಡಗಿರುವ ಪ್ರತಿಫಲವೇ ಚುನಾವಣೆಗಳ ಗೆಲುವು. ವ್ಯಕ್ತಿಗತ ಆಕಾಂಕ್ಷೆಯನ್ನು ಬದಿಗೊತ್ತಿ ದೇಶಕ್ಕಾಗಿ ಕನಸು ಹೊತ್ತಿರುವ ಕಾರ್ಯಕರ್ತರ ಸಂಖ್ಯೆ ಬಹಳಷ್ಟಿದೆ. ಆದರೆ ಕಾಂಗ್ರೆಸ್‌ನವರು ಅಧಿಕಾರವನ್ನು ಅನುಭವಿಸುತ್ತ ಜನರಿಂದ ದೂರವಾದರು. 32 ವರ್ಷಗಳಿಂದ ಸೋನಿಯಾ ಗಾಂಧಿ ಹಾಗೂ ರಾಹುಲ್‌ಗಾಂಧಿ ಮಾತ್ರ ಕಾಂಗ್ರೆಸ್ ಅಧ್ಯಕ್ಷರಾಗಿದ್ದಾರೆ. ಈ ಅವಧಿಯಲ್ಲಿ ಬಿಜೆಪಿ ಐದಾರು ಅಧ್ಯಕ್ಷರನ್ನು ಕಂಡಿದೆ. ರಾಜಕೀಯದಲ್ಲಿ ಉಳಿಯಬೇಕಾದರೆ ಅಧಿಕಾರ ವಿಕೇಂದ್ರೀಕರಣ ಹಾಗೂ ಬದಲಾವಣೆ ಮುಖ್ಯವಾಗುತ್ತದೆ ಎಂದರು.

ಸಂಸದ ಪ್ರತಾಪ್ ಸಿಂಹ ಹಾಗೂ ವಕ್ತಾರ ಎಂ.ಜಿ. ಮಹೇಶ್ ಮಾತನಾಡಿ, ದಕ್ಷಿಣ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ಬೆಂಬಲ ಕೋರಿದರು. ಸಂಸದ ವಿ.ಶ್ರೀನಿವಾಸ ಪ್ರಸಾದ್, ಮೇಯರ್ ಸುನಂದಾ ಪಾಲನೇತ್ರ, ಶಾಸಕರಾದ ಎಲ್.ನಾಗೇಂದ್ರ, ಹರ್ಷವರ್ಧನ್, ಬಿಜೆಪಿ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ, ನಗರಾಧ್ಯಕ್ಷ ಶ್ರೀವತ್ಸ, ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಮಂಡ್ಯ ಜಿಲ್ಲಾಧ್ಯಕ್ಷ ವಿಜಯ್‌ಕುಮಾರ್, ಎಂಎಲ್‌ಸಿ ತುಳಸಿಮುನಿರಾಜು ಗೌಡ, ಮಾಜಿ ಎಂಎಲ್‌ಸಿ ತೋಂಟದಾರ್ಯ, ಡಾ.ಭಾರತಿ ಶಂಕರ್, ಮಾಜಿ ಸಂಸದ ಸಿ.ಹೆಚ್.ವಿಜಯಶಂಕರ್, ಅಶ್ವತ್‌ನಾರಾಯಣ್, ರಘು ಆರ್.ಕೌಟಿಲ್ಯ, ಸಂದೇಶ್‌ಸ್ವಾಮಿ, ಹೇಮಂತ್‌ಕುಮಾರ್, ಎನ್.ವಿ.ಫಣೀಶ್, ಅಪ್ಪಣ್ಣ, ಡಾ.ಚಂದ್ರಶೇಖರ್ ಸೇರಿದಂತೆ ಅನೇಕ ಮುಖಂಡರು ಪಾಲ್ಗೊಂಡಿದ್ದರು.

ಸರ್ಕಾರ ಗ್ರೀನ್ ಸಿಗ್ನಲ್

ಸುಧಾರಣೆ ಇಲಾಖೆ ಸರ್ಕಾರದ ಅಧೀನ ಕಾರ್ಯದರ್ಶಿ ನಡವಳಿ ಹೊರಡಿಸಿದ್ದು, ಸರ್ಕಾರಿ ನೌಕರರ ವರ್ಗಾವಣೆ ಕುರಿತು ವಿಸ್ತೃತವಾದ ಮಾರ್ಗಸೂಚಿಗಳನ್ನು ನೀಡಲಾಗಿದೆ. ಈ ಮಾರ್ಗಸೂಚಿಗಳ ಪ್ರಕಾರ ಸರ್ಕಾರಿ ನೌಕರರ ವರ್ಗಾವಣೆಗಳನ್ನು ಪ್ರತಿ ವರ್ಷ ಮೇ 1ರಿಂದ ಮತ್ತು ಜೂ.15ರವರೆಗೆ ಮಾತ್ರ ಷರತ್ತುಗಳಿಗೆ ಒಳಪಟ್ಟಿರುತ್ತವೆ. 2022–23ನೇ ಸಾಲಿಗೆ ಗ್ರೂಪ್–ಎ, ಗ್ರೂಪ್–ಬಿ, ಗ್ರೂಪ್ ಸಿ ಮತ್ತು ಗ್ರೂಪ್–ಡಿ ವರ್ಗದ ಅಧಿಕಾರಿ, ನೌಕರರ ಅನ್ವಯವಾಗುವಂತೆ ಒಂದು ಜೇಷ್ಠತಾ ಘಟಕದಲ್ಲಿ ಕಾರ್ಯನಿರತ ವೃಂದ ಬಲದ ಶೇ.6ನ್ನು ಮೀರದಂತೆ ಸಾರ್ವತ್ರಿಕ ವರ್ಗಾವಣೆ ಕೈಗೊಳ್ಳಲು ಅನುಮತಿ ನೀಡಲಾಗಿದೆ. ಸಚಿವರಿಗೆ ವರ್ಗಾವಣೆ ಹೊಣೆಗಾರಿಕೆ: 2022–23ನೇ ಸಾಲಿನ ಗ್ರೂಪ್–ಎ, ಗ್ರೂಪ್–ಬಿ, ಗ್ರೂಪ್ ಸಿ ಮತ್ತು ಗ್ರೂಪ್–ಡಿ ವರ್ಗದ ಅಧಿಕಾರಿ, ನೌಕರರ ವರ್ಗಾವಣೆ ಹೊಣೆಯನ್ನು ಆಯಾ ಇಲಾಖೆ ಸಚಿವರಿಗೆ ವಹಿಸಲಾಗಿದೆ ಎಂದು ಹೇಳಲಾಗಿದೆ.

'ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ದೃಷ್ಟಿಯಲ್ಲಿ ಸಮಾನತೆ– ಸ್ವಾಭಿಮಾನ– ಸ್ವಾವಲಂಬನೆ' ವಿಶೇಷ ಉಪನ್ಯಾಸ

ಗಾಂಧಿ, ನೆಹರು, ಬೋಸ್, ಪಟೇಲ್... ಎಲ್ಲರೂ ನಾಯಕರೇ, ಆದರೆ ಅವರ್‍ಯಾರೂ ಡಾ.ಅಂಬೇಡ್ಕರ್‌ರಷ್ಟು ನೋವುಂಡು ಬೆಳೆದವರಲ್ಲ

ಸಂಸದ ವಿ.ಶ್ರೀನಿವಾಸಪ್ರಸಾದ್ ಅಭಿಮತ

ಮೈಸೂರು, ಏ.30(ಆರ್‌ಕೆಬಿ)– ಮಹಾತ್ಮ ಗಾಂಧಿ, ಜವಾಹರಲಾಲ್ ನೆಹರು, ಸುಭಾಷ್ ಚಂದ್ರ ಬೋಸ್, ಸರ್ದಾರ್ ವಲ್ಲಭಬಾಯಿ ಪಟೇಲ್ ಹೀಗೆ ಎಲ್ಲರೂ ನಮ್ಮ ನಾಯಕರೇ. ಆದರೆ ಅವರ್‍ಯಾರೂ ಡಾ.ಬಿ.ಆರ್. ಅಂಬೇಡ್ಕರ್ ಅವರು ಅನುಭವಿಸಿದ ರೀತಿಯಲ್ಲಿ ನೋವನ್ನು ಉಂಡು ಬೆಳೆದವರಲ್ಲ. ಹಾಗಾಗಿಯೇ ಅಂಬೇಡ್ಕರ್ ಅವರು ಮಹಾನಾಯಕರಾದರು ಎಂದು ಚಾಮರಾಜನಗರ ಸಂಸದ ವಿ.ಶ್ರೀನಿವಾಸಪ್ರಸಾದ್ ತಿಳಿಸಿದರು.

ಮೈಸೂರಿನ ಮಾನಸಗಂಗೋತ್ರಿ, ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ವಿಜ್ಞಾನ ಸಭಾಂಗಣದಲ್ಲಿ ಮೈಸೂರಿನ ಸಮಾನತೆ –ಸ್ವಾಭಿಮಾನ– ಸ್ವಾವಲಂಬನೆ ಪ್ರತಿಷ್ಠಾನ ಶನಿವಾರ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ 131ನೇ ಜನ್ಮ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ 'ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಸಮಾನತೆ– ಸ್ವಾಭಿಮಾನ– ಸ್ವಾವಲಂಬನೆ' ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ ಬದುಕಿನ 65 ವರ್ಷಗಳೂ ಸಾರ್ಥಕ ಹೋರಾಟದ ಬದುಕು. ಅಸ್ಪೃಶ್ಯತೆಯ ನೋವನ್ನು ಉಂಡವರು, ಅಸ್ಪೃಶ್ಯತೆಯನ್ನು ಸ್ವಯಂ ಅನುಭವಿಸಿದವರು. ಹೀಗಾಗಿ ಅದರ ವಿರುದ್ಧ ಸಿಡಿದೆದ್ದವರು. ಬಹುಮುಖ ಪ್ರತಿಭೆಯ ವ್ಯಕ್ತಿತ್ವ, ಆರ್ಥಿಕ ತಜ್ಞ, ಕಾನೂನು ತಜ್ಞ, ರಾಜಕೀಯ ಮುತ್ಸದ್ಧಿ, ಮಾನವ ಶಾಸ್ತ್ರಜ್ಞ, ಸಂವಿಧಾನ ತಜ್ಞ ಹೀಗೆ ಎಲ್ಲ ವಿಷಯದಲ್ಲೂ ತಜ್ಞರಾಗಿ ಶೋಷಿತರ ಬದುಕು ಸರಿದಾರಿಗೆ ತರಲು ಶ್ರಮಿಸಿದ ಬಹು ದೊಡ್ಡ ಮಾನವತಾವಾದಿ. ಅವರ ಮುಖ್ಯ ಸಂದೇಶವನ್ನು ಜನರಿಗೆ ತಿಳಿಸಲೆಂದೇ ಸಮಾನತೆ– ಸ್ವಾಭಿಮಾನ– ಸ್ವಾವಲಂಬನೆ ಪ್ರತಿಷ್ಠಾನ ಸ್ಥಾಪನೆಯಾಗಿದೆ ಎಂದು ಹೇಳಿದರು.

ಸಮಾನತೆ, ಸ್ವಾಭಿಮಾನ, ಸ್ವಾವಲಂಬನೆ ಈ ಮೂರೂ ಇಲ್ಲದವರು ಬದುಕಿದ್ದು ಸತ್ತ ಹಾಗೆ ಎಂದ ಅಂಬೇಡ್ಕರ್, ಸ್ವಾಭಿಮಾನಕ್ಕಾಗಿ ಸಂಘರ್ಷ ಹೂಡಿರುವುದಾಗಿ ಮೊಟ್ಟ ಮೊದಲು ಹೇಳಿದವರು.

ಸಂವಿಧಾನ ರಚನಾ ಸಭೆಗೆ ಸದಸ್ಯರಾಗಿ ಬಂದಾಗ ಅಂಬೇಡ್ಕರ್ ಅವರಿಗೆ ಆಶ್ಚರ್ಯವಾಗುತ್ತದೆ. ಅಂಬೇಡ್ಕರ್ ಸೇರಿ ಏಳು ಮಂದಿ ಪ್ರತಿಭಾವಂತರು ಸಭೆಯಲ್ಲಿ ಭಾಗವಹಿಸುತ್ತಾರೆ. ನಂತರವೇ ದೇಶದ ಲಕ್ಷಾಂತರ ಜನರ, ಬಡವರ, ಅಸ್ಪೃಶ್ಯರ ಆಕಾಂಕ್ಷೆಗಳಿಗೆ ಬೆಳಕು ನೀಡುತ್ತಾರೆ ಅಂಬೇಡ್ಕರ್. ಜಗತ್ತಿನ ಅರಿವೇ ಇಲ್ಲದ ಅಸ್ಪೃಶ್ಯ, ಶೋಷಿತ ಜನಾಂಗಕ್ಕೆ, ಬಂಜರು ಭೂಮಿಯಂತಿದ್ದ ಯಾರಿಗೂ ಬೇಡವಾದ ಜನಾಂಗವನ್ನು ರಾಷ್ಟ್ರದಲ್ಲಿ ಮುಖ್ಯ ವಾಹಿನಿಗೆ ತರಲು ಶ್ರಮಿಸಿದವರು. ಮೊದಲು ಸ್ವಾಭಿಮಾನಿಗಳಾಗಿ, ಕೆಚ್ಚೆದೆಯಿಂದ ಹೋರಾಡಿ, ಇದು ಸಮಾನತೆಗೆ ಪೂರಕವಾದ ಗುರಿ ಎಂದು ಹೇಳಿದ್ದರು. ಭಾರತ ದೇಶಕ್ಕೆ ಒಳ್ಳೆಯದು ಮಾಡಬೇಕೆಂಬ ಮಹದಾಸೆಯಿಂದ ತಂದ ಸಂವಿಧಾನ. ಈ ದೇಶದಲ್ಲಿ ಸಮಾನತೆ ಇದೆಯೇ ಎಂದು ಚಿಂತಿಸಿ, ಸಮಾನತೆ ಅನುಭವಿಸುವ ಸ್ವಾತಂತ್ರ್ಯಕ್ಕಾಗಿ ದುಡಿದವರು ಎಂದು ಶ್ರೀನಿವಾಸಪ್ರಸಾದ್ ತಿಳಿಸಿದರು.



ಮೈಸೂರಿನ ಸಮಾನತೆ–ಸ್ವಾಭಿಮಾನ– ಸ್ವಾವಲಂಬನೆ ಪ್ರತಿಷ್ಠಾನ ಮೈಸೂರಿನಲ್ಲಿ ಏರ್ಪಡಿಸಿದ್ದ 'ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಸಮಾನತೆ– ಸ್ವಾಭಿಮಾನ– ಸ್ವಾವಲಂಬನೆ' ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮಕ್ಕೆ ಸಂಸದ ವಿ.ಶ್ರೀನಿವಾಸಪ್ರಸಾದ್ ಚಾಲನೆ ನೀಡಿದರು. ಚಿತ್ರದಲ್ಲಿ ಪ್ರತಿಷ್ಠಾನದ ಗೌರವಾಧ್ಯಕ್ಷ ಡಾ.ನೀಲಗಿರಿ ತಳವಾರ, ನಿವೃತ್ತ ರಾಜ್ಯಶಾಸ್ತ್ರ ಪ್ರಾಧ್ಯಾಪಕ ಪ್ರೊ.ಎಂ.ಉಮಾಪತಿ, ಕಾನೂನು ಪ್ರಾಧ್ಯಾಪಕ ಪ್ರೊ.ಸಿ.ಬಸವರಾಜು ಇನ್ನಿತರರನ್ನು ಕಾಣಬಹುದು.

> ಇಷ್ಟೆಲ್ಲಾ ಅಂಬೇಡ್ಕರ್ ಹೋರಾಟ ನಡೆಸಿದರೂ, ಇಂದಿಗೂ ಅಸ್ಪೃಶ್ಯತೆ ಆಚರಣೆ ಹೋಗಿಲ್ಲ. ನ್ಯಾಯಾಧೀಶರೊಬ್ಬರು ಅಂಬೇಡ್ಕರ್ ಭಾವಚಿತ್ರ ತೆಗೆಸುತ್ತಾರೆ, ದೇವಸ್ಥಾನಕ್ಕೆ ಹೋದ ಬಾಲಕನೊಬ್ಬನಿಗೆ ದಂಡ ಹಾಕಲಾಗುತ್ತದೆ ಎಂದರೆ ಈ ದೇಶ ಎತ್ತ ಸಾಗುತ್ತಿದೆ.
> – ವಿ.ಶ್ರೀನಿವಾಸಪ್ರಸಾದ್, ಸಂಸದ

ಅಂಬೇಡ್ಕರ್ ಅವರ ಕನಸು ನನಸು ಮಾಡುವ ಗುರಿಯನ್ನು ನಾವೆಲ್ಲರೂ ಹೊಂದಬೇಕು. ಸಮಾನತೆ, ಸ್ವಾಭಿಮಾನ, ಸ್ವಾವಲಂಬನೆ ಕುರಿತು ಅದರ ಬಗ್ಗೆ ಚಿಂತನೆ ನಡೆಸಿ, ಅಸ್ಪೃಶ್ಯತೆಯನ್ನು ನಾಶ ಮಾಡುವ ಗುರಿಯೊಂದಿಗೆ ಸಮಾನತೆ– ಸ್ವಾಭಿಮಾನ– ಸ್ವಾವಲಂಬನೆ ಪ್ರತಿಷ್ಠಾನ ಹುಟ್ಟಿಕೊಂಡಿದೆ ಎಂದರು.

ಎಲ್ಲಿಯವರೆಗೆ ಆ ಕೆಚ್ಚು ನಮ್ಮಲ್ಲಿ ಬರುವುದಿಲ್ಲವೋ ಅಲ್ಲಿಯವರೆಗೂ ನಾವು ಮಲಗಿರಬೇಕಾಗುತ್ತದೆ. ಆ ನಿಟ್ಟಿನಲ್ಲಿ ಪ್ರತಿಷ್ಠಾನ ಎಲ್ಲರನ್ನು ಬಡಿದೆಬ್ಬಿಸಲಿ. ಅಂಬೇಡ್ಕರ್ ವಿಚಾರಗಳನ್ನು ಚಿಂತನೆಗೆ ಹಚ್ಚುವ ಮೂಲಕ ಅಂಬೇಡ್ಕರ್ ವಿಚಾರಧಾರೆಗಳನ್ನು ಜನರಿಗೆ ಮುಟ್ಟಿಸುವ ನಿಟ್ಟಿನಲ್ಲಿ ಪ್ರಯತ್ನಿಸಲಿದೆ ಎಂದು ಹೇಳಿದರು.

ನಿವೃತ್ತ ರಾಜ್ಯಶಾಸ್ತ್ರ ಪ್ರಾಧ್ಯಾಪಕ ಪ್ರೊ.ಎಂ. ಉಮಾಪತಿ ಅವರು 'ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಸಮಾನತೆ–ಸ್ವಾಭಿಮಾನ, ಸ್ವಾವಲಂಬನೆ' ಕುರಿತು ಉಪನ್ಯಾಸ ನೀಡಿದರು. ಮೈಸೂರು ವಿವಿ ಕಾನೂನು ಪ್ರಾಧ್ಯಾಪಕ ಪ್ರೊ.ಸಿ.ಬಸವರಾಜು ಪ್ರಾಸ್ತಾವಿಕವಾಗಿ ಮಾತನಾಡಿದರು. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿವೃತ್ತ ಪ್ರಾಧ್ಯಾಪಕ ಡಾ.ನೀಲಗಿರಿ ತಳವಾರ ಅಧ್ಯಕ್ಷತೆ ವಹಿಸಿದ್ದರು. ಪ್ರತಿಷ್ಠಾನದ ಪದಾಧಿಕಾರಿಗಳಾದ ಪಿ.ನಂದಕುಮಾರ್, ಮುಳ್ಳೂರು ನಂಜುಂಡಸ್ವಾಮಿ, ಡಾ.ಎಲ್.ರಾಜಶೇಖರಯ್ಯ, ಭರತ್ ರಾಮಸ್ವಾಮಿ, ಸಿ.ಜಿ.ಶಿವಕುಮಾರ್, ಡಿ.ವೆಂಕಟರಾಜು, ಕುಂಬ್ರಳ್ಳಿ ಸುಬ್ಬಣ್ಣ, ಶಿವಣ್ಣ ಉಪಸ್ಥಿತರಿದ್ದರು.

ಕೆ.ಆರ್.ಕ್ಷೇತ್ರದಲ್ಲಿ ದಾಖಲೆ ಕಾಂಗ್ರೆಸ್ ಸದಸ್ಯತ್ವ ನೋಂದಣಿ



ಮೈಸೂರು, ಏ.30(ಆರ್‌ಕೆಬಿ)– ಕಳೆದ ಆರು ತಿಂಗಳಿನಿಂದ ನಡೆದ ಕಾಂಗ್ರೆಸ್ ಪಕ್ಷದ ಸದಸ್ಯತ್ವ ನೋಂದಣಿ ಅಭಿಯಾನದಲ್ಲಿ ಅತೀ ಹೆಚ್ಚು ಸದಸ್ಯತ್ವ ನೋಂದಾಯಿಸಿದ ತಂಡವಾಗಿ ಕೃಷ್ಣರಾಜ ಕ್ಷೇತ್ರದ ಕಾಂಗ್ರೆಸ್ ಮುಖಂಡ ಎನ್.ಎಂ. ನವೀನ್‌ಕುಮಾರ್ ತಂಡ ಹೊರ ಹೊಮ್ಮಿದೆ.

ಕಳೆದ ನ.1ರಿಂದ ಏ.15ರವರೆಗೆ ಕಾಂಗ್ರೆಸ್ ಸದಸ್ಯತ್ವ ನೋಂದಣಿ ಕಾರ್ಯಕ್ರಮ ನಡೆದಿತ್ತು. ಇದರಲ್ಲಿ ನವೀನ್‌ಕುಮಾರ್ ಮತ್ತು ತಂಡದವರು ಅತೀ ಹೆಚ್ಚು ಅಂದರೆ 8006 ಸದಸ್ಯತ್ವ ನೋಂದಾಯಿಸಿದ್ದಾರೆ. ಸದಸ್ಯತ್ವ ಶುಲ್ಕವಾಗಿ ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ ಅವರಿಗೆ ತಲಾ ಐದು ರೂಪಾಯಿಯಂತೆ ರೂ.40 ಸಾವಿರ ರೂ. ಡಿಡಿಯನ್ನು ನವೀನ್ ಕುಮಾರ್ ತಂಡ ಹಸ್ತಾಂತರ ಮಾಡಿದೆ.

ಈ ವೇಳೆ ಮಾತನಾಡಿದ ಎನ್.ಎಂ. ನವೀನ್‌ಕುಮಾರ್, ಯುವ ನಾಯಕ, ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಅವರ ಮಾರ್ಗದರ್ಶನದಲ್ಲಿ ನಮ್ಮ ತಂಡವು ಸದಸ್ಯತ್ವ ನೋಂದಣಿ ಅಭಿಯಾನ ನಡೆಸಿತು. ಮೈಸೂರು ನಗರದಲ್ಲಿ ಯುವಶಕ್ತಿಯನ್ನು ಕಾಂಗ್ರೆಸ್ ಪಕ್ಷದತ್ತ ಸೆಳೆದು ಪಕ್ಷವನ್ನು ಬಲ ಪಡಿಸಲು ಈ ನೋಂದಣಿ ಅಭಿಯಾನವು ಅನುಕೂಲಕಾರಿ ಎಂದರು.

ಈ ಸಂದರ್ಭದಲ್ಲಿ ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಪ್ರಧಾನ ಕಾರ್ಯದರ್ಶಿ ಶಿವಣ್ಣ, ಕಾಂಗ್ರೆಸ್ ಮುಖಂಡರಾದ ಮೊಗಣ್ಣಚಾರಿ, ರಾಜೇಂದ್ರ, ಎಂ. ರಾಜೇಶ್, ಹರೀಶ್ ಮೊಗಣ್ಣ, ಪವನ್, ಸಿದ್ದರಾಮು ಇನ್ನಿತರರು ಉಪಸ್ಥಿತರಿದ್ದರು.

ಮೇ 4ರಂದು ಉಚಿತ ಲ್ಯಾಪ್‌ಟಾಪ್ ವಿತರಣೆ

ಮೈಸೂರು,ಏ.30–ಮೈಸೂರು ವಿಶ್ವವಿದ್ಯಾನಿಲಯದ ಹಿಂದುಳಿದ ವರ್ಗಗಳ ಸಂಶೋಧನಾ ವಿದ್ಯಾರ್ಥಿಗಳಿಗೆ ಐಟಿಸಿ ಕಂಪನಿ ವತಿಯಿಂದ ಲ್ಯಾಪ್‌ಟಾಪ್ ವಿತರಣೆ ಕಾರ್ಯಕ್ರಮ ಮೇ 4ರಂದು ನಡೆಯಲಿದೆ. ಮೈಸೂರು ವಿವಿ ಹಿಂದುಳಿದ ವರ್ಗಗಳ ಸಂಶೋಧನಾ ವಿದ್ಯಾರ್ಥಿಗಳ ವೇದಿಕೆ ವತಿಯಿಂದ ಮಾನಸಗಂಗೋತ್ರಿ ವಿಜ್ಞಾನ ಭವನದಲ್ಲಿ ಅಂದು ಬೆಳಗ್ಗೆ 11ಕ್ಕೆ ಕಾರ್ಯಕ್ರಮ ಆಯೋಜಿಸಿದ್ದು, ಸಂಸದ ಪ್ರತಾಪ್ ಸಿಂಹ ಉದ್ಘಾಟನೆ ನೆರವೇರಿಸಲಿದ್ದಾರೆ. ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್, ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ, ಐಟಿಸಿ ಪ್ರತಿನಿಧಿಗಳಾದ ಶ್ರೀನಿವಾಸ ರೆಡ್ಡಿ, ಎ.ಎಸ್. ಪೂರ್ಣೇಶ್, ಸಿಂಡಿಕೇಟ್ ಸದಸ್ಯೆ ಡಾ.ಚೈತ್ರಾ ನಾರಾಯಣ್, ಕುಲಸಚಿವ ಪ್ರೊ.ಆರ್.ಶಿವಪ್ಪ, ಓಬಿಸಿ ಸೆಲ್ ಸಂಯೋಜಕ ಪ್ರೊ.ಬಿ.ವಿ.ಸುರೇಶ್‌ಕುಮಾರ್ ಮತ್ತಿತರರು ಭಾಗವಹಿಸಲಿದ್ದಾರೆ.

ಉದ್ಘಾಟನಾ ಪ್ರಯಾಣದಲ್ಲಿಯೇ ಹಳಿತಪ್ಪಿದ 'ಪುಟಾಣಿ ರೈಲು'

ಪ್ರಹ್ಲಾದ್ ಜೋಷಿ, ಜಗದೀಶ್ ಶೆಟ್ಟರ್ ಅಪಾಯದಿಂದ ಪಾರು

ಹುಬ್ಬಳ್ಳಿ, ಏ. 30– ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಮತ್ತು ಸಚಿವ ಜಗದೀಶ್ ಶೆಟ್ಟರ್ ಅವರಿದ್ದ ಪುಟಾಣಿ ರೈಲೊಂದು ಉದ್ಘಾಟನಾ ಪ್ರಯಾಣದಲ್ಲಿಯೇ ಹಳ್ಳಿ ತಪ್ಪಿರುವ ಘಟನೆ ಹುಬ್ಬಳ್ಳಿಯಲ್ಲಿ ಶನಿವಾರ ನಡೆದಿದೆ. ಹುಬ್ಬಳ್ಳಿಯ ಇಲ್ಲಿನ ಮಹಾತ್ಮಾ ಗಾಂಧಿ ಉದ್ಯಾನದಲ್ಲಿ ಶನಿವಾರ ಚಾಲನೆ ನೀಡಲಾದ ಪುಟಾಣಿ ರೈಲು ಮೊದಲ ಓಟದಲ್ಲಿಯೇ ಹಳಿತಪ್ಪಿದೆ. ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಶಾಸಕ ಜಗದೀಶ ಶೆಟ್ಟರ್, ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಸೇರಿದಂತೆ ಅನೇಕ ಗಣ್ಯರು ಈ ಪುಟಾಣಿ ರೈಲಿನಲ್ಲಿ ಇದ್ದರು. ಇಂದಿರಾ ಗಾಜಿನ ಮನೆ ಆವರಣದಲ್ಲಿ ಸ್ಮಾರ್ಟ್ ಸಿಟಿ ಯೋಜನೆಯಡಿ ಮುಕ್ತಾಯಗೊಂಡ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಸಚಿವ ಜೋಶಿ ಚಾಲನೆ ನೀಡಿ, ಪುಟಾಣಿ ರೈಲಿನಲ್ಲಿ ಪ್ರಯಾಣಿಸಿದ್ದರು. ಐದು ಬೋಗಿಯಿರುವ ರೈಲಿನ ಮೊದಲ ಬೋಗಿಯಲ್ಲಿ ಜೋಶಿ ಮತ್ತು ಗಣ್ಯರು ಪ್ರಯಾಣಿಸಿದ್ದರು. ನೂರು ಮೀಟರ್ ದೂರವಷ್ಟೇ ರೈಲು ಕ್ರಮಿಸಿತ್ತು. ಆಗ ಮೂರನೇ ಬೋಗಿಯ ಗಾಲಿ ಕಂಬಿ ಬಿಟ್ಟು ಕೆಳಗೆ ಜಾರಿದೆ. ಈ ವೇಳೆ ಸ್ಥಳದಲ್ಲಿ ಕೆಲ ಕ್ಷಣ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಆಗ ಭದ್ರತಾ ಸಿಬ್ಬಂದಿ ಮತ್ತು ಪೊಲೀಸರು ಸಚಿವ ಜೋಶಿ ಮತ್ತು ಇತರರನ್ನು ರೈಲಿನಿಂದ ಕೆಳಗಿಳಿಸಿದರು. ಸುಮಾರು 4.2 ಕೋಟಿ ರೂ ವೆಚ್ಚದಲ್ಲಿ ಈ ಪುಟಾಣಿ ರೈಲು ಯೋಜನೆ ಅಭಿವೃದ್ಧಿಪಡಿಸಲಾಗಿದೆ.

ರೈಲು ಬೋಗಿಯಲ್ಲಿ ನೇಣು ಬಿಗಿದುಕೊಂಡು ನವವಿವಾಹಿತ ಆತ್ಮಹತ್ಯೆ

ಮೈಸೂರು, ಏ.30(ಆರ್‌ಕೆ)– ರೈಲು ಬೋಗಿ ಫ್ಯಾನಿಗೆ ನೇಣು ಬಿಗಿದುಕೊಂಡು ನವವಿವಾಹಿತನೋರ್ವ ಆತ್ಮಹತ್ಯೆಗೆ ಶರಣಾಗಿರುವ ಘಟನೆ ಮೈಸೂರು ರೈಲು ನಿಲ್ದಾಣದಲ್ಲಿ ಕಳೆದ ರಾತ್ರಿ ಸಂಭವಿಸಿದೆ. ಮೈಸೂರು ಹೊರವಲಯದ ಹಿನಕಲ್ ನಿವಾಸಿ ಮಹದೇವು ಅವರ ಮಗ ಅರುಣ್(27) ನೇಣಿಗೆ ಶರಣಾದ ಯುವಕ. ಮೂಲತಃ ಚಾಮರಾಜನಗರದವರಾದ ಅರುಣ್ ಖಾಸಗಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದು, ಕಳೆದ ಎರಡು ತಿಂಗಳ ಹಿಂದಷ್ಟೇ ಮದುವೆಯಾಗಿದ್ದರು.

ಶುಕ್ರವಾರ ರಾತ್ರಿ 11.30 ಗಂಟೆಗೆ ಚಾಮರಾಜನಗರದಿಂದ ಮೈಸೂರಿಗೆ ಬಂದಿದ್ದ ರೈಲು ಬೋಗಿಯಲ್ಲಿ ಫ್ಯಾನಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ವಿಷಯ ತಿಳಿದ ರೈಲ್ವೆ ಸಿಬ್ಬಂದಿ ರೈಲ್ವೆ ಪೊಲೀಸ್ ಠಾಣೆಗೆ ಮಾಹಿತಿ ನೀಡಿದರು. ಪೊಲೀಸರು, ಮಹಜರು ನಡೆಸಿ ಮೃತ ದೇಹದ ಬಳಿ ಇದ್ದ ಮೊಬೈಲ್ ಫೋನಿನ ಕಡೇ ಕರೆಯ ನಂಬರ್‌ಗೆ ಕರೆ ಮಾಡಿದಾಗ ಆತ್ಮಹತ್ಯೆ ಮಾಡಿಕೊಂಡ ಯುವಕ ಅರುಣ್ ಎಂಬುದು ತಿಳಿದು ಬಂದಿದೆ.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಪತ್ನಿ, ತಂದೆ, ತಾಯಿ, ಸಂಬಂಧಿಕರು ಹಾಗೂ ಸ್ನೇಹಿತರು ಗೋಳಾಡುತ್ತಿದ್ದ ದೃಶ್ಯ ಕರುಳು ಹಿಂಡುವಂತಿತ್ತು. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ದೇಹವನ್ನು ವಾರಸುದಾರರಿಗೆ ಒಪ್ಪಿಸಿದರು.

ಮದುವೆಯಾದ ಎರಡೇ ತಿಂಗಳಿಗೆ ಗಂಡನನ್ನು ಕಳೆದುಕೊಂಡ ಪತ್ನಿಯ ರೋದನೆ ಮುಗಿಲು ಮುಟ್ಟಿತ್ತು ಶವಾಗಾರದ ಬಳಿ ನೂರಾರು ಮಂದಿ ಜಮಾಯಿಸಿದ್ದರು. ಚೆನ್ನಾಗಿಯೇ ಇದ್ದ ಅರುಣ್ ಆತ್ಮಹತ್ಯೆಗೆ ಕಾರಣ ಏನೆಂದು ತಿಳಿಯುತ್ತಿಲ್ಲವೆಂದು ಸಂಬಂಧಿಕರು ತಿಳಿಸಿದ್ದಾರೆ.

ಮೇ 3ರಂದು ಮೈಸೂರಲ್ಲಿ 'ಬಸವ ಜಯಂತಿ' ಆಚರಣೆ

ಅಂದು ಬೆಳಗ್ಗೆ ಬಸವಣ್ಣನವರ ಪುತ್ಥಳಿ ಮೆರವಣಿಗೆ

ಮೈಸೂರು,ಏ.30(ಎಂಟಿವೈ)– ಮೈಸೂರಿನ ಕಲಾಮಂದಿರದಲ್ಲಿ ಮೇ 3ರಂದು ಬೆಳಗ್ಗೆ 11ಕ್ಕೆ ಜಿಲ್ಲಾಡಳಿತ ಹಾಗೂ ವಿವಿಧ ವೀರಶೈವ–ಲಿಂಗಾಯತ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ 'ಬಸವ ಜಯಂತಿ' ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಬಸವ ಜಯಂತಿ ಆಚರಣಾ ಸಮಿತಿ ಅಧ್ಯಕ್ಷ ಸದಾಶಿವಮೂರ್ತಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾಡಳಿತ, ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ, ವೀರಶೈವ–ಲಿಂಗಾಯತ ಸಂಘ ಸಂಸ್ಥೆಗಳು ಹಾಗೂ ಬಸವ ಬಳಗಗಳ ಒಕ್ಕೂಟದ ಸಂಯುಕ್ತಾಶ್ರಯದಲ್ಲಿ ಮೇ 3ರಂದು ಮೈಸೂರಲ್ಲಿ ಬಸವ ಜಯಂತಿ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ ಎಂದರು.

ಸುತ್ತೂರು ಕ್ಷೇತ್ರದ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಕಲಾಮಂದಿರದಲ್ಲಿ ನಡೆಯುವ ಸಭಾ ಕಾರ್ಯಕ್ರಮ ವನ್ನು ಅಂದು ಬೆಳಗ್ಗೆ 11ಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಉದ್ಘಾಟಿಸಲಿದ್ದಾರೆ. ಶಾಸಕ ಎಲ್. ನಾಗೇಂದ್ರ ಅಧ್ಯಕ್ಷತೆ ವಹಿಸಲಿದ್ದು, ಸಂಸದ ಪ್ರತಾಪ್ ಸಿಂಹ ಕೃತಿ ಬಿಡುಗಡೆ ಮಾಡಲಿದ್ದಾರೆ. ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಸಂಸದ ವಿ. ಶ್ರೀನಿವಾಸ ಪ್ರಸಾದ್, ಶಾಸಕರಾದ ಜಿ.ಟಿ. ದೇವೇಗೌಡ, ತನ್ವೀರ್ ಸೇಠ್, ಎಸ್.ಎ.ರಾಮದಾಸ್, ಡಾ.ಯತೀಂದ್ರ ಸಿದ್ದರಾಮಯ್ಯ ಸೇರಿದಂತೆ ವಿವಿಧ ನಿಗಮ ಮಂಡಳಿಗಳ ಅಧ್ಯಕ್ಷರು ಪಾಲ್ಗೊಳ್ಳಲಿದ್ದಾರೆ ಎಂದರು.

ಮೆರವಣಿಗೆ: ಬಸವ ಜಯಂತಿ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಅಂದು ಬೆಳಗ್ಗೆ 8 ಗಂಟೆಗೆ ಜೆಎಸ್‌ಎಸ್ ಮಹಾ ವಿದ್ಯಾಪೀಠದ ಬಳಿಯಿರುವ ಬಸವೇಶ್ವರ ಪ್ರತಿಮೆ ಬಳಿಯಿಂದ ಬಸವಣ್ಣನವರ ಪುತ್ಥಳಿ ಮೆರವಣಿಗೆಗೆ ಚಾಲನೆ ದೊರೆಯಲಿದೆ. ಈ ಮೆರವಣಿಗೆಯನ್ನು ಗುರುಮಲ್ಲೇಶ್ವರ ದಾಸೋಹ ಮಠದ ಶ್ರೀ ಮಹಾಂತ ಸ್ವಾಮಿ ಉದ್ಘಾಟಿಸಲಿದ್ದಾರೆ. ಶಾಸಕ ಎಸ್.ಎ.ರಾಮದಾಸ್ ಅಧ್ಯಕ್ಷತೆ ವಹಿಸಲಿದ್ದಾರೆ. ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ವಾಟಾಳು ಮಠದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಸೇರಿದಂತೆ ಇನ್ನಿತರರು ಪಾಲ್ಗೊಳ್ಳಲಿದ್ದು, ಸಯ್ಯಾಜಿರಾವ್ ರಸ್ತೆ, ಕೆ.ಆರ್.ವೃತ್ತ, ದೇವರಾಜ ಅರಸ್ ರಸ್ತೆ ವಿನೋಬಾ ರಸ್ತೆ ಮೂಲಕ ಕಲಾಮಂದಿರ ತಲುಪಲಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಹದೇವಸ್ವಾಮಿ, ಹಿನಕಲ್ ಬಸವರಾಜು, ಟಿ.ಎಸ್. ಲೋಕೇಶ್, ಶೋಭಾ ಜಯಪ್ರಕಾಶ್, ಉಮೇಶ್, ಮತ್ತಿತರರು ಇದ್ದರು.

ಮದ್ಯಪಾನ ಮಾಡಿ ವಾಹನ ಚಾಲನೆ ಮಾಡಬೇಡಿ ಜೋಕೆ

ಮೈಸೂರಲ್ಲಿ ತಪಾಸಣೆ ತೀವ್ರಗೊಳಿಸಿದ ಸಂಚಾರ ಪೊಲೀಸರು

ಕೇವಲ 2 ತಿಂಗಳಲ್ಲಿ 555 ಪ್ರಕರಣ ದಾಖಲು; ಡಿಎಲ್ ಅಮಾನತಿಗೆ ಶಿಫಾರಸು

ಮೈಸೂರು, ಏ.30(ಆರ್‌ಕೆ)– ಕೊರೊನಾ ಹಿನ್ನೆಲೆಯಲ್ಲಿ ಎರಡೂವರೆ ವರ್ಷಗಳ ಕಾಲ ಸ್ಥಗಿತಗೊಂಡಿದ್ದ ಡ್ರಂಕನ್ ಡ್ರೈವ್ ಕಾರ್ಯಾಚರಣೆ ಮತ್ತೆ ಆರಂಭಿಸಿರುವ ಮೈಸೂರಿನ ಸಂಚಾರಿ ಪೊಲೀಸರು ಕಳೆದ ಎರಡು ತಿಂಗಳಲ್ಲಿ 555 ಪ್ರಕರಣ ದಾಖಲಿಸಿದ್ದಾರೆ.

ತಪಾಸಣೆ ತೀವ್ರಗೊಳಿಸಲಾಗಿದ್ದು, ಏಪ್ರಿಲ್ ತಿಂಗಳಲ್ಲೇ 312 ಮಂದಿ ವಿರುದ್ಧ ಡ್ರಂಕ್ ಅಂಡ್ ಡ್ರೈವಿಂಗ್ ಪ್ರಕರಣ ದಾಖಲಿಸಲಾಗಿದ್ದು, ವಾಹನ ವಶಕ್ಕೆ ಪಡೆದು ಚಾಲನಾ ಪರವಾನಗಿ (ಡಿಎಲ್)ಅನ್ನು ಅಮಾನತುಗೊಳಿಸುವಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಶಿಫಾರಸು ಮಾಡಲಾಗಿದೆ.



ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುತ್ತಿರುವುದನ್ನು ಆಲ್ಕೋ ಮೀಟರ್(ಬ್ರೆತ್ ಅನಲೈಸರ್)ಗಳಿಂದ ದೃಢಪಟ್ಟರೆ ಸ್ಥಳದಲ್ಲೇ ಪ್ರಕರಣ ದಾಖಲಿಸಿ, ವಾಹನ ವಶಪಡಿಸಿಕೊಂಡು, ನ್ಯಾಯಾಲಯಕ್ಕೆ ರವಾನಿಸಲಾಗುತ್ತದೆ. ವಾಹನ ಚಾಲಕರು ಮರುದಿನ ನ್ಯಾಯಾಲಯಕ್ಕೆ ತೆರಳಿ ಮದ್ಯಪಾನ ಮಾಡಿ ವಾಹನ ಚಾಲನೆ ಮಾಡಿದ್ದಕ್ಕೆ 10 ಸಾವಿರ ರೂ. ಹಾಗೂ ವಾಹನ ದಾಖಲೆಗಳು ಇಲ್ಲದಿದ್ದರೆ ಅಧಿಕ ದಂಡ ಪಾವತಿಸಬೇಕಾಗುತ್ತದೆ. ಮತ್ತೊಂದೆಡೆ ಅಂತಹವರ ಡಿಎಲ್ ಅನ್ನು ಅಮಾನತುಗೊಳಿಸುವಂತೆ ಸಂಚಾರ ಠಾಣೆ ಪೊಲೀಸರು ಆರ್‌ಟಿಒ ಕಚೇರಿಗೆ ಶಿಫಾರಸು ಮಾಡುವರು. ಕುಡಿದು ವಾಹನ ಚಾಲನೆ ಮಾಡುವುದರಿಂದ ಅಪಘಾತಗಳು ಸಂಭವಿಸಿ ಅಮೂಲ್ಯ ಪ್ರಾಣ ಕಳೆದುಕೊಂಡು ಅವಲಂಬಿತರು ಬೀದಿ ಪಾಲಾಗುತ್ತಾರೆ. ಕೆಲವೊಮ್ಮೆ ಏನೂ ತಪ್ಪು ಮಾಡದವರ ಪ್ರಾಣಕ್ಕೂ ಕುತ್ತು ಬರುತ್ತದೆ. ಕೆಲವರು ಇದರಿಂದ ಶಾಶ್ವತವಾಗಿ ಅಂಗವಿಕಲ ರಾಗುವುದೂ ಉಂಟು.

ಕಾರ್ಯಾಚರಣೆ ಮಾಡುವುದು ದಂಡ ವಸೂಲಿ ಮಾಡುವುದಕ್ಕಲ್ಲ. ತೊಂದರೆ ಕೊಡುವ ಉದ್ದೇಶವೂ ಅಲ್ಲ, ಅಪಘಾತ ತಪ್ಪಿಸಿ ಅತ್ಯಮೂಲ್ಯ ಪ್ರಾಣ ರಕ್ಷಿಸುವುದಕ್ಕಾಗಿ ಎಂಬುದನ್ನು ಪ್ರತಿಯೊಬ್ಬ ವಾಹನ ಸವಾರರೂ ಅರ್ಥ ಮಾಡಿಕೊಳ್ಳಬೇಕು ಎಂದು ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ತಿಳಿಸಿದ್ದಾರೆ.

ಮೈಸೂರು ನಗರದ ದೇವರಾಜ, ಕೆ.ಆರ್., ವಿವಿಪುರಂ, ಎನ್‌ಆರ್ ಹಾಗೂ ನಗರ ಸಂಚಾರ ಠಾಣೆ ಪೊಲೀಸರು ಸಾರ್ವತ್ರಿಕ ರಜಾ ದಿನಗಳ ಮುನ್ನಾ ದಿನಗಳಲ್ಲಿ ವಿಶೇಷ ಕಾರ್ಯಾಚರಣೆ ಸೇರಿದಂತೆ ಸಾಮಾನ್ಯ ದಿನಗಳಲ್ಲೂ ಡ್ರಂಕನ್ ಡ್ರೈವಿಂಗ್ ತಪಾಸಣೆಯನ್ನು ತೀವ್ರಗೊಳಿಸಿದ್ದು, ಸಾರ್ವಜನಿಕರು ಎಚ್ಚರ ವಹಿಸುವಂತೆಯೂ ಅವರು ಸಲಹೆ ನೀಡಿದರು.

ಮೈಸೂರು ನಗರ ಸಂಚಾರ ವಿಭಾಗದ ಎಸಿಪಿ ಗಂಗಾಧರ ಸ್ವಾಮಿ ಅವರ ನೇತೃತ್ವದಲ್ಲಿ ಎಲ್ಲಾ 5 ಸಂಚಾರ ಠಾಣೆ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್, ಎಸಿಪಿಗಳನ್ನೊಳಗೊಂಡ ಸಿಬ್ಬಂದಿ ಪ್ರಮುಖ ರಸ್ತೆ, ಸರ್ಕಲ್, ರಿಂಗ್ ರೋಡ್, ಜಂಕ್ಷನ್‌ಗಳು, ಮೈಸೂರು ನಗರಕ್ಕೆ ಸಂಪರ್ಕ ಕಲ್ಪಿಸುವ ಹೆದ್ದಾರಿ, ಜಿಲ್ಲಾ ರಸ್ತೆಗಳಲ್ಲಿ ತಪಾಸಣೆ ನಡೆಸುತ್ತಿದ್ದು, ಸಿಕ್ಕಿಬಿದ್ದವರ ವಿರುದ್ಧ ಪ್ರಕರಣ ದಾಖಲಿಸಿ ವಾಹನ ವಶಪಡಿಸಿಕೊಳ್ಳುತ್ತಿದ್ದಾರೆ ಎಂದು ಪೊಲೀಸ್ ಆಯುಕ್ತರು ತಿಳಿಸಿದರು.

ವಾಹನ ಚಾಲನೆ ಮಾಡುವಾಗ ಮೊಬೈಲ್ ಫೋನ್ ಬಳಕೆ, ಹೆಲ್ಮೆಟ್ ಧರಿಸದೇ ಚಾಲನೆ, ಸೀಟ್ ಬೆಲ್ಟ್ ಧರಿಸದಿರುವುದು ಸೇರಿದಂತೆ ಮೋಟಾರು ವಾಹನ ಕಾಯ್ದೆಯನ್ವಯ ಸಂಚಾರ ನಿಯಮ ಉಲ್ಲಂಘಿಸಿದವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಪ್ರಕರಣ ದಾಖಲಿಸಲಾಗುತ್ತದೆಂದು ಎಚ್ಚರಿಸಿದ ಅವರು, ನಾಗರಿಕರು ಎಚ್ಚರಿಕೆಯಿಂದ ವಾಹನ ಚಾಲನೆ ಮಾಡಬೇಕೆಂದು ಪೊಲೀಸ್ ಆಯುಕ್ತರು ತಿಳಿಸಿದ್ದಾರೆ.

ಜಾತಿ, ಧರ್ಮ, ಭಾಷೆಗಿಂತ ದೇಶ ಮೊದಲು ಎಂದ ದೇಶಭಕ್ತ ಬಾಬೂಜಿ

● ವಿಪಕ್ಷ ನಾಯಕರೂ ಆದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬಣ್ಣನೆ
● ಭೈರಾಪುರ ಪ್ರವೇಶ ದ್ವಾರದಲ್ಲಿ ಡಾ.ಬಾಬು ಜಗಜೀವನರಾಂ ಪ್ರತಿಮೆ ಅನಾವರಣ

ತಿ.ನರಸೀಪುರ, ಏ.30(ಎಸ್‌ಕೆ)– ಹಸಿರು ಕ್ರಾಂತಿ ಹರಿಕಾರ, ದಮನಿತರ ಆತ್ಮ ವಿಶ್ವಾಸದ ಪ್ರತೀಕ ಡಾ.ಬಾಬು ಜಗಜೀವನ ರಾಂ ಜಾತಿ, ಧರ್ಮ, ಭಾಷೆ ಎಲ್ಲಕ್ಕಿಂತಲೂ ದೇಶ ಮೊದಲು ಎಂದು ಸಾರಿದ ಅಪ್ರತಿಮ ದೇಶಭಕ್ತ ಎಂದು ವಿಪಕ್ಷ ನಾಯಕರೂ ಆದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬಣ್ಣಿಸಿದರು.

ಪಟ್ಟಣದ ಪುರಸಭೆ ವ್ಯಾಪ್ತಿಯ ಭೈರಾಪುರ ಪ್ರವೇಶ ದ್ವಾರದಲ್ಲಿ ಹಸಿರು ಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನರಾಂ ಯುವಕರ ಸಂಘದ ಆಶ್ರಯದಲ್ಲಿ ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ನಿರ್ಮಿಸಿರುವ ಡಾ.ಬಾಬು ಜಗಜೀವನರಾಂ ಪ್ರತಿಮೆಯನ್ನು ಲೋಕಸಭಾ ಮಾಜಿ ಸ್ಪೀಕರ್ ಮೀರಾ ಕುಮಾರ್ ಅವರೊಟ್ಟಿಗೆ ಅನಾವರಣಗೊಳಿಸಿ ವೇದಿಕೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಾಬೂಜಿಯವರು ದೇಶಕಂಡ ದಕ್ಷ ಆಡಳಿತಗಾರ, ಪ್ರಬುದ್ಧ ರಾಜಕಾರಣಿ. ನೆಹರು, ಇಂದಿರಾಗಾಂಧಿ ಹಾಗೂ ರಾಜೀವ್ ಗಾಂಧಿಯವರ ಜೊತೆ ದೀರ್ಘಕಾಲ ಮಂತ್ರಿಗಳಾಗಿ ದೇಶಕಟ್ಟುವ ಕಾರ್ಯದಲ್ಲಿ ಹಗಲು ರಾತ್ರಿ ದುಡಿದರು. ಬಾಬೂಜಿ ಅವರಿಗೆ ಇತಿಹಾಸದ ಪುಟಗಳಲ್ಲಿ ಸಿಗಬೇಕಿದ್ದ ಉತ್ತಮ ಸ್ಥಾನಮಾನ ಸಿಗಬೇಕಿತ್ತಾದರೂ ಅದು ಸಾಧ್ಯವಾಗಲಿಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ಹಾಗೂ ಸ್ವಾತಂತ್ರ್ಯ ನಂತರ ಆಧುನಿಕ ಭಾರತ ನಿರ್ಮಾಣ ಮಾಡುವಲ್ಲಿ ಅವರ ಕೊಡುಗೆ ಅಪಾರ ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಬಾಬೂಜಿ ಇಬ್ಬರೂ ಮಂತ್ರಿಗಳಾಗಿದ್ದವರು. ದೇಶ ಯಾವಾಗ ಕಷ್ಟದ ಪರಿಸ್ಥಿತಿಗೆ ಸಿಲುಕುತ್ತಿತ್ತೋ ಅಂತಹ ಸಂದರ್ಭ ಬಾಬೂಜಿ ನಿರ್ವಹಿಸಿದಂತಹ ಖಾತೆಗಳು ನಿಜಕ್ಕೂ ಅವಿಸ್ಮರಣೀಯ. ಆಗ ದೇಶದಲ್ಲಿ ಆಹಾರ ಭದ್ರತೆ ಇರಲಿಲ್ಲ. 70ರ ದಶಕದಲ್ಲಿ ಇಂದಿರಾ ಗಾಂಧಿ ಪ್ರಧಾನಿಯಾಗಿದ್ದ ವೇಳೆ ದೇಶದ ಎಲ್ಲಾ ಜನರಿಗೆ ಆಹಾರ ಭದ್ರತೆ ಒದಗಿಸುವ ಪರಿಸ್ಥಿತಿ ಭಾರತಕ್ಕಿರಲಿಲ್ಲ. ಆದರೆ ಇಂದು ದೇಶದ 130 ಕೋಟಿ ಜನರಿಗೆ ಆಹಾರ ಭದ್ರತೆ ದೊರಕಿದೆ ಎಂದರೆ ಅದಕ್ಕೆ ಇಂದಿರಾ ಗಾಂಧಿಯವರೊಂದಿಗೆ ಬಾಬೂಜಿಯವರ ಪರಿಶ್ರಮವೂ ಕಾರಣ ಎಂದರು.

ಕೃಷಿ ಮಂತ್ರಿಯಾಗಿದ್ದ ವೇಳೆ ಅವರು ದೇಶದ ಆಹಾರ ಉತ್ಪಾದನೆ ಹೆಚ್ಚಿಸುವ ಮೂಲಕ ದೇಶದ ಜನರ ಹಸಿವು ನೀಗಿಸಿ ಇತರೆ ದೇಶಗಳಿಗೂ ಆಹಾರ ರಫ್ತು ಮಾಡುವ ಶಕ್ತಿ ತಂದುಕೊಟ್ಟರು. ಇದಕ್ಕೆ ಅವರು ನಡೆಸಿದ ಹಸಿರು ಕ್ರಾಂತಿಯೇ ಕಾರಣ. ಬಾಬೂಜಿ ಹಾಗೂ ಅಂಬೇಡ್ಕರ್ ಅವರು ನಾವು ದಲಿತ ಸಮಾಜದಲ್ಲಿ ಹುಟ್ಟಿ ಅವಮಾನ, ಅಗೌರವಕ್ಕೆ ಒಳಗಾಗಿದ್ದೇವೆ. ನಮ್ಮ ಜನರಿಗೆ ನಮ್ಮ ಪರಿಸ್ಥಿತಿ ಬರಬಾರದೆಂಬ ಉದ್ದೇಶದೊಂದಿಗೆ ಸ್ವಾಭಿಮಾನದಿಂದ ಬದುಕುವ ವ್ಯವಸ್ಥೆ ನಿರ್ಮಾಣವಾಗಬೇಕೆಂದು ಜೀವನದುದ್ದಕ್ಕೂ ಹೋರಾಟ ಮಾಡಿದ ಮಹಾನ್ ವ್ಯಕ್ತಿಗಳಾಗಿದ್ದರು ಎಂದು ನೆನೆದರು.

1971ರಲ್ಲಿ ಪಾಕಿಸ್ತಾನದ ಮೇಲೆ ಯುದ್ಧವಾದಾಗ ರಕ್ಷಣಾ ಸಚಿವರಾಗಿದ್ದ ಬಾಬೂಜಿಯವರು ಪೂರ್ವ ಪಾಕಿಸ್ತಾನದ ವಿಮೋಚನೆಗಾಗಿ ಹೋರಾಟ ಮಾಡಿದರು. ರೈಲ್ವೆ ಸಚಿವರಾಗಿದ್ದ ವೇಳೆ ಸಂವಿಧಾನವನ್ನು ಅಕ್ಷರಶಃ ಜಾರಿಗೆ ತರುವ ಕೆಲಸ ಮಾಡಿದ್ದರು. ಅವರು ಜಾರಿಗೆ ತಂದ ಬಡ್ತಿ ಮೀಸಲಾತಿಯನ್ನು ಸುಪ್ರೀಂಕೋರ್ಟ್ ರದ್ದು ಮಾಡಿತ್ತು. ಆದರೆ ಅದನ್ನು ಕಾನೂನು ಬದ್ಧವಾಗಿ ನಾನು ಮುಖ್ಯಮಂತ್ರಿಯಾದ ಮೇಲೆ ಜಾರಿಗೊಳಿಸಿದೆ ಎಂದ ಸಿದ್ದರಾಮಯ್ಯ, ಇದುವರೆಗೂ ಕರ್ನಾಟಕ ಹೊರತುಪಡಿಸಿ ದೇಶದ ಯಾವುದೇ ರಾಜ್ಯಗಳಲ್ಲೂ ಬಡ್ತಿಯಲ್ಲಿ ಮೀಸಲಾತಿಯನ್ನು ಸಂವಿಧಾನಾತ್ಮಕವಾಗಿ ಯಾವುದೇ ರಾಜ್ಯಗಳು ಕೊಟ್ಟಿಲ್ಲ ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಹೆಚ್. ಆಂಜನೇಯ, ಆರ್.ಬಿ.ತಿಮ್ಮಾಪುರ್, ಕೋಟೆ ಎಂ.ಶಿವಣ್ಣ, ಕೇಂದ್ರದ ಮಾಜಿ ಸಚಿವ ಕೆ.ಎಚ್.ಮುನಿಯಪ್ಪ, ಸಂಸದ ಡಾ.ಎಲ್.ಹನುಮಂತಯ್ಯ, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಎಐಸಿಸಿ ವಕ್ತಾರರೂ ಆದ ಬಾಬೂಜಿಯವರ ಮೊಮ್ಮಗ ಅನ್ಸುಲ್ ಕುಮಾರ್ ಅವಿಜಿತ್, ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಮಾಜಿ ಸದಸ್ಯ ಸಿ.ರಮೇಶ್, ಡಾ.ಬಾಬು ಜಗಜೀವನರಾಂ ಪ್ರತಿಮೆ ಕೊಡುಗೆ ನೀಡಿದ ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಸಮಾರಂಭದಲ್ಲಿ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಯತೀಂದ್ರ ಸಿದ್ದರಾಮಯ್ಯ ವಹಿಸಿದ್ದರು. ವಸತಿ ಜಾಗೃತಿ ಸಮಿತಿ ಮಾಜಿ ಅಧ್ಯಕ್ಷ ಸುನೀಲ್ ಬೋಸ್, ಪುರಸಭಾಧ್ಯಕ್ಷ ಎಸ್.ಮದನ್‌ರಾಜ್, ಉಪಾಧ್ಯಕ್ಷೆ ಪ್ರೇಮಾ, ಸದಸ್ಯ ಅರ್ಜುನ್, ಮೈಸೂರು ಮಾಜಿ ಉಪ ಮೇಯರ್ ಶ್ರೀಧರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಿ.ಜೆ.ವಿಜಯ ಕುಮಾರ್, ಡಾ.ಬಾಬು ಜಗಜೀವನರಾಂ ಯುವಕರ ಸಂಘದ ಕಾರ್ಯದರ್ಶಿ ದಿವಾಕರ್, ಜಿಪಂ ಮಾಜಿ ಸದಸ್ಯೆ ಸುಧಾ, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಮೈಮುಲ್ ನಿರ್ದೇಶಕ ಚೆಲುವರಾಜು, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ವಜ್ರೇಗೌಡ, ಎಪಿಎಂಸಿ ಅಧ್ಯಕ್ಷ ಅನಿಲ್ ಕುಮಾರ, ಜಿಲ್ಲಾ ವೈದ್ಯಕೀಯ ವಿಭಾಗದ ಜಿಲ್ಲಾಧ್ಯಕ್ಷ ಡಾ.ಪ್ರದೀಪ್ ಕುಮಾರ್, ಪುರಸಭೆ ಮಾಜಿ ಅಧ್ಯಕ್ಷ ಸೋಮು, ತಾಲೂಕು ಕುರುಬರ ಸಂಘದ ಅಧ್ಯಕ್ಷ ನಂಜುಂಡಸ್ವಾಮಿ, ಪುರಸಭಾ ಸದಸ್ಯ ಪ್ರಕಾಶ್, ಬಾದಾಮಿ ಮಂಜು ಇದ್ದರು.



ತಿ.ನರಸೀಪುರ ಪುರಸಭಾ ವ್ಯಾಪ್ತಿಯ ಭೈರಾಪುರ ಪ್ರವೇಶ ದ್ವಾರದಲ್ಲಿ 12 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಹಸಿರು ಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನರಾಂ ಪ್ರತಿಮೆ ಅನಾವರಣ ಕಾರ್ಯಕ್ರಮವನ್ನು ಲೋಕಸಭಾ ಮಾಜಿ ಸ್ಪೀಕರ್ ಮೀರಾ ಕುಮಾರ್ ಹಾಗೂ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು.



> ಕರ್ನಾಟಕಕ್ಕೆ ಬಂದರೆ ನನ್ನ ಮನಸ್ಸು ಪ್ರಫುಲ್ಲವಾಗುತ್ತದೆ. ಇಲ್ಲಿನ ಜನ ರಾಗಿ, ಭತ್ತ, ರೇಷ್ಮೆ ಬೆಳೆಯುತ್ತೀರಿ. ಇಂತಹ ಬೆಳವಣಿಗೆ ಮಧ್ಯೆ ಇಂತಹ ಅತ್ಯುನ್ನತ ಕೆಲಸ ಮಾಡಿದ್ದೀರಿ. ದೆಹಲಿಯಲ್ಲಿ ಕುಳಿತ ನಾಯಕರು ಇಂದು ದೇಶವನ್ನು ಮುನ್ನಡೆಸುತ್ತಿಲ್ಲ. ಬದಲಿಗೆ ನಿಮ್ಮ ಶ್ರಮ, ಬೆವರು ದೇಶವನ್ನು ಮುನ್ನಡೆಸುತ್ತಿದೆ. ಇಲ್ಲಿರುವ ಯುವಕರ ಕಣ್ಣುಗಳಲ್ಲಿ ಆಸೆ, ಕನಸುಗಳನ್ನು ನೋಡುತ್ತಿದ್ದೇನೆ. ನಿಮ್ಮ ಆಸೆ ಕನಸುಗಳು ಬಾಬೂಜಿಯವರು ದೇಶ ಕಟ್ಟಲು ಕಂಡ ಕನಸುಗಳಾಗಬೇಕು, ಬಾಬೂಜಿಯವರು ಶಾಂತಿಯುತ ಕ್ರಾಂತಿಕಾರಿಯಾಗಿದ್ದರು. ಅವರು ತಮ್ಮ ಜೀವನದಲ್ಲಿ ಯಾವ ಮೌಲ್ಯಗಳನ್ನು ಪ್ರತಿಪಾದನೆ ಮಾಡಿದರು. ಸಮಾನತೆಯ ಸಮಾಜಕ್ಕೆ ಹೋರಾಟ ಮಾಡಿದರೋ ಆ ಸ್ಫೂರ್ತಿ ನಿಮಗೆ ಬರುವಂತಾಗಬೇಕು. ಬಾಬೂಜಿ ಪ್ರತಿಮೆ ಅನಾವರಣಕ್ಕೆ ಬಂದಿರುವ ನಾನು ನಿಮ್ಮಿಂದ ಸ್ಫೂರ್ತಿ ಪಡೆದು ದೆಹಲಿಗೆ ತೆರಳಿ ದೇಶದ ಯಾವುದೇ ಭಾಗದಲ್ಲಿ ಅನ್ಯಾಯವಾದರೆ ಅದರ ವಿರುದ್ಧ ಹೋರಾಡುವ ಸಂಕಲ್ಪ ಮಾಡಿದ್ದೇನೆ.
> - ಮೀರಾ ಕುಮಾರ್, ಲೋಕಸಭೆ ಮಾಜಿ ಸ್ಪೀಕರ್.



ಬಾಬು ಜಗಜೀವನರಾಂ ಪುತ್ರಿ ಹಾಗೂ ಮಾಜಿ ಸ್ಪೀಕರ್ ಮೀರಾ ಕುಮಾರಿ ಅವರನ್ನು ತಿ.ನರಸೀಪುರದಲ್ಲಿ ಪುರಸಭೆ ಸದಸ್ಯ ಆರ್. ಅರ್ಜುನ್ ಅಭಿನಂದಿಸಿದರು. ಈ ವೇಳೆ ಮಾಜಿ ವಿಧಾನಪರಿಷತ್ ಸದಸ್ಯ ಸಿ.ರಮೇಶ್, ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಶಿವಣ್ಣ, ಮಾಜಿ ಸಚಿವ ಆಂಜನೇಯ ಇದ್ದರು.

ಭಾರೀ ಗಾಳಿ ಮಳೆಗೆ ಬಾಳೆ ಫಸಲು ನಾಶ

ಮನೆ ಗೋಡೆ ಕುಸಿತ: ಲಕ್ಷಾಂತರ ರೂ. ನಷ್ಟ

ಸರಗೂರು, ಏ.30(ನಾಗೇಶ್)– ಭಾರೀ ಗಾಳಿ ಮಳೆಗೆ ಕಟಾವಿಗೆ ಬಂದಿದ್ದ ಬಾಳೆ ಫಸಲು ನಾಶವಾಗಿರುವ ಘಟನೆ ತಾಲೂಕಿನ ದೇವಲಾಪುರ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ ಶುಕ್ರವಾರ ರಾತ್ರಿ ನಡೆದಿದೆ. ಭಾರೀ ಗಾಳಿ ಮಳೆಗೆ ದೇವಲಾಪುರ ಗ್ರಾಮದ ರಾಜಪ್ಪ ಅವರ 2 ಎಕರೆ ಬಾಳೆ, ದೇವಲಾಪುರ ಹುಂಡಿ ಗ್ರಾಮದ ರೈತ ಗಿರೀಶ್ ಅವರ 4 ಎಕರೆ ಬಾಳೆ, ಕಮಲಮ್ಮ ಅವರ 2 ಎಕರೆ ಬಾಳೆ, ಡಿ.ಎಂ.ಶಿವಣ್ಣ ಅವರ 2 ಎಕರೆ ಬಾಳೆ, ಪುಟ್ಟಲಿಂಗಮ್ಮನವರ 2 ಎಕರೆ ಬಾಳೆ, ಶಿವರುದ್ರಪ್ಪನವರ 3 ಎಕರೆ ಜಮೀನಿನಲ್ಲಿ ಬೆಳೆದಿದ್ದ ಬಾಳೆ ಫಸಲು ಸಂಪೂರ್ಣ ನೆಲ ಕಚ್ಚಿ ಹಾಳಾಗಿದೆ.



ಇನ್ನು ದೇವಲಾಪುರ ಗ್ರಾಮದ ರೈತ ಸಿದ್ದರಾಜು ಅವರ ಮನೆ ಮೇಲೆ ಭಾರೀ ಗಾತ್ರದ ಮರ ಬಿದ್ದು ಮೇಲ್ಛಾವಣಿ ಜಖಂಗೊಂಡು ಗೋಡೆ ಕುಸಿದಿದೆ ಅಲ್ಲದೇ ನಾಗರಾಜು, ಚಿನ್ನಮ್ಮ ಅವರ ಮನೆ ಮೇಲ್ಛಾವಣಿ ಹಾನಿಯಾಗಿದ್ದು, ಮಣಿಯಮ್ಮ ಹಾಗೂ ಕುಪಾಲಿಗುಳ್ಳು ಗ್ರಾಮದ ನಾಗರಾಜು ಅವರುಗಳ ಮನೆ ಗೋಡೆ ಸಂಪೂರ್ಣ ಕುಸಿದಿದೆ. ಬಾಳೆ ಫಸಲು ನಾಶ ಹಾಗೂ ಮನೆ ಗೋಡೆ ಕುಸಿತದಿಂದ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ. ಬ್ಯಾಂಕ್‌ನಿಂದ ಸಾಲ ಪಡೆದು ಕಷ್ಟಪಟ್ಟು ಬೆಳೆದ ಬೆಳೆ ರಾತ್ರಿ ಕಳೆದು ಬೆಳಗಾಗುವಷ್ಟರಲ್ಲಿ ಬಂದ ಭಾರೀ ಗಾಳಿ ಮಳೆ ಎಲ್ಲವನ್ನೂ ಬುಡಮೇಲಾಗಿಸಿದೆ. ಇದರಿಂದ ಲಕ್ಷಾಂತರ ರೂ.ನಷ್ಟ ಸಂಭವಿಸಿದೆ. ಹೀಗಾಗಿ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿ ಮನೆ, ಬೆಳೆ ಕಳೆದುಕೊಂಡವರಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ರೈತ ಮುಖಂಡರು ಒತ್ತಾಯಿಸಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ವಲಯ ಅರಣ್ಯಾಧಿಕಾರಿ ಪುಟ್ಟರಾಜು ಪರಿಶೀಲನೆ ನಡೆಸಿದರು.

ಹುಣಸೂರಿನಲ್ಲಿ ವೇಶ್ಯಾವಾಟಿಕೆ

3 ಲಾಡ್ಜ್‌ಗಳ ಮೇಲೆ ದಾಳಿ: ಇಬ್ಬರ ಬಂಧನ

ಹುಣಸೂರು, ಏ.30(ಕೆಕೆ)– ಪಟ್ಟಣದ ಲಾಡ್ಜ್‌ಗಳಲ್ಲಿ ವೇಶ್ಯಾವಾಟಿಕೆ ನಡೆಯುತ್ತಿರುವ ಖಚಿತ ಮಾಹಿತಿ ಮೇರೆಗೆ ಮೈಸೂರಿನ ಒಡನಾಡಿ ತಂಡ ಹಾಗೂ ಹುಣಸೂರು ಪೊಲೀಸರು ಗುರುವಾರ ಜಂಟಿ ದಾಳಿ ನಡೆಸಿ ವೇಶ್ಯಾವಾಟಿಕೆ ನಡೆಸುತ್ತಿದ್ದ ಇಬ್ಬರನ್ನು ಬಂಧಿಸಿದ್ದು, ಇಬ್ಬರು ಮಹಿಳೆಯರನ್ನು ರಕ್ಷಿಸಿದ್ದಾರೆ.

ಹುಣಸೂರಿನ ಖಾಸಗಿ ಲಾಡ್ಜ್‌ಗಳಲ್ಲಿ ರಾಜ್ಯದ ವಿವಿಧ ಕಡೆಗಳಿಂದ ಹಲವಾರು ಹೆಣ್ಣು ಮಕ್ಕಳನ್ನು ಕರೆಸಿ ವೇಶ್ಯಾವಾಟಿಕೆ ನಡೆಸುತ್ತಿರುವ ಬಗ್ಗೆ ಒಡನಾಡಿ ಸಂಸ್ಥೆಗೆ ಮಾಹಿತಿ ಬಂದಿದೆ. ಕೂಡಲೇ ಎಸ್‌ಪಿ ಚೇತನ್ ಅವರಿಗೆ ಮಾಹಿತಿ ಮುಟ್ಟಿಸಿದ್ದಾರೆ. ತಕ್ಷಣ ಕಾರ್ಯಪ್ರವೃತ್ತರಾದ ಡಿವೈಎಸ್ಪಿ ರವಿಪ್ರಸಾದ್, ವಿಶೇಷ ತಂಡವೊಂದನ್ನು ರಚಿಸಿದ್ದಾರೆ. ತಂಡವು ಗುರುವಾರ ರಾತ್ರಿ ಮೂರು ಲಾಡ್ಜ್‌ಗಳ ಮೇಲೆ ಏಕಕಾಲದಲ್ಲಿ ದಾಳಿ ನಡೆಸಿದೆ. ಈ ವೇಳೆ ವೇಶ್ಯಾವಾಟಿಕೆಯಲ್ಲಿ ತೊಡಗಿದ್ದ ಹಾಗೂ ವೇಶ್ಯಾವಾಟಿಕೆ ನಡೆಸುತ್ತಿದ್ದವರನ್ನು ವಶಕ್ಕೆ ಪಡೆಯಲಾಗಿದೆ.

ಹುಣಸೂರಿನ ಹೊರವಲಯದಲ್ಲಿ ವೇಶ್ಯಾವಾಟಿಕೆಯ ದಂಧೆ ಹೆಚ್ಚಾಗಿದ್ದು, ಈ ಜಾಲಗಳು ಹೊಸದಿಲ್ಲಿ, ಕೊಲ್ಕತ್ತಾ ಹಾಗೂ ಮುಂಬೈನಂತಹ ನಗರಗಳೊಂದಿಗೆ ನಂಟನ್ನು ಹೊಂದಿವೆ. ಮೈಸೂರಿನಲ್ಲೂ ಹಲವು ಹೆಣ್ಣು ಮಕ್ಕಳಿಗೆ ಹಣದ ಆಮಿಷವೊಡ್ಡಿ ಸಾಗಾಣಿಕೆ ಮಾಡುತ್ತಿರುತ್ತಾರೆ ಎನ್ನಲಾಗಿದೆ.

ಕೆಲ ತಿಂಗಳ ಹಿಂದೆ ಇದೇ ಲಾಡ್ಜ್ ದಾಳಿಗೆ ಒಳಗಾಗಿದ್ದು, ಪೊಲೀಸ್ ಕಾರ್ಯಾಚರಣೆಯಿಂದ ತಪ್ಪಿಸಿಕೊಳ್ಳಲು, ಹೆಣ್ಣು ಮಕ್ಕಳನ್ನು ಅಡಗಿಸಲು ರಹಸ್ಯ ಬಾಕ್ಸ್ ಒಂದನ್ನು ಗೋಡೆಯೊಳಗೆ ಕೊರೆದಿರುವುದು ಪೊಲೀಸರ ಗಮನಕ್ಕೆ ಬಂದಿತ್ತು. ಮತ್ತೆ ಅದೇ ಲಾಡ್ಜ್‌ನಲ್ಲಿ ವೇಶ್ಯಾವಾಟಿಕೆ ನಡೆಯುತ್ತಿದ್ದರೂ ಅಲ್ಲಿನ ಪೊಲೀಸರು ಜಾಣಕುರುಡು ಪ್ರದರ್ಶಿಸುತ್ತಿದ್ದರು.

ಹುಣಸೂರಿನ ಪೊಲೀಸ್ ತಂಡದೊಂದಿಗೆ ಒಡನಾಡಿ ಸಂಸ್ಥೆಯ ನಿರ್ದೇಶಕರು, ಪ್ರದೀಪ್, ಶಶಾಂಕ್, ಕಾರ್ತಿಕ್, ಸುಜನ, ಸುಮ ಹಾಗೂ ಮಹಾಲಕ್ಷ್ಮಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಮೇ 4 ರಂದು ಶೋಷಿತ ಸಮುದಾಯಗಳ ಸಮಾವೇಶ

ಪಿರಿಯಾಪಟ್ಟಣ, ಏ. 30 (ವೀರೇಶ್)–ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯವಾಗಿ ಸುಮಾರು 108 ಹಿಂದುಳಿದ ಜಾತಿಗಳ ಮೀಸಲಾತಿ ಕೈತಪ್ಪುತ್ತಿದ್ದು, ಮೀಸಲಾತಿಯ ಉಳಿವಿಗಾಗಿ ಹೋರಾಟ ಅನಿವಾರ್ಯವಾಗಿದೆ. ಈ ಹಿನ್ನೆಲೆಯಲ್ಲಿ ಹಿಂದುಳಿದ ವರ್ಗಗಳ ಹಾಗೂ ಶೋಷಿತ ಸಮುದಾಯಗಳ ಐಕ್ಯತಾ ಸಮಾವೇಶವನ್ನು ಮೇ 4 ರಂದು ಬುಧವಾರ ಮೈಸೂರಿನ ಜೆಕೆ. ಮೈದಾನ ರೈಲ್ವೆ ನಿಲ್ದಾಣ ಎದುರು ಹಮ್ಮಿಕೊಳ್ಳಲಾಗಿದ್ದು, ತಾಲೂಕಿನ ಎಲ್ಲಾ ಶೋಷಿತ ಹಿಂದುಳಿದ ವರ್ಗದ ಸಮುದಾಯವರು ಈ ಸಮಾವೇಶದಲ್ಲಿ ಭಾಗವಹಿಸಿ ಹೆಚ್ಚಿನ ಬೆಂಬಲವನ್ನು ನೀಡಬೇಕೆಂದು ರಾಜ್ಯ ಕುರುಬ ಸಮಾಜದ ಅಧ್ಯಕ್ಷ ಸುಬ್ರಹ್ಮಣ್ಯ ಕರೆ ನೀಡಿದರು.

ಪಟ್ಟಣದ ಕನಕ ಸಮುದಾಯ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಪ್ರಭಾವಿ ರಾಜಕಾರಣಿಗಳು ಅಲ್ಪಸಂಖ್ಯಾತರ ಹಿಂದುಳಿದ ವರ್ಗಗಳ ಸಮಾಜದ ಬಗ್ಗೆ ಯಾರೂ ತಲೆಕೆಡಿಸಿಕೊಳ್ಳುತ್ತಿಲ್ಲ. ಈ ನಿಟ್ಟಿನಲ್ಲಿ ರಾಜ್ಯದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಈ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದ್ದು, ಮುಂದಿನ ದಿನಗಳಲ್ಲಿ ಹಿಂದುಳಿದ ಸಮಾಜ ಅತ್ಯಂತ ಹೀನಾಯಸ್ಥಿತಿ ತಲುಪಲಿದೆ. ಹಣಬಲ ತೋಳ್ಬಲಕ್ಕೆ ಮಾತ್ರ ಆದ್ಯತೆ ನೀಡಲಾಗುತ್ತಿದ್ದು, ನಮ್ಮಗಳ ಹಕ್ಕಿಗಾಗಿ ಈ ಹೋರಾಟ ಅನಿವಾರ್ಯವಾಗಿದೆ ಎಂದರು.

ಮೈಸೂರು ಜಿಲ್ಲಾ ಸವಿತಾ ಸಮಾಜದ ಅಧ್ಯಕ್ಷ ನಾಗೇಶ್ ಮಾತನಾಡಿದರು. ಹಿಂದುಳಿದ ವರ್ಗಗಳ ರಾಜ್ಯಾಧ್ಯಕ್ಷ ರಾಮಚಂದ್ರಪ್ಪ, ಜಿಲ್ಲಾ ಕುಂಬಾರ ಸಮಾಜದ ಅಧ್ಯಕ್ಷ ಪ್ರಕಾಶ್, ತಾಲ್ಲೂಕು ಕುರುಬ ಸಮಾಜದ ಅಧ್ಯಕ್ಷ ಅಪ್ಪಾಜಿಗೌಡ ಮಾತನಾಡಿದರು.

ಗೋಷ್ಠಿಯಲ್ಲಿ ಬಿಜೆಪಿ ತಾಲೂಕು ಅಧ್ಯಕ್ಷ ಎಂ.ಎಂ. ರಾಜೇಗೌಡ, ತಾಲೂಕು ಕುರುಬ ಸಮಾಜದ ಕಾರ್ಯದರ್ಶಿ ಜಯಣ್ಣ, ವಿಶ್ವಕರ್ಮ ಸಮಾಜದ ಉಪಾಧ್ಯಕ್ಷ ಲೋಕಪಾಲಯ್ಯ, ಕನಕ ಪತ್ತಿನ ಸಹಕಾರ ಸಂಘದ ನಿರ್ದೇಶಕ ಲೋಹಿತ್, ಮುಖಂಡರಾದ ಪುಟ್ಟರಾಜು, ನಾಗೇಂದ್ರ ಹಲವರಿದ್ದರು.



ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದ ಕೆ.ಆರ್.ನಗರ, ಸಾಲಿಗ್ರಾಮ ತಾಲೂಕಿನ ಮುಸ್ಲಿಂ ಬಾಂಧವರಿಗೆ ಸಾ.ರಾ.ಸ್ನೇಹ ಬಳಗದಿಂದ ರಂಜಾನ್ ಹಬ್ಬದ ಪ್ರಯುಕ್ತ ಡ್ರೈ ಫ್ರೂಟ್ಸ್ ವಿತರಿಸಲಾಯಿತು.

ಡಿಆರ್‌ಸಿ ಸಿನಿಮಾಸ್ — ದೂ : 4240422/4241800	
ಸ್ಕ್ರೀನ್ 1	ಕೆಜಿಎಫ್ 2 (ಕ): ಬೆ.11ಕ್ಕೆ, ಮ.2.30ಕ್ಕೆ, ಸಂ.6.15ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 2	ಮೇಲೊಬ್ಬ ಮಾಯಾವಿ (ಕ): ಬೆ.10.30ಕ್ಕೆ, ಹಾಸ್ಟೆಲ್ (ತ): ಮ.1.20ಕ್ಕೆ, ಶೋಕಿವಾಲ (ಕ): ಸಂ.4.10ಕ್ಕೆ, ಹೀರೋಪಂತಿ 2(ಹಿಂ): ಸಂ.6.55ಕ್ಕೆ, ಜನಗಣಮನ (ಮ): ರಾ.9.50ಕ್ಕೆ
ಸ್ಕ್ರೀನ್ 3	ರನ್‌ವೇ 34 (ಹಿಂ): ಬೆ.9.55ಕ್ಕೆ, ಸಂ.6.35ಕ್ಕೆ, ರಾ.10ಕ್ಕೆ, ಹೀರೋಪಂತಿ 2(ಹಿಂ): ಮ.1.25ಕ್ಕೆ, ಕ್ಷಮಿಸಿ ನಿಮ್ಮ ಖಾತೆಯಲ್ಲಿ ಹಣವಿಲ್ಲ (ಕ): ಸಂ.4.10ಕ್ಕೆ.
ಸ್ಕ್ರೀನ್ 4	ಕಾತುವಾಕುಲ ರೆಂಡು ಕಾದಲ್ (ತ): ಬೆ.10ಕ್ಕೆ, ಮ.1ಕ್ಕೆ, ಆಚಾರ್ಯ (ತೆ): ಸಂ.4.05ಕ್ಕೆ, ರಾ.7ಕ್ಕೆ, ರಾ.10ಕ್ಕೆ.

INOX LIVE THE MOVIE ಐನಾಕ್ಸ್ ಮೂವೀಸ್ — ದೂ : 2533444 / 2433456	
ಸ್ಕ್ರೀನ್ 1	ಕೆಜಿಎಫ್ 2 (ಕ): ಬೆ.10.30ಕ್ಕೆ, ಮ.2.10ಕ್ಕೆ, ಸಂ.5.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 2	ರನ್‌ವೇ 34 (ಹಿಂ): ಬೆ.9.45ಕ್ಕೆ, ಮ.3.50ಕ್ಕೆ, ರಾ.10ಕ್ಕೆ, ಹೀರೋಪಂತಿ 2 (ಹಿಂ): ಮ.12.50ಕ್ಕೆ, ರಾ.7ಕ್ಕೆ.
ಸ್ಕ್ರೀನ್ 3	ಹೀರೋಪಂತಿ 2 (ಹಿಂ): ಬೆ.9.40ಕ್ಕೆ, ಕಾತುವಾಕುಲ ರೆಂಡು ಕಾದಲ್ (ತ): ಮ.12.35ಕ್ಕೆ, ಆಚಾರ್ಯ (ತೆ): ಮ.3.55ಕ್ಕೆ, ರಾ.9.50ಕ್ಕೆ, ಕ್ಷಮಿಸಿ ನಿಮ್ಮ ಖಾತೆಯಲ್ಲಿ ಹಣವಿಲ್ಲ (ಕ): ರಾ.7.10ಕ್ಕೆ.
ಸ್ಕ್ರೀನ್ 4	ಆಚಾರ್ಯ (ತೆ): ಬೆ.9.30ಕ್ಕೆ, ಕೆಜಿಎಫ್ 2 (ಕ): ಮ.12.35ಕ್ಕೆ, ಮೇಲೊಬ್ಬ ಮಾಯಾವಿ (ಕ): ಮ.3.55ಕ್ಕೆ, ಶೋಕಿವಾಲ (ಕ): ಸಂ.6.40ಕ್ಕೆ, ಕಾತುವಾಕುಲ ರೆಂಡು ಕಾದಲ್ (ತ): ರಾ.9.40ಕ್ಕೆ.

MVC ಮೈಸೂರು ವಿಷನ್ ಸಿನಿಮಾ — ದೂ : 0821–2973519	
ಸ್ಕ್ರೀನ್ 1	ರಾಜಿ (ಕ): ಬೆ.11ಕ್ಕೆ, ರನ್‌ವೇ 34 (ಹಿಂ): ಮ.1ಕ್ಕೆ, ಮ.3.55ಕ್ಕೆ, ಸಂ.6.40ಕ್ಕೆ, ಕಾತುವಾಕುಲ ರೆಂಡು ಕಾದಲ್ (ತ): ರಾ.9.30ಕ್ಕೆ.
ಸ್ಕ್ರೀನ್ 2	ಶೋಕಿವಾಲ (ಕ): ಬೆ.10.45ಕ್ಕೆ, ಸಂ.4.10ಕ್ಕೆ, ಹೀರೋಪಂತಿ 2(ಹಿಂ): ಮ.1.20ಕ್ಕೆ, ಸಂ.6.50ಕ್ಕೆ, ರನ್‌ವೇ 34 (ಹಿಂ): ರಾ.9.40ಕ್ಕೆ.
ಸ್ಕ್ರೀನ್ 3	ಕೆಜಿಎಫ್ 2 (ಕ): ಬೆ.10.45ಕ್ಕೆ, ಮ.1.55ಕ್ಕೆ, ಸಂ.6.30ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 4	ಹೀರೋಪಂತಿ 2(ಹಿಂ): ಬೆ.10.30ಕ್ಕೆ, ಕಾತುವಾಕುಲ ರೆಂಡು ಕಾದಲ್ (ತ): ಮ.1.15ಕ್ಕೆ, ಸಂ.6.40ಕ್ಕೆ, ಕ್ಷಮಿಸಿ ನಿಮ್ಮ ಖಾತೆಯಲ್ಲಿ ಹಣವಿಲ್ಲ (ಕ): ಸಂ.4.20ಕ್ಕೆ, ಶೋಕಿವಾಲ (ಕ): ರಾ.9.45ಕ್ಕೆ.

PVR CINEMAS ಪಿವಿಆರ್ ಸಿನಿಮಾಸ್
ಮೊ.ನಂ: 8951357139
ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕೆಜಿಎಫ್ 2 (ಕ): ಬೆ.8ಕ್ಕೆ, ಬೆ.9ಕ್ಕೆ, ಬೆ.10.30ಕ್ಕೆ, ಬೆ.11.15ಕ್ಕೆ, ಬೆ.11.30ಕ್ಕೆ, ಮ.12.30ಕ್ಕೆ, ಮ.2ಕ್ಕೆ, ಮ.2.45ಕ್ಕೆ, ಮ.3ಕ್ಕೆ, ಸಂ.4ಕ್ಕೆ, ಸಂ.5.30ಕ್ಕೆ, ಸಂ.6.15ಕ್ಕೆ, ಸಂ.6.30ಕ್ಕೆ, ರಾ.7.30ಕ್ಕೆ, ರಾ.9ಕ್ಕೆ, ರಾ.9.45ಕ್ಕೆ, ರಾ.10ಕ್ಕೆ, ಆರ್‌ಆರ್‌ಆರ್ (ಕ): ರಾ.9.30ಕ್ಕೆ, ಕೆಜಿಎಫ್ 2 (ಹಿಂ): ಬೆ.10.45ಕ್ಕೆ, ಸಂ.6ಕ್ಕೆ, ಆರ್‌ಆರ್‌ಆರ್ (ತೆ): ಮ.2.15ಕ್ಕೆ, ಬೀಸ್ಟ್ (ತ): ಬೆ.11.30ಕ್ಕೆ, ಮ.2.50ಕ್ಕೆ, ಸಂ.6.10ಕ್ಕೆ, ರಾ.9.30ಕ್ಕೆ.

ಗರುಡ ಮಾಲ್, 1ನೇ ಮಹಡಿ, ಮೊ.ನಂ: 9901373210

ಹರೀಶ ವಯಸ್ಸು 36 (ಕ): ಮ.3.30ಕ್ಕೆ, ಲವ್ ಮಾಕ್ಟೇಲ್ 2 (ಕ): ಮ.12.25ಕ್ಕೆ, ಮ.3.05ಕ್ಕೆ, ರಾಧೆಶ್ಯಾಮ್ (ತೆ): ಬೆ.9.15ಕ್ಕೆ, ಬೆ.10.20ಕ್ಕೆ, ಮ.12.10ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ಸಂ.6.05ಕ್ಕೆ, ರಾ.7.05ಕ್ಕೆ, ರಾ.9ಕ್ಕೆ, ರಾ.10ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಬೆ.11.55ಕ್ಕೆ, ಸಂ.5.55ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ರಾ.9.30ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.15ಕ್ಕೆ, ಮ.3.25ಕ್ಕೆ, ಸಂ.6.30ಕ್ಕೆ, ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಆಚಾರ್ಯ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೆಜಿಎಫ್–2 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಹೀರೋಪಂತಿ –2 (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಆಚಾರ್ಯ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಕೆಜಿಎಫ್–2(ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಕಾತ್ತು ವಾಲತ್ತಲ ರೆಂಡು ಕಾದಲ್ (ತ)	4 ಪ್ರದರ್ಶನಗಳು
ಸಂಗಂ	
ಶೋಕಿವಾಲಾ (ಕ)	4 ಪ್ರದರ್ಶನಗಳು
ಲಿಡೋ	
ಆಚಾರ್ಯ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಹೀರೋಪಂತಿ –2 (ಹಿ)	4 ಪ್ರದರ್ಶನಗಳು

ಬೊಮ್ಮನಾಯಕನಹಳ್ಳಿ ಡೈರಿ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ



ತಿ.ನರಸೀಪುರ, ಏ.30(ಎಸ್‌ಕೆ)– ತಾಲೂಕಿನ ಬೊಮ್ಮನಾಯಕನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಬಸವರಾಜು, ಉಪಾಧ್ಯಕ್ಷರಾಗಿ ಲಿಂಗಯ್ಯ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಗ್ರಾಮದ ಡೈರಿ ಸಭಾಂಗಣದಲ್ಲಿ ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆ ಸಂಬಂಧ ಕರೆಯಲಾಗಿದ್ದ ಚುನಾವಣಾ ಸಭೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಬಸವರಾಜು, ಉಪಾಧ್ಯಕ್ಷ ಸ್ಥಾನಕ್ಕೆ ಲಿಂಗಯ್ಯ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ ಪ್ರಭಾಮಣಿ ಅವಿರೋಧ ಆಯ್ಕೆಯನ್ನು ಘೋಷಿಸಿದರು. ಈ ವೇಳೆ ಡೈರಿಯ ಎಲ್ಲಾ 11 ಮಂದಿ ನಿರ್ದೇಶಕರು ಉಪಸ್ಥಿತರಿದ್ದರು.

ನೂತನ ಅಧ್ಯಕ್ಷ ಬಸವರಾಜು ಮಾತನಾಡಿ, ಸರ್ಕಾರದಿಂದ ದೊರೆಯುವ ಅನುದಾನವನ್ನು ಸದ್ಬಳಕೆ ಮಾಡಿ ಸಂಘವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಮೂಲಕ ಹಾಲು ಉತ್ಪಾದಕರಿಗೆ ಸಿಗಬಹುದಾದ ಸವಲತ್ತುಗಳನ್ನು ದೊರಕಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು. ನಿರ್ದೇಶಕರಾದ ರಾಜೇಶ್, ನಿಂಗಣ್ಣ, ಸಿದ್ದಯ್ಯ, ರಾಜಮ್ಮ, ರೇವಮ್ಮ, ಕಪನಯ್ಯ, ಹುಲ್ಲರೆಗೌಡ, ಶಂಕರ್, ಗುರು ಮಲ್ಲಯ್ಯ, ಕಾರ್ಯದರ್ಶಿ ಬಿ.ಎಂ.ಗವಿಯ, ಹಾಲು ಪರೀಕ್ಷಕ ಪುನೀತ್, ಮುಖಂಡರಾದ ಮಾಜಿ ಅಧ್ಯಕ್ಷ ಪುಟ್ಟಬುದ್ಧಿ, ಲೋಕೇಶ್, ಸಿದ್ದಯ್ಯ ಗ್ರಾಮಸ್ಥರು ಹಾಜರಿದ್ದರು.



ಮೈಸೂರು ತಾಲೂಕಿನ ದೂರ ಗ್ರಾಮದಲ್ಲಿ ಶನಿವಾರ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮವನ್ನು ವಿಪಕ್ಷ ನಾಯಕ ಸಿದ್ದರಾಮಯ್ಯ ಉದ್ಘಾಟಿಸಿದರು. ಈ ವೇಳೆ ಶಾಸಕ ಜಿ.ಟಿ.ದೇವೇಗೌಡ, ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮತ್ತಿತರರಿದ್ದರು.


ಕೋಟೆಯಲ್ಲಿ 10 ಡೈರಿ, ನಂದಿನಿ ಪಾರ್ಲರ್ ಉದ್ಘಾಟನೆ

ಪ್ರತಿಯೊಬ್ಬರೂ ಹೈನುಗಾರಿಕೆ ಮಾಡುವಂತೆ ಶಾಸಕ ಜಿಟಿಡಿ ಸಲಹೆ

ಹೆಚ್.ಡಿ.ಕೋಟೆ, ಏ.30(ಮಂಜು)– ಕೊರೊನಾ ವೇಳೆ ಸಾಫ್ಟ್‌ವೇರ್ ಸೇರಿದಂತೆ ಇತರೆ ಉದ್ಯೋಗಿಗಳು ಬೀದಿ ಪಾಲಾದರು. ಆದರೆ ಹೈನುಗಾರಿಕೆ ಮಾಡುತ್ತಿದ್ದ ರೈತರು ಗಟ್ಟಿಯಾಗಿ ನಿಂತರು ಎಂದು ಶಾಸಕ ಜಿ.ಟಿ.ದೇವೇಗೌಡ ತಿಳಿಸಿದರು.

ಪಟ್ಟಣದ ಹ್ಯಾಂಡ್‌ಪೋಸ್ಟ್ ಚರ್ಚ್ ಮೈದಾನದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಹೆಚ್.ಡಿ.ಕೋಟೆ, ಸರಗೂರು ತಾಲೂಕಿನ ವಿವಿಧ ಗ್ರಾಮಗಳ ನೂತನ 10 ಹಾಲು ಉತ್ಪಾದಕರ ಸಹಕಾರ ಸಂಘಗಳು ಹಾಗೂ ನೂತನ ನಂದಿನಿ ಪಾರ್ಲರ್ ಉದ್ಘಾಟಿಸಿ ಅವರು ಮಾತನಾಡಿದರು.

ರೈತರು ಕೃಷಿ ಜೊತೆಗೆ ಹೈನುಗಾರಿಕೆಯನ್ನೂ ಮಾಡಿ, ಪ್ರತಿಯೊಂದು ಕುಟುಂಬಕ್ಕೂ ಹೈನುಗಾರಿಕೆ ಕಾಮಧೇನು ಇದ್ದಂತೆ. ಕೂಲಿ ಕಾರ್ಮಿಕರೂ ಸಹ ಹೈನುಗಾರಿಕೆ ಮಾಡಬೇಕು. ಹೈನುಗಾರಿಕೆಯಿಂದ ತಾಲೂಕಿಗೆ ಪ್ರತಿವರ್ಷ 11 ಕೋಟಿ ರೂ. ಆದಾಯ ಬರುತ್ತಿದೆ. ಆದ್ದರಿಂದ ಹೈನುಗಾರಿಕೆ ಮಾಡಲು ಯೋಗ್ಯವಾದ ಈ ತಾಲೂಕಿನಲ್ಲಿ ಪ್ರತಿಯೊಬ್ಬರೂ ಹೆಚ್ಚಾಗಿ ಹಸು, ಎಮ್ಮೆ ಸಾಕಾಣೆ ಮಾಡುವಂತೆ ಸಲಹೆ ನೀಡಿದರು.



ಮೈಸೂರು ಭಾಗದಲ್ಲಿ ಪ್ರಥಮ ಬಾರಿಗೆ ಹೈನುಗಾರಿಕೆ ಒಕ್ಕೂಟ ರಚಿಸಿದ್ದು ಮಾಜಿ ಸಿಎಂ ಸಿದ್ದರಾಮಯ್ಯನವರು ಎಂದ ಅವರು, ರೈತರು ಸಾಲಸೋಲ ಮಾಡಿ ಲಕ್ಷಾಂತರ ರೂ. ಖರ್ಚು ಮಾಡಿ ಉತ್ತಮ ತಳಿಯ ಹಸುಗಳನ್ನು ಖರೀದಿಸುತ್ತೀರಿ. ಅವು ಕಾಯಿಲೆಯಿಂದ ಅಥವಾ ಅಪಘಾತದಿಂದ ಮೃತಪಟ್ಟರೆ ನಷ್ಟ ಅನುಭವಿಸಬೇಕಾಗುತ್ತದೆ. ಹೀಗಾಗಿ ನಿಮ್ಮ ಹಸುಗಳಿಗೆ ವಿಮೆ ಮಾಡಿಸಿ ಎಂದು ಮನವಿ ಮಾಡಿದರು.

ಇದೇ ವೇಳೆ ಸಹಕಾರ ಶಿಕ್ಷಣ ನಿಧಿ ಹಸ್ತಾಂತರಿಸಿದ ಶಾಸಕ ಜಿ.ಟಿ.ದೇವೇಗೌಡ, ಸ್ಥಳೀಯ ಶಾಸಕ ಅನಿಲ್ ಚಿಕ್ಕಮಾದು ಅವರು ಯುವಕರಾಗಿದ್ದು, ತಾಲೂಕಿನಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಹೀಗಾಗಿ ಮುಂಬರುವ ಚುನಾವಣೆಯಲ್ಲಿ ಅವರನ್ನು ಗೆಲ್ಲಿಸುವ ಮೂಲಕ ಅವರಿಗೆ ಮತ್ತೊಂದು ಅವಕಾಶ ಮಾಡಿಕೊಡುವಂತೆ ಮನವಿ ಮಾಡಿದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ತಾಲೂಕಿನ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಈಗಾಗಲೇ 11 ಲಕ್ಷ ಅನುದಾನ ನೀಡಿದ್ದೇನೆ. ಮುಂದೆಯೂ ಇನ್ನೂ ಹೆಚ್ಚಿನ ಸಹಕಾರ ನೀಡುತ್ತೇನೆ. ತಾಲೂಕಿನಲ್ಲಿ ಈ ಹಿಂದೆ 29 ಸಹಕಾರ ಸಂಘಗಳಿಂದ 6 ಸಾವಿರ ಲೀಟರ್ ಹಾಲು ಸಂಗ್ರಹವಾಗುತ್ತಿತ್ತು. ಇದೀಗ 159 ಸಂಘಗಳಿದ್ದು, ನಿತ್ಯ 70 ಸಾವಿರ ಲೀಟರ್ ಹಾಲು ಸಂಗ್ರಹವಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಮೈಮುಲ್ ಅಧ್ಯಕ್ಷ ಪಿ.ಎಂ. ಪ್ರಸನ್ನ, ನಿರ್ದೇಶಕರಾದ ಕೆ.ಈರೇಗೌಡ, ದಾಕ್ಷಾಯಿಣಿ, ಎ.ಐ.ಸೋಮಶೇಖರ್, ಕೆ.ಜಿ.ಮಹೇಶ್, ಕೆಎಸ್.ಕುಮಾರ್, ಸಿ.ಓಂಪ್ರಕಾಶ್, ಕೆ.ಉಮಾಶಂಕರ್, ಶಿವಗಾಮಿ, ಲೀಲಾ, ನೀಲಾಂಬಿಕೆ, ಸದಾನಂದ, ಮಹೇಶ್, ಎಚ್.ಡಿ. ರಾಜೇಂದ್ರ, ಜಿ.ಎನ್.ವಿಜಯಕುಮಾರ್, ಚೆಲುವರಾಜು, ಎಚ್.ಆರ್.ರಘು, ಸಣ್ಣತಮ್ಮೇಗೌಡ, ಶ್ರೀಕಂಠಸ್ವಾಮಿ, ಆರೀಫ್ ಇಕ್ಬಾಲ್ ಮುನಿರಾಜು, ಬಿ.ಸಿ.ಬಸಪ್ಪ, ರಾಮಣ್ಣ, ಸೋಮೇಶ್, ಬಿ.ಪಿ.ಭಾಸ್ಕರ್, ಪರಶಿವಮೂರ್ತಿ, ಪಿ.ರವಿ, ರಾಜು ವಿಶ್ವಕರ್ಮ ಇದ್ದರು.

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀ ಸಿ. ಮಂಚಯ್ಯ,
ರಿ। ಬ್ರಾಂಚ್ ಪೋಸ್ಟ್ ಮಾಸ್ಟರ್
ನಿಧನ: 20.04.2022

ಇವರು ದಿನಾಂಕ 20.4.2022ನೇ ಬುಧವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ 1.5.2022ನೇ ಭಾನುವಾರ ಮಧ್ಯಾಹ್ನ 11 ಗಂಟೆಗೆ ಮೃತರ ಸ್ವಗೃಹ #126, ಡಾ. ಬಿ.ಆರ್. ಅಂಬೇಡ್ಕರ್ ಕಾಲೋನಿ, ಬಾಬುರಾಯನಕೊಪ್ಪಲು, ಶ್ರೀರಂಗಪಟ್ಟಣ ತಾ।, ಮಂಡ್ಯ ಜಿಲ್ಲೆಯಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು: ಪತ್ನಿ ನಿಂಗಮ್ಮ ಮತ್ತು ಮಕ್ಕಳಾದ ಎಂ. ಚಂದ್ರಶೇಖರ್, ಶ್ರೀಮತಿ ಲಕ್ಷ್ಮಮ್ಮ, ಬಿ.ಎಂ. ಸೋಮಶೇಖರ, ಶ್ರೀಮತಿ ಗೌರಮ್ಮ, ಬಿ.ಎಂ. ಲಿಂಗರಾಜು, ಶ್ರೀಮತಿ ಎಂ. ದಾಕ್ಷಾಯಿಣಿ, ಎಂ. ಶಿವಕುಮಾರ, ಶ್ರೀಮತಿ ಗೀತಾ ಮತ್ತು ಮಗಳು ಬಿ.ಎಂ. ಲತಾಮಣಿ ಹಾಗೂ ಮೊಮ್ಮಕ್ಕಳು, ಮೃತರ ಸಹೋದರ ಹಾಗೂ ಬಂಧು ಮಿತ್ರರು.

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಇವರು ದಿನಾಂಕ 21.4.2022ನೇ ಗುರುವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ 1.5.2022ನೇ ಭಾನುವಾರ ಮಧ್ಯಾಹ್ನ 1 ಗಂಟೆಗೆ ಮೃತರ ಸ್ವಗೃಹ ಮೈಸೂರು ತಾ. ತೋಟಿಕೊಪ್ಪಲ್, ಜನತಾನಗರ, ಮಾರುತಿ ಟೆಂಟ್ ರಸ್ತೆ, 9ನೇ ಕ್ರಾಸ್, ಮನೆ ನಂ. 2042ರಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ನಾಗಪ್ಪ

ಭೋಜನ: ಮಧ್ಯಾಹ್ನ 1 ಗಂಟೆಗೆ

ದುಃಖತಪ್ತರು: ಪತ್ನಿ ದೊಡ್ಡತಾಯಮ್ಮ, ಉಮೇಶ, ಪದ್ಮ, ರಮೇಶ, ಸವಿತಾ, ನಾಗಮಣಿ, ಜ್ಯೋತಿ, ಅಳಿಯಂದಿರು, ಮೊಮ್ಮಕ್ಕಳು, ಕುಟುಂಬವರ್ಗ ಹಾಗೂ ತೋಟಿಕೊಪ್ಪಲ್ ಮತ್ತು ಜನತಾನಗರ ಗ್ರಾಮಸ್ಥರು.

5ನೇ ವರ್ಷದ ಸವಿನೆನಪು



ಶ್ರೀ ಮಹದೇವು
(ಲೇಟ್ ಕರಿ ಚಿನ್ನಪ್ಪನ ಬಸಪ್ಪನ ಮಗ, ಕೆ.ಜಿ.ಕೊಪ್ಪಲು)

ನೀವು ನಮ್ಮನ್ನಗಲಿ ಇಂದಿಗೆ 5 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ಇಂತಿ
ದುಃಖತಪ್ತರು:
ಪತ್ನಿ ಪುಟ್ಟಮ್ಮ ಹಾಗೂ ಕುಟುಂಬವರ್ಗದವರು
ಕೆ.ಜಿ.ಕೊಪ್ಪಲ್
ಮೈಸೂರು



Hi! TAXI

ONLY ONE WAY TAXI CHARGE

MYSORE to BANGALORE
City drop or Pick up

BANGALORE to MYSORE Airport drop or Pick up | Shakthi Nagar MYSURU

9880686345/ 9663362786

SITES FOR SALE

20 x 30 - 13.20 Lakhs
30 x 40 - 26.40 Lakhs
Bank Loan upto 75%, Ready for Registration, near Gurur Bus Stop, Ramabainagar, Mysore. DTCP approved (Corporation limits)
1.5 Kms from JP Nagar Ring Road.
Contact: **8660105902**

WANTED

INDUSTRIAL LAND WITH SHELTER
15,000 sq.ft. to 40,000 sq.ft.
Mysore surroundings or hebbal Industrial Area.
88844-42047 / 88845-51387

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು, ನನ್ನ ಕಕ್ಷಿದಾರರು ಅದರ ಮಾಲೀಕರಾದ, ಮೈಸೂರು ತಾಲ್ಲೂಕು, ಕಡಕೊಳ, ಜಯಪುರ ಹೋಬಳಿ, ಕುರುಬರ ಬೀದಿ, ನಂ. 363 ರ ನಿವಾಸಿಗಳಾದ, (1) ಹುಚ್ಚಯ್ಯ @ ಹುಚ್ಚಪ್ಪ ಬಿನ್ ದೊಡ್ಡ ತಮ್ಮಯ್ಯ ಗೌಡ, (2) ಶಿವಪ್ಪ ಬಿನ್ ಹುಚ್ಚಯ್ಯ @ ಹುಚ್ಚಪ್ಪ, (3) ಚಂದ್ರಶೇಖರ ಕೆ.ಹೆಚ್. ಬಿನ್ ಹುಚ್ಚಯ್ಯ @ ಹುಚ್ಚಪ್ಪ, (3) ಸಿದ್ದರಾಮು ಕೆ.ಹೆಚ್. ಬಿನ್ ಹುಚ್ಚಯ್ಯ @ ಹುಚ್ಚಪ್ಪ ಮತ್ತು ಇತರರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಭಾರೆಯ ವಿಚಾರದಲ್ಲಿ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು, ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರಾದ (1) ಹುಚ್ಚಯ್ಯ @ ಹುಚ್ಚಪ್ಪ ಬಿನ್ ದೊಡ್ಡ ತಮ್ಮಯ್ಯ, ಗೌಡ, (2) ಶಿವಪ್ಪ ಬಿನ್ ಹುಚ್ಚಯ್ಯ @ ಹುಚ್ಚಪ್ಪ, (3) ಚಂದ್ರಶೇಖರ ಕೆ.ಹೆಚ್. ಬಿನ್ ಹುಚ್ಚಯ್ಯ @ ಹುಚ್ಚಪ್ಪ, (4) ಸಿದ್ದರಾಮು ಕೆ.ಹೆಚ್. ಬಿನ್ ಹುಚ್ಚಯ್ಯ @ ಹುಚ್ಚಪ್ಪ ರವರುಗಳು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್

ಐಟಂ–1

ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಕಾನ್ಯ ಗ್ರಾಮದ ಸರ್ವೆ ನಂಬರ್, 39/2 ರಲ್ಲಿ ಕೈಗಾರಿಕೆ ಉದ್ದೇಶಕ್ಕಾಗಿ ಭೂಪರಿವರ್ತಿತ ಐದು ಗುಂಟೆ (0.05.00.00) ವಿಸ್ತೀರ್ಣದ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂಬರ್ : 48 ; ಪಶ್ಚಿಮಕ್ಕೆ: ಸರ್ವೆ ನಂಬರ್ : 38 ; ಉತ್ತರಕ್ಕೆ: ಸರ್ವೆ ನಂಬರ್ : 39/1 ; ದಕ್ಷಿಣಕ್ಕೆ: ಸರ್ವೆ ನಂಬರ್: 35.

ಐಟಂ–2

ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಕಾನ್ಯ ಗ್ರಾಮದ ಸರ್ವೆ ನಂಬರ್, 38/3 ರಲ್ಲಿ ಕೈಗಾರಿಕೆ ಉದ್ದೇಶಕ್ಕಾಗಿ ಭೂಪರಿವರ್ತಿತ ಒಂದು ಎಕರೆ ಏಳು ಗುಂಟೆ (1.07.00.00) ವಿಸ್ತೀರ್ಣದ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂಬರ್: 38/5 ; ಪಶ್ಚಿಮಕ್ಕೆ: ಸರ್ವೆ ನಂಬರ್ : 38/2 ; ಉತ್ತರಕ್ಕೆ: ಸರ್ವೆ ನಂಬರ್: 38/4 ; ದಕ್ಷಿಣಕ್ಕೆ: ಸರ್ವೆ ನಂಬರ್ : 36 ಮತ್ತು 37.

ಐಟಂ–3

ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಕಾನ್ಯ ಗ್ರಾಮದ ಸರ್ವೆ ನಂಬರ್ 38/5 ರಲ್ಲಿ ಕೈಗಾರಿಕೆ ಉದ್ದೇಶಕ್ಕಾಗಿ ಭೂಪರಿವರ್ತಿತ ಒಂದು ಎಕರೆ ಏಳು ಗುಂಟೆ (1.07.00.00) ವಿಸ್ತೀರ್ಣದ ಜಮೀನಿಗೆ ಚಕ್ಕುಬಂದಿ : ಪೂರ್ವಕ್ಕೆ: ರಸ್ತೆ ಮತ್ತು ಸರ್ವೆ ನಂಬರ್: 39 ; ಪಶ್ಚಿಮಕ್ಕೆ: ಸರ್ವೆ ನಂಬರ್: 38/3 ; ಉತ್ತರಕ್ಕೆ: ಸರ್ವೆ ನಂಬರ್ : 38/4 ; ದಕ್ಷಿಣಕ್ಕೆ: ಸರ್ವೆ ನಂಬರ್ : 36.

ಸಹಿ/– ಎಂ. ಎನ್. ಕಾಳಪ್ಪ, ವಕೀಲರು
Reg. No. KAR/1996/2000
#2-3, First Floor, PRI Complex, 67/7A, New Sayyaji Rao Road, Fort Mohalla, Mysore-570 004. Mob: 93431 12535.
Email: mnprakashkalappa@gmail.com
ಸ್ಥಳ: ಮೈಸೂರು
ದಿನಾಂಕ: 30.04.2022

ಬೇಕಾಗಿದ್ದಾರೆ

SSLC, PUC / ITI / DIPLOMA ಪಾಸ್ / ಫೇಲ್ ಆಗಿರುವ, 18 ರಿಂದ 25 ವಯೋಮಿತಿಯೊಳಗಿರುವ, ಹುಡುಗರಿಗೆ Apprentice / Company Trainee ಆಗಿ ಕೆಲಸ ಮಾಡಲು ಅವಕಾಶವಿದೆ. ಸಂದರ್ಶನದ ವೇಳೆ ಬೆಳಿಗ್ಗೆ 8–00 ರಿಂದ ಮಧ್ಯಾಹ್ನ 4–00 ರವರೆಗೆ ಸೋಮವಾರದಿಂದ ಶನಿವಾರದವರೆಗೆ ಈ ಕೆಳಕಂಡ ವಿಳಾಸಕ್ಕೆ ಅಥವಾ ದೂರವಾಣಿ ಸಂಖ್ಯೆಗೆ ಕೂಡಲೇ ಸಂಪರ್ಕಿಸುವುದು. ಸೌಲಭ್ಯಗಳು ಹೀಗಿದೆ ಆಕರ್ಷಕ ಶಿಶುಕ್ಷು ವೇತನ (ಸ್ಟೈಪೆಂಡ್), ಕ್ಯಾಂಟೀನ್ ವ್ಯವಸ್ಥೆ, ಸಮವಸ್ತ್ರ, ಶೂಸ್‌ಗಳನ್ನು ಹಾಗೂ ಇತರೆ ಸೌಲಭ್ಯಗಳನ್ನು ನೀಡಲಾಗುವುದು.

ಕೂಡಲೇ ಸಂಪರ್ಕಿಸಿ:

Rane
Rane (Madras) Ltd.
79/84, Hootagalli Industrial Area, Mysore - 570018
Mobile : 98807 46029
Ph: 0821-4005705

ಮೈಸೂರು ಮಿತ್ರ
ಜಾಹೀರಾತಿಗಾಗಿ ಸಂಪರ್ಕಿಸಿ:
Ph: 0821-2496522 / 23
Email: ad@mysurumithra.com

BOOKINGS OPEN FOR

Construction of Brand New Architecture Designed Houses
Architect Designed New Houses
MUDA APPROVED
20'x40' - 27.5 Lakhs
30'x40' - 40 Lakhs
Near St. Joseph's Central School, Hunsur Road, Mysore.
88840-01233 / 9740767576

BENGALURU

Flat for Rent
2BHK+ terrace
JP Nagar
3rd Phase, Opp Mini-Forest.
Ph- 9880829145

MUDA APPROVED SITE

Plot No. 269, (S/F) measuring 6x8 Mtrs.
AVAILABLE FOR SALE
in vinayaka garden city at Yelwala, Mysore. Genuine buyers only contact owner directly.
Contact: 9731769347 / 9902934365

5 ಎಕರೆ ಜಮೀನು ಮಾರಾಟಕ್ಕಿದೆ

ಕೈಗಾರಿಕೆ ಮತ್ತು ಗೋಡೌನ್ ಮಾಡಲು ಉತ್ತಮವಾಗಿದೆ, ಈಗಾಗಲೇ ಜಮೀನಿನಲ್ಲಿ ಫೆನ್ಸಿಂಗ್, 2 ಬೋರ್ ವೆಲ್, ತೆಂಗಿನ ಮತ್ತು ಹೆಬ್ಬೇವಿನ ಮರಗಳು, ಸಿಮೆಂಟ್ ಇಟ್ಟಿಗೆ ಫ್ಯಾಕ್ಟರಿ, ದೊಡ್ಡ ದೊಡ್ಡ ಖಾಲಿ ಷೆಡ್‌ಗಳು , 2500 ಅಡಿಗಳಷ್ಟು RCC ಕಟ್ಟಡ ಮತ್ತು ಇತರೆ ಸೌಲಭ್ಯಗಳಿರುತ್ತದೆ.
ಮೈಸೂರು ಅರಮನೆಯಿಂದ 15ಕಿಮಿ. Eagle Burg Enclave & Golf Village ನಿಂದ 2km ATME Engg.college ನಿಂದ 1 km ದೂರದಲ್ಲಿರುತ್ತದೆ.

ವಿಳಾಸ: ಚೈತನ್ಯ ಸ್ಕೂಲ್ ಆಫ್ ಎಕ್ಸಲೆನ್ಸ್, ಮೈಸೂರು–ಬನ್ನೂರು ಮುಖ್ಯರಸ್ತೆ, ಹಾರೋಹಳ್ಳಿ (ಮೆಲ್ಲಹಳ್ಳಿ) ಮೈಸೂರು–28

ಸಂಪರ್ಕಿಸಿ: **94482-47766**

HYLAND PROPERTIES

Hunsur-Mysore Highway, Mysuru
NISARGA PARADISE
DEVELOPED PLOTS
FULLY DEVELOPED
READY FOR REGISTRATION



BANK LOAN Available
HDFC BANK
LIC HFL
ICICI Bank
HURRY!! FEW LEFT
EXCITING OFFERS CALL US
9513301854
9513301855

WE ARE HIRING!



DIGITAL MARKETING STRATEGIST
Graduate with 2-3 years of Experience in Digital Marketing
Social Media I Event Management

SALES EXECUTIVES/CRM
Graduate with 2-3 years of Experience in sales.
Plots I Houses I Apartment I Construction Materials

Great opportunity with attractive salary and incentives
JOIN OUR TEAM
send your CV to
hr@gravityone.com

GRAVITY ONE | VANAJA
MYSORE'S LEADING CONSTRUCTION COMPANY

WANTED FOR A MANUFACTURING INDUSTRY IN HUNSUR TALUK

1. TRAINEE SUPERVISORS
Any Degree / Diploma
Age: 20-22 Years (Male Only)

2. TESTING LAB STAFF
Maths / Science Graduates
Age: 22-25 Years (Male / Female)

3. ITI MECHANICAL HOLDERS
Fresh / Experienced (Male Only)

Attractive salary for the right candidate

Apply to
reqteam1000@gmail.com
Call: 97311 19192

A Developer is Hiring MARKETING EXECUTIVES

For Selling of Sites.
Industry best package.
Call or WhatsApp:
76767 71396

House for Rent/Lease

Wanted a 3-4 BHK, Independent House with in 5 Km Radius from CBS.
Call:9482018500

ಮನೆ ಬಾಡಿಗೆಗೆ ಬೇಕಾಗಿದೆ

2 BHK Independent House with Garage
ಬಾಡಿಗೆಗೆ ಬೇಕಾಗಿದೆ
ಸಿದ್ಧಾರ್ಥನಗರ, ಜೆ.ಎಸ್.ಎಸ್ ಲೇಔಟ್, ರಾಘವೇಂದ್ರ ನಗರ, ಗಾಯತ್ರಿಪುರಂ ಸುತ್ತಮುತ್ತ
Call: 9513669333

2+1 OFFER FESTIVAL
SALE
SHOP NOW
FOR LIMITED DAYS ONLY
BUY 2 GET 1 FREE *
ON ALL IN- HOUSE BRANDS
SHOE WORLD
ESTD.1998
Best Brands at Your Feet...
T&C Apply
> OPP. MANNAR'S MARKET, SHIVARAMPET, MYSURU - 01. ✆: 2424282 11am To 1-30pm OPEN ON SUNDAYS

NGO SERVICES

* Regn. (NGO) Society / Trust.
* Renewal Documentation.
* Income Tax Regn. (NGO 12AA & 80G)
* Schools, Club, Temple Trust.

BUSINESS SOLUTIONS
Call: 9972 000 268

ಹೋಮ್ ನರ್ಸಿಂಗ್ ಸೇವೆ

ನಮ್ಮ ಸಂಸ್ಥೆಯಿಂದ ವೃದ್ಧರು, ಪಾರ್ಶ್ವ ಹಿಡಿದ ರೋಗಿಗಳು, ಕ್ಯಾನ್ಸರ್ ಪೀಡಿತರು, ಮಾರಣಾಂತಿಕ ಸ್ಥಿತಿಯಲ್ಲಿರುವ ರೋಗಿಗಳು, ಮರೆಗುಳಿ ರೋಗಿಗಳು, ಹಾಗೂ ಎಲ್ಲ ರೀತಿಯ ರೋಗಿಗಳ ಆರೈಕೆಗೆ ತರಬೇತಿ ಪಡೆದ ಪುರುಷ ಹಾಗೂ ಮಹಿಳಾ ಹೋಮ್ ನರ್ಸ್‌ಗಳನ್ನು ಸಂಸ್ಥೆಯ ಜವಾಬ್ದಾರಿಯೊಂದಿಗೆ ಕಳುಹಿಸಿ ಕೊಡಲಾಗುವುದು

9513253747, 7892480649



ಪ್ರಕೃತಿಯ ಆರಾಧನೆ, ಸಂಗೀತದ ಉಪಾಸನೆ

Allied Habitats, Mysuru ಸಂಸ್ಥೆಯ ಜೊತೆಗೆ

* ಪದ್ಮಶ್ರೀ ಸಾಲುಮರದ ತಿಮ್ಮಕ್ಕ
* ನೆನಪಿರಲಿ ಖ್ಯಾತಿಯ ನಟ ಪ್ರೇಮ್
* ಡಾ॥ ವಿ. ನಾಗೇಂದ್ರ ಪ್ರಸಾದ್, ಸಂಗೀತ ನಿರ್ದೇಶಕರು
* ಪ್ರೊ. ಎಂ. ಕೃಷ್ಣೇಗೌಡ, ವಿಚಾರವಂತ ವಾಗ್ಮಿಗಳು

ಸಾವಿರಾರು ಗಿಡಗಳನ್ನು ನೆಡುವ ಕಾರ್ಯಕ್ರಮಕ್ಕೆ May 1st ಸಂಜೆ 4 ಗಂಟೆಗೆ, Mysore Medical College Platinum Jubilee Auditorium, J.K. Grounds ಗೆ ಆಗಮಿಸಲಿದ್ದಾರೆ.

ಸ್ವರಾಂಜಲಿ ಸಂಗೀತ ತಂಡದಿಂದ ಡಾ॥ ವಿಷ್ಣುವರ್ಧನ್ ಹಿಟ್ಸ್ ರಸ ಸಂಜೆಗೆ ಮೈಸೂರಿನ ಎಲ್ಲಾ ಜನತೆಗೂ ಉಚಿತ ಪ್ರವೇಶ.

This AKSHAYA TRITIYA Bring Good Luck to Your Home

ಶಾರದ ಜ್ಯುಯಲರ್ಸ್
Sharada Jewellers

We Understand Jewels



Life Member
BIS 916 HALLMARK JEWELLERS

EXCITING FESTIVAL OFFERS


- Upto Rs.150/- off* Per Gram on gold Jewellery
- Upto Rs.4000/- per carat off* on Diamond Jewellery
- Upto Rs.3000/- per kg off* on Silver articles
- Upto 5% off* on Silver Jewellery
- Upto Rs.150/- off* Per Gram on Platinum Jewellery

*Condition Apply

*No Two Offers Can Be Clubbed | Open on Sundays also | Offer Valid till 5th May 2022

• Gold • Diamond • Platinum • Silver Articles • Silver Jewellery

#58, D Devaraja Urs Road, Mysuru
Ph : 0821- 4269550 / 2429055



ವೀರ ವನಿತೆ ರಾಣಿ ಚೆನ್ನಮ್ಮ ಸ್ವಯಂ ಸೇವಾ ಸಂಘ (ರಿ) ಮೈಸೂರು
ವತಿಯಿಂದ
ಶ್ರೀ ಬಸವೇಶ್ವರ ಸೇವಾ ಸಮಿತಿ, ರಾಮಕೃಷ್ಣನಗರ, ಮೈಸೂರು
ವೀರಶೈವ ಸ್ನೇಹ ಬಳಗ, ಕುವೆಂಪುನಗರ ಮೈಸೂರು, ಬಸವ ಬಳಗ ಸೇವಾ ಟ್ರಸ್ಟ್, ಬೋಗಾದಿ, ಮೈಸೂರು
ಬಿಇಎಂಎಲ್ ಬಸವ ಸಮಿತಿ, ಮೈಸೂರು, ಕದಳಿ ಮಹಿಳಾ ವೇದಿಕೆ, ಮೈಸೂರು
ಇವರುಗಳ ಸಂಯುಕ್ತಾಶ್ರಯದಲ್ಲಿ

ಶ್ರೀ.ಮ.ನಿ.ಪ್ರ.ಸ್ವ. ಡಾ॥ ಶ್ರೀ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ
115 ನೇ ಜಯಂತಿ ಮಹೋತ್ಸವದ ಅಂಗವಾಗಿ

ಗುರುವಂದನಾ ಕಾರ್ಯಕ್ರಮ

01-05-2022 ಭಾನುವಾರ

ಶ್ರೀ.ಮ.ನಿ.ಪ್ರ.ಸ್ವ. ಡಾ॥ ಶ್ರೀ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಪುತ್ಥಳಿಗೆ ವಿವಿಧ ಕಲಾತಂಡಗಳೊಂದಿಗೆ ಮೆರವಣಿಗೆಯಲ್ಲಿ ಚಾಲನೆ
ಮಧ್ಯಾಹ್ನ 3.00ಕ್ಕೆ
ಸ್ಥಳ: ಸಿದ್ಧಗಂಗಾ ಶ್ರೀ.ಮ.ನಿ.ಪ್ರ.ಸ್ವ. ಡಾ॥ ಶ್ರೀ ಶ್ರೀ ಶ್ರೀ ಶಿವಕುಮಾರಸ್ವಾಮೀಜಿ ವೃತ್ತ
ಜಗದಾಂಬ ಪೆಟ್ರೋಲ್ ಬಂಕ್ ಎದುರು, ಕುವೆಂಪುನಗರ, ಮೈಸೂರು

ಚಾಲನೆ
ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು
ಶ್ರೀ ಸಿದ್ಧಗಂಗಾ ಮಠಾಧ್ಯಕ್ಷರು, ತುಮಕೂರು

ಶ್ರೀ ವಿ. ಸೋಮಣ್ಣ
ವಸತಿ ಸಚಿವರು ಹಾಗೂ
ಜಿಲ್ಲಾ ಉಸ್ತುವಾರಿ ಸಚಿವರು, ಚಾ.ನಗರ

ವಿವಿಧ ಕ್ಷೇತ್ರದ ಜನಪ್ರತಿನಿಧಿಗಳು ಹಾಗೂ ವಿವಿಧ ಕ್ಷೇತ್ರದ ಅಧಿಕಾರಿಗಳು ಹಾಗೂ ಭಕ್ತ ವೃಂದದವರು

ಉದ್ಘಾಟನಾ ಸಮಾರಂಭ
ಸಂಜೆ 6.00ಕ್ಕೆ
ಸ್ಥಳ: ಎಸ್.ಆರ್. ಸುಬ್ಬರಾವ್ ಉದ್ಯಾನವನ
ನ್ಯೂ ಕಾಂತರಾಜೇ ಅರಸ್ ರಸ್ತೆ
ನಿವೇದಿತನಗರ, ಮೈಸೂರು

ದಿವ್ಯ ಸಾನ್ನಿಧ್ಯ
ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು
ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

ಗುರುವಂದನೆ
ನಾಡೋಜ ಡಾ. ಗೊ.ರು. ಚನ್ನಬಸಪ್ಪ
ಗೌರವ ಸಲಹೆಗಾರರು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು

ಮುಖ್ಯ ಅತಿಥಿಗಳು
ಶ್ರೀ ಜಿ.ಟಿ.ದೇವೇಗೌಡ
ಶಾಸಕರು, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ



ಎ.ಪಿ.ವಿರೂಪಾಕ್ಷ
ಪ್ರಧಾನ ಕಾರ್ಯದರ್ಶಿ, ವೀ.ವ.ರಾ.ಚೆ.ಸ್ವ.ಸೇ.ಸಂಘ

ಪ್ರಕಟಣೆ: ಕೆ.ವಿ. ಮಲ್ಲೇಶ್
ಉಪಾಧ್ಯಕ್ಷರು, ವೀ.ವ.ರಾ.ಚೆ.ಸ್ವ.ಸೇ.ಸಂಘ

